ಸಾಹಿತ್ಯ ದಾಸೋಹ - *179*

ದಾಸೋಹದ ವರದಿ

ಹಾಡು-ಹಾಸ್ಯ-ಕಾವ್ಯ-ಕಥನಗಳ ಭರಪೂರ ಸಂಚಿಕೆ!

179ನೇ ನೋಡಿಯೋ ಸಾಹಿತ್ಯ ದಾಸೋಹವು ಇದೇ ಜುಲೈ11ರ ಶನಿವಾರ ಸಂಜೆ 4.00 ಗಂಟೆಗೆ ಸರಿಯಾಗಿ ಆರಂಭಗೊಡಿತು. ಒಟ್ಟು 24 ಜನರು ತಮ್ಮ ವೈವಿಧ್ಯಮಯ ಕೃತಿಗಳನ್ನು ಇಲ್ಲಿ ಪ್ರಸ್ತುತ ಪಡಿಸಿದರು. ವಿಶೇಷವೆಂದರೆ, ಅವರಲ್ಲಿ ಮಹಿಳೆಯರು ಅಧಿಕ ಸಂಖ್ಯೆಯಲ್ಲಿ ಪಾಲ್ಗೊಂಡು ಸೈ ಎನಿಸಿಕೊಂಡದ್ದು! 24ರಲ್ಲಿ 14 ಜನ ಮಹಿಳೆಯರ ಪ್ರಸ್ತುತಿಗಳು ಇದ್ದವು.
ಹಾಡು-ಹಾಸ್ಯ-ಕಾವ್ಯ-ಕಥನಗಳೆಲ್ಲವೂ ಒಟ್ಟಿಗೇ ಮೇಳೈಸಿ ಎರಡೂವರೆ ತಾಸಿನವರೆಗೆ ಎಲ್ಲರ ಚಿತ್ತವನ್ನು ಕಾಯ್ದಿರಿಸಿಕೊಂಡಿತು. ಕೃತಿಗಳನ್ನು ಮಂಡಿಸಿದವರೂ ಸೇರಿದಂತೆ ಒಟ್ಟು ನೋಡುಗರ ಸಂಖ್ಯೆ 54ಕ್ಕಿಂತ ಅಧಿಕವಾಗಿದ್ದು ದಾಸೋಹದ ಸಫಲತೆಯನ್ನು ಸಾರುತ್ತದೆ.

ವಿನಾಯಕ ಸ್ತುತಿಯೊದಿಗೆ ದಾಸೋಹದ ಶುಭಾರಂಭ ಮಾಡಿದವರು ಶ್ರೀಮತಿ ಮಂಗಳಾ ನಾಡಿಗ್ ಅವರು. ಅದು ನಮ್ಮ ವೇದಿಕೆಯವರೇ ಆದ ಶ್ರೀಮತಿ ರತ್ನಾ ಮೂರ್ತಿ ಅವರು ಬರೆದ ಒಂದು ಭಕ್ತಿದಾಯಕ ಕೃತಿಯಾಗಿತ್ತು. ಪ್ರಾರ್ಥನೆಯ ಬೆನ್ನಲ್ಲೇ ಸೀತಾರಾಮು ಅವರ ಸರದಿ. ಕೆಲ ಉರ್ದು ಕವಿತೆಗಳ ಭಾವಾನುವಾದವೂ ಸೇರಿದಂತೆ, ತಮ್ಮ ರಚನೆಯ ಕನ್ನಡ ಶಾಯರಿಗಳನ್ನು ಲಹರಿಯಿಂದ ವಾಚನಗೈದ ಅವರು ಎಲ್ಲ ನೋಡುಗರಿಂದ 'ವಾಹ್...ವಾಹ್...' ಮೆಚ್ಚುಗೆಯನ್ನು ಯಥೇಚ್ಚ ಪಡೆದುಕೊಂಡರು!

ಚಾರಣ ಗುರುಗಳೂ, ನೋಡಿಯೋ ದಾಸೋಹದ ತಂತ್ರಜ್ಞರೂ ಆದ ಎಚ್ ಎಲ್ ಗುರುಪ್ರಸಾದ್ ಅವರು ತಾವು ಬಹುವಾಗಿ ಮೆಚ್ಚಿದ 'ಅರ್ಥ ಶಾಸ್ತ್ರಿ' ಕವಿತೆಯನ್ನು ಅಚ್ಚುಕಟ್ಟಾಗಿ ಓದಿದರು. ಪ್ರಾಚಾರ್ಯ ಎಚ್ಚೆಸ್ಕೆ ಕುರಿತು ಬೆಂ ಶ್ರೀ ರವೀಂದ್ರ ಬರೆದ ಜನಪ್ರಿಯ ಕವಿತೆ ಅದಾಗಿತ್ತು.

ವಿಠಲ ಇಜೇರಿ ಅವರು ತಾವು ಬಹಳ ಹಿಂದೆ ಭಾಗವಹಿಸಿದ್ದ ಅಧ್ಯಾತ್ಮಿಕ ಶಿಬಿರವೊಂದರಲ್ಲಿ ತಮಗೆ ಉಂಟಾದ ಅನುಭವಗಳನ್ನು ವಿವರಿಸಿದರು. ಕಟ್ಟು ನಿಟ್ಟು ಎಂಬಂತೆ ಅವರ ಬರಹ ಸರಿಯಾಗಿ ಆರು ನಿಮಿಷಗಳ ಅವಧಿಯದ್ದೇ ಆಗಿತ್ತು! ಶ್ರೀಮತಿ ಜಯಂತಿ ಮನೋಹರ ಅವರು ಕಾಳಿದಾಸನ ಕಾವ್ಯದಲ್ಲಿನ ಇಂದುಮತಿಯ ಸ್ವಯಂವರ ಸನ್ನಿವೇಶವನ್ನು ವಿವರಿಸಿದ್ದು ಆಸಕ್ತಿದಾಯಕವಾಗಿತ್ತು. ಈ ಪ್ರಸಂಗವನ್ನು ಮನೋ ವೈಜ್ಞಾನಿಕ ನೆಲೆಯಲ್ಲಿ ವಿಶ್ಲೇಷಿಸಬಹುದಾದಷ್ಟು ಸೂಕ್ಷ್ಮವಾಗಿದೆ ಎಂದು ಕಾಳಿದಾಸನ ಅಮೋಘ ಕಾವ್ಯ ಶಕ್ತಿಯನ್ನು ಬಣ್ಣಿಸಿದರು.

ಈಗಾಗಲೇ ದಾಸೋಹ ಬಂಧುಗಳಿಗೆ ಯಕ್ಷಗಾನದ ಸವಿಯನ್ನುಉಣಬಡಿಸಿರುವ ಶ್ರೀ ಗಣಪತಿ ಹೆಗಡೆ ಅವರು ಮಹಾಭಾರತ ಪ್ರಸಂಗ ಆಧಾರಿತ 'ಕರ್ಣ ಭೇದನ' ಎಂಬ ತಮ್ಮ ರಚನೆಯನ್ನು ವಾಚಿಸಿದರು. ಪ್ರಸಂಗವನ್ನು ಧ್ವನಿಯ ಏರಿಳಿತದೊಂದಿಗೆ ಸಾದರ ಪಡಿಸಿದ ಅವರು ಇಲ್ಲೂ ತನ್ಮಯತೆ ಮೆರೆದರು. (ಸರಿಯಾಗಿ ಆರು ನಿಮಿಷ) ಶ್ರೀಮತಿ ಶಾಂತಾ ನಾಗಮಂಗಲ ಅವರು ಕೈಲಾಸಂ ಕೃತಿಯ ಸ್ವಾರಸ್ಯವನ್ನು ನೋಡುಗರಿಗೆ ಯಶಸ್ವಿಯಾಗಿ ತಲುಪಿಸಿದರು. ಅವರ ವಾಚನ ವಿಧಾನವೂ ಉತ್ತಮವಾಗಿತ್ತು.

ಎಂ ಎಸ್ ನರಸಿಂಹಮೂರ್ತಿ ಅವರ ಹಾಸ್ಯ ಬರಹವು ಕಚಗುಳಿ ಇಡುತ್ತ ಸಖತ್ ಖುಷಿಯನ್ನು ಕೊಟ್ಟಿತು. ಎಲ್ಲೆಡೆ ವಕ್ಕರಿಸಿರುವ 'ಆನ್ ಲೈನ್ ಪಾಠ' ಎಂಬ ಲೇಟೆಸ್ಟ್ ಗುಮ್ಮ! ವಿಶ್ವ-ವಿಶಾಲೂ ಜೋಡಿ ಈ ಗುಮ್ಮನೊಟ್ಟಿಗೆ ಪಡುವ ಆಭಾಸ-ಅವಾಂತರಗಳು! ಎಲ್ಲವೂ ಮಜವಾಗಿದ್ದವು!

ಬಾಬರಿ ಮಸೀದಿ ಘಟನೆಯ ದಿನದಂದು ತಾವು ಎದುರಿಸಿದ ಆತಂಕದ ಸನ್ನಿವೇಶಗಳನ್ನು ಶ್ರೀಮತಿ ರತ್ನಾ ಮೂರ್ತಿ ಅವರು ಎಳೆ ಎಳೆಯಾಗಿ ಬಿಡಿಸಿ ವಿವರಿಸುತ್ತಿದ್ದರೆ, ನೋಡುಗರೂ ಉಸಿರು ಬಿಗಿ ಹಿಡಿದು ಕೇಳುವಂತಾಗಿತ್ತು. ಅಂದು ಮುಂಬೈನ ಪೇಟೆಯಲ್ಲಿದ್ದಾಗ

ಇದ್ದಕ್ಕಿದಂತೆ ಆರಂಭವಾದ ದೊಂಬಿ-ಗಲಭೆಗಳ ಮಧ್ಯೆ ಸಿಲುಕಿಕೊಂಡ ತಾವು ಕೊನೆಗೂ ಸುರಕ್ಷಿತ ಮನೆ ಸೇರಿದ ಪ್ರಸಂಗ ಮೈ ನವಿರೇಳುವಂತಿತ್ತು.

ಸತ್ಯ ಹರಿಶ್ಚಂದ್ರ ಚಿತ್ರದ 'ಕುಲದಲ್ಲಿ ಮೇಲ್ಯಾವುದೋ ಹುಚ್ಚಪ್ಪ, ಮತದಲ್ಲಿ ಕೀಳ್ಯಾವುದೋ' ಹಾಡಿನ ಧಾಟಿಯನ್ನು ಅನುಸರಿಸಿ ತಾವು ಬರೆದ 'ಕೊರೋನಾ ನೀತಿ ಪಾಠ' ಎಂಬ ಹಾಡನ್ನು ಎಲ್ಲರೂ ಗುನುಗುವಂತೆ ಹಾಡಿದವರು ಶ್ರೀ ವೆಂಕಟೇಶ ಮನು ಅವರು. ಡಾ. ಶುಭಶ್ರೀ ಪ್ರಸಾದ್ ಅವರು ತಮ್ಮ ಎರಡು ಕವನಗಳನ್ನು ಸುಸ್ಪಷ್ಟವಾಗಿ ಪ್ರಸ್ತುತ ಪಡಿಸಿದರು. ಶ್ರೀಮತಿ ಅನ್ನಪೂರ್ಣ ಅವರು ಪುರಂದರ ದಾಸರ ಕೀರ್ತನೆಯೊಂದನ್ನು ಹಾಡಿದರೆ, ಶ್ರೀಮತಿ ವಿಜಯಕುಮಾರಿ ಅವರು ಎರಡು ಪುಟ್ಟ ಕವನಗಳನ್ನೂ, ಶ್ರೀಮತಿ ಸರಸ್ವತಿ ನಟರಾಜ್ ಅವರು 'ಬೆಳಕು' ಮತ್ತು 'ವಿಪರ್ಯಾಸ' ಕವನಗಳನ್ನೂ, ಶ್ರೀಮತಿ ಮನೋರಮ ಅವರು ಕೊರೋನಾ ಕುರಿತ ಸ್ವರಚಿತ ಕವನವನ್ನೂ ವಾಚಿಸಿದರು., ಶ್ರೀಮತಿ ಮಾಲತಿ ಶ್ರೀನಿವಾಸನ್ ಅವರು ದ ರಾ ಬೇಂದ್ರೆ ಅವರ ಹಾಡನ್ನು ಸುಶ್ರಾವ್ಯವಾಗಿ ಹಾಡಿದರು.

ಶ್ರೀಮತಿ ಶೀಲಾ ಅರಕಲಗೂಡು ಅವರು ದೇಹದ ಅಂಗಾಂಗಗಳು ಎಂಬ ಲಘು ಬರಹವನ್ನು ಸ್ವಾರಸ್ಯಕರವಾಗಿ ಮಂಡಿಸಿದರು. ಹುವಾಶ್ರೀ ಪ್ರಕಾಶ್ ಅವರು 'ಕಾವ್ಯಗಳಲ್ಲಿ ಪ್ರತಿಭಟನೆಯ ಸೊಲ್ಲು' ಎಂಬ ಪ್ರಬಂಧ ಮಂಡಿಸಿದರು. ಸಾಮಾಜಿಕ ಜವಾಬ್ದಾರಿಯುಳ್ಳ ಕವಿಗಳು ತಮ್ಮ ಪ್ರತಿಭಟನೆಯನ್ನು ಕಾವ್ಯದ ಮುಖೇನ ಹೊರಹಾಕಿದ ಸನ್ನಿವೇಶಗಳನ್ನು ಉದಾಹರಿಸಿದ ಹುವಾಶ್ರೀ " ಅವರು, ಬೆಂಶ್ರೀ ಅವರಿಂದ ರಂಜಾನ್ ದರ್ಗಾ ವರೆಗಿನ ಹಲವಾರು ಕವಿತೆ ಸಾಲುಗಳನ್ನು ನೆನಪಿಸಿಕೊಂಡರು.

ಈ ಬಾರಿಯ ದಾಸೋಹದಲ್ಲಿ ಹಾಸ್ಯ/ವಿಡಂಬನೆಗಳು ಜೋರಾಗಿ ವಿಜೃಂಭಿಸಿದವು. ವೇದಿಕೆಯಲ್ಲಿ ಚೆನ್ನಾಗಿ ಕಾಣಿಸಿಕೊಳ್ಳಲು 'ಸೌಂದರ್ಯ ವರ್ಧನೆಯನ್ನಾದರು ಮಾಡಿಕೊಳ್ಳೋಣ-ಎಂದರೆ ಬ್ಯೂಟಿ ಪಾರ್ಲರ್ ಗಳು ಮುಚ್ಚಿಕೊಂಡಿವೆಯಲ್ಲಾ' ಅಂತ ನಮ್ಮ ಸಂಚಾಲಕರು ಹಳಹಳಿಸಿದ್ದನ್ನೇ ವಸ್ತುವನ್ನಾಗಿಸಿ ಅರುಣ ಜಿ ವಿ ಅವರು ಬರೆದ 'ಚೆಂಗನ ಆನ್ ಲೈನ್ ಬ್ಯೂಟಿ ಕೋರ್ಸು' ತನ್ನ ತಾಜಾತನದಿಂದ ಗಮನ ಸೆಳೆಯಿತು. ಈ ಮಧ್ಯೆ 178 ನೇ ನೋಡಿಯೋ ದಾಸೋಹದ ಪಿಡಿಎಫ್ ಪ್ರತಿಗಳನ್ನು ಸಂಚಾಲಕರಾದ ಶ್ರೀ ಬೆಂ ಶ್ರೀ ರವೀಂದ್ರ ಮತ್ತು ಶ್ರೀ ಕೆ ಎನ್ ಮಹಾಬಲ ಅವರು ಬಿಡುಗಡೆಗೊಳಿಸಿದರು.

ಶ್ರೀಮತಿ ರೇಣುಕಾ ದೇಸಾಯಿ ಅವರ 'ವೃಕ್ಷದ ದುಃಖ ದುಮ್ಮಾನ' ಬರಹ ಪರಿಸರ ಕಾಳಜಿಯನ್ನು ಪ್ರತಿಬಿಂಬಿಸಿತು. ಶ್ರೀಮತಿ ಶ್ರವಣ ಕುಮಾರಿ ಅವರು ಈ ಬಾರಿ ಆಯ್ದುಕೊಂಡದ್ದೂ ಹಾಸ್ಯ ಲೇಪನವುಳ್ಳ ಬರಹವನ್ನು. ಜಾಗತಿಕ ಆತಂಕಕ್ಕೆ ಕಾರಣವಾಗಿರುವ ಕೊರೋನಾ ನಮ್ಮದಿನನಿತ್ಯದ ಜೀವನದಲ್ಲಿ ಎಷ್ಟೊಂದು ಬದಲಾವಣೆಗೆ ಮತ್ತು ಏನೆಲ್ಲ ಅವಾಂತರಗಳಿಗೆ ಕಾರಣವಾಗಿದೆ ಎಂಬ ಸಂಗತಿಯನ್ನು ಅವರು 'ಕೊರೋನಾ ಪುರಾಣ'ದಲ್ಲಿ ಚೆನ್ನಾಗಿ ಬಣ್ಣಿಸಿದ್ದಾರೆ. ಈ ದಾಸೋಹದಲ್ಲಿ ಕೊರೋನಾ ಕುರಿತ ಪ್ರಸ್ತುತಿಗಳೂ ಅಧಿಕವೆಂದೇ ಹೇಳಬೇಕು. (ಒಟ್ಟು 4)

ಸಮ್ಮೋದ ವಾಡಪ್ಪಿ ಅವರು 'ಕೆರೆಗಳ ಕಾಪಾಡು' ಮತ್ತು 'ಬಾಳು ಜಗದಲಿ' ಎಂಬ ಕವನಗಳನ್ನು ವಾಚಿಸಿದರೆ, ಕೊನೆಯಲ್ಲಿ ಎಂ ಜಿ ವೆಂಕಟೇಶ್ ಮೂರ್ತಿ ಅವರು ಕೊರೋನಾ ಕುರಿತು 'ಬದಲಾವಣೆ' ಮತ್ತು 'ಕಾಫಿ ಎಂದಿಗೂ ಬಿಡಬೇಡ' ಎಂಬ ಎರಡು ಕವನಗಳ ವಾಚನಗೈದರು. ಶ್ರೀಮತಿ ಗೌರಾಂಬ ಅವರ ಪ್ರವಾಸ ಕಥನದ ಎರಡನೇ ಕಂತನ್ನು ವಿವರಿಸುತ್ತ,ಹಲವಾರು ಆತಂಕದ ಸನ್ನಿವೇಶಗಳನ್ನು ನೆನೆಸಿಕೊಂಡರು. ಆರಂಭದಲ್ಲಿ ಶ್ರೀ ಬೆಂ ಶ್ರೀ ರವೀಂದ್ರ ಅವರಿಂದ ಸ್ವಾಗತ, ಕೊನೆಯಲ್ಲಿ ಶ್ರೀ ಸಮ್ಮೋದ ವಾಡಪ್ಪಿ ಅವರಿಂದ ವಂದನಾರ್ಪಣೆ ಜರುಗಿತು. ತಾಂತ್ರಿಕ ತಜ್ಞರಾದ ಶ್ರೀ ಗುರುಪ್ರಸಾದ್ ಮತ್ತು ಗುರುರಾಜ ಶಾಸ್ತ್ರಿ ಅವರ ಸಮರ್ಥ ನಿರ್ವಹಣೆಯಲ್ಲಿ ಯಾವ ಅಡಚಣೆಯೂ ಇರಲಿಲ್ಲ. ಎಲ್ಲ ನೋಡುಗರ ಶಿಸ್ತು ಶ್ಲಾಘನೀಯ.

-ಶ್ರೀನಿವಾಸ ಗಟ್ಟು,
ರಾಯಚೂರು.

ವಿನಾಯಕ ಸ್ತುತಿ

ರಾಗ: ಷಣ್ಮುಖಪ್ರಿಯ. ಆದಿತಾಳ

ಮುದ್ದು ವಿನಾಯಕನೆ ಸಿದ್ಧಿ ಪ್ರದಾಯಕನೆ
ಒದ್ದು ಕಳೆ ವಿಘ್ನಗಳ ಗಜವದನನೆ
||ಪಲ್ಲವಿ||

ಬದ್ಧ ವೈರಿಗಳನ್ನು ಒಂದಾಗಿ ಹಿಡಿದಿರುವೆ
ಸಿದ್ಧಿ ಗಣಪನೆ ಕಂಡು ಬೆರಗಾದೆನು
||ಅ.ಪ||

ಉದರಬಂಧವ ಮಾಡಿ ಉರಗನನು ಹಿಡಿದು
ಬೆದರಿದ ಮೂಷಿಕ ವನ್ನೇರಿ ನಡೆದು
ಚದುರತನದಲಿ ತಂದೆ ತಾಯ್ಗಳನು ಬಲವಂದು
ಮಧುರ ಫಲವನು ಗೆದ್ದ ಲಂಬೋದರ

ಹಲವು ನಾಮಗಳಲ್ಲಿ ಪೂಜೆ ಗೊಂಬುವ ಸ್ವಾಮಿ
ವಿಲಯ ರುದ್ರನ ಸುತನೆ ಶಿವಸೂನುವೆ
ಮಲೆತ ತಾರಾಧಿಪನ ಮದಕಳೆದ ಬೆನಕನೆ
ಲಲಿತೆ ಲಾಲಿತ ಕಂದ ಚೆನ್ನಕೇಶವ ಪ್ರಿಯನೆ

* * * * *

ರಚನೆ: ರತ್ನಾ ಮೂರ್ತಿ
ಗಾಯನ: ಮಂಗಳಾ ನಾಡಿಗ್

ಅರ್ಥಶಾಸ್ತ್ರ

ಅರ್ಥದೊಳಗರ್ಥವ ಶೋಧಿಸಿ
ಅರ್ಥಜಗದ ಜಂಗೀ ಕುಸ್ತಿಯ
ಅರ್ಥವ ಬಿಡಿಸಿ
ಮಾನ್ಯ ಸಾಮಾನ್ಯನ ಬದುಕಿಗೆ ಅರ್ಥ ಕೊಟ್ಟೆ ವಿಶ್ವವ್ಯಾಪಾರಾರ್ಥ,
ವಿಶ್ವಾಸಾರ್ಥ
ವಿಶ್ವಾರ್ಥ, ಭಾವಾರ್ಥ, ಧ್ವನ್ಯಾರ್ಥಗಳ ಮರ್ಮಾರ್ಥಕ ಅಕ್ಷರಕೊಟ್ಟೆ.

'ಆರ್ಥಿಕ ಚಿಂತನೆಯ ಅಂಗಳ ಬಿಡಿಸಿಕೊಟ್ಟೆ ಗೋಳಾರ್ಥವ ತಿರುಗಿಸುತ
ಅರ್ಧಗೋಳವ ಸೃಜಿಸಿಕೊಟ್ಟೆ.

ಅರ್ಥದಲ್ಲಿ ಮುಳುಗಿದವನರ್ಥ
ಅರ್ಥನುಂಗುವ ಅರ್ಥ
ಕೆಳಗೆ ಬಿದ್ದವನರ್ಥ, ಮೇಲೆ ಎದ್ದವನರ್ಥ ಅರ್ಥಮಂತ್ರಕೆ ಭಾಷ್ಯ ಬರೆದುಕೊಟ್ಟೆ
ಕ್ರಿಯಾಪದವಿಲ್ಲ; ವಾಕ್ಯಾರ್ಥ ಹಿತವಿಲ್ಲ ಮೂರಕ್ಷರದಿ ಅರ್ಥಪೂರ್ಣವಿಲ್ಲ
ಮೂಗೆಳದ ಪಂಡಿತಾರ್ಥರಿಗೆ
ಪೂರ್ಣಾರ್ಥವ ತೋರಿಸಿಕೊಟ್ಟೆ

ಪ್ರತಿ ಪದವ ಮುದ್ದಿಸಿ
ಮೈದಡವಿ ಪದಪದಕೆ
ಅರ್ಥ ತುಂಬಿಸಿಕೊಟ್ಟೆ.
ಹೆಜ್ಜೆ ಹೆಜ್ಜೆಯಲಿ ಅರ್ಥವಂತಿಕೆ
ಜೀವನ ಪರಮಾರ್ಥ ಧೀಮಂತಿಕೆ
ಬಾಡದ ಬಗ್ಗದ ಸತ್ಯವಂತಿಕೆ
ಚಲಾರ್ಥಕೆ ಅರ್ಥ ಎತ್ತ ಎಚ್ಚೆಸ್ಕೆ
ಗೀತಾರ್ಥದ ಸಾರ ಸಗ್ಗಳಿಕೆ
ಎಚ್ಚೆಸ್ಕೆ ಅರ್ಥೈಸಿದ್ದು ಮನಕರ್ಥವಾದದ್ದು ಬಾಳಿಗರ್ಥವು ಎಂದು
ಆರ್ಥಕೆ ಬಾಳಲ್ಲವೆಂದು
ಅರ್ಥಕೆ ಅರ್ಥಕಟ್ಟುವ ಎಚ್ಚೆಸ್ಕೆ
ಅರ್ಥಕ್ಕೆ ಕಟ್ಟು ಬೀಳದೇ ಬದುಕಿರುತ್ತಿರುವುದೇ ಹೆಗ್ಗಳಿಕೆ
ಅರ್ಥ ಹುಡುಕುವುದಕ್ಕೆ ನಮಗೆ ಹಚ್ಚಿ ಅರ್ಥವತ್ತಾಗಿ ನಗುವುದೇ ಎಚ್ಚೆಸ್ಕೆ ||

(ದಿನಾಂಕ ೦೨.೦೨.೨೦೦೨ ರಂದು ಭಾರತೀಯ ಸ್ಟೇಟ್ ಬ್ಯಾಂಕ್, ಪ್ರಧಾನ ಕಾರ್ಯಾಲಯ ಅಧಿಕೃತ ಭಾಷಾ ವಿಭಾಗದ ಬೆಳ್ಳಿ ಕಮ್ಮಟದ ಸಂದರ್ಭದಲ್ಲಿ ಪ್ರಾಚಾರ್ಯ ಎಚ್ಚೆಸ್ಕೆಯವರನ ಸನ್ಮಾನಿಸಿದಾಗ ವಾಚಿಸಿದ ಕವನ.)

ಬೆಂ.ಶ್ರೀ. ರವೀಂದ್ರ

ಕವನ ವಾಚಿಸಿದವರು - ಗುರುಪ್ರಸಾದ್ ಹಾಲ್ಕುರಿಕೆ

ಒಂದು ಕೊರೋನಾ ಪುರಾಣ

ಕೊರೋನಾ ಬಂದಾಗಿನಿಂದ ದೇಶದೆಲ್ಲರ ನಿತ್ಯಜೀವನದಲ್ಲೂ ಸಾಕಷ್ಟು ಬದಲಾವಣೆಯಾಗಿದ್ದರೂ ನಮ್ಮ ಬೀದಿಯ ಜನಕ್ಕೆ ಅಷ್ಟಾಗಿ ಅದರ ಬಿಸಿ ತಟ್ಟಿರಲಿಲ್ಲವೆಂದೇ ಹೇಳಬಹುದು. ಎಲ್ಲೋ ಅಲ್ಪ ಸ್ವಲ್ಪ ಜೀವನ ವಿಧಾನದ ಬದಲಾವಣೆಯೊಂದಿಗೆ ನಾವು ಹೆಚ್ಚು ಕಮ್ಮಿ ನಮ್ಮ ಎಂದಿನ ದಿನಚರಿಯನ್ನೇ ಪಾಲಿಸುತ್ತಿದ್ದೆವು. ಅದು ಹೇಗೆ ಅಂತೀರಾ?! ಬೀದಿಯ ಮಧ್ಯದಲ್ಲೇ ಹಾಲು, ಮೊಸರು, ಅಕ್ಕಿ, ಬೇಳೆ, ಎಣ್ಣೆ ಇಂತಹ ದಿನಸಿ ಪದಾರ್ಥಗಳಿಂದ ಹಿಡಿದು ಗೆಜ್ಜೆವಸ್ತ್ರದಿಂದ ಮಾಸ್ಕ್ವರೆಗೆ ಎಲ್ಲ ಸರ್ವೋಪಯೋಗಿ ವಸ್ತುಗಳನ್ನೂ ತನ್ನ ಪುಟ್ಟ ಮಳಿಗೆಯಲ್ಲಿಟ್ಟುಕೊಂಡಿರುವ ನಮ್ಮ ಅಮರನಾಥನ ಅಂಗಡಿ ಇದೆ. ಅಂಗಡಿಯ ಪಕ್ಕದ ಬೀದಿಯಲ್ಲೇ ಮನೆಯಿರುವುದರಿಂದ ಇಷ್ಟು ದಿನ ಬೆಳಗ್ಗೆ ಆರೂವರೆಗೆ ತೆರೆದರೆ ಮಧ್ಯಾಹ್ನ ಎರಡು ಗಂಟೆ ಕಾಲ ಮಾತ್ರ ಮುಚ್ಚುತ್ತಿದ್ದ ಅಂಗಡಿ ಮತ್ತೆ ರಾತ್ರಿ ಹತ್ತರವರೆಗೆ ಕಡ್ಡಾಯವಾಗಿ ತೆರೆದಿರುತ್ತಿತ್ತು. ಆದರೆ ಈಗ ಅದು ಬದಲಾಗಿ ಬೆಳಗ್ಗೆ ಎರಡು ಗಂಟೆ ಮತ್ತು ಸಂಜೆ ಎರಡು ಗಂಟೆ ಮಾತ್ರಾ ತೆರೆಯುವ ವೇಳಾಪಟ್ಟಿಯನ್ನು ಅವನು ನಿರ್ಧರಿಸಿಕೊಂಡಿದ್ದಾನೆ. ಇದುವರೆಗೂ ನಾವು ಎಣ್ಣೆ ಒಗ್ಗರಣೆಗೆ ಇಟ್ಟು ನಂತರ ಸಾಸುವೆ ತರಲು ಓಡುತ್ತಿದ್ದು, ಅಥವಾ ಬಾಗಿಲಲ್ಲೇ ನಿಂತು ಕೂಗಿ ಕರೆದು ತರಿಸಿಕೊಳ್ಳುತ್ತಿದ್ದು, ತರಕಾರಿ ಇಲ್ಲದಿದ್ದಾಗಲೂ ಹೇಗೂ ಅವನಂಗಡಿಯಲ್ಲಿ ಈರುಳ್ಳಿ, ಆಲೂಗಡ್ಡೆ, ಟೊಮೇಟೋ, ಹಸಿಮೆಣಸಿನಕಾಯಿ ಇಂತಹ ಒಂದಷ್ಟು ಅಡುಗೆಯಾಧಾರ ಸಾಮಾನುಗಳು ಇರುತ್ತವಲ್ಲ ಎಂದು ನಿಶ್ಚಿಂತೆಯಾಗಿದ್ದು, ತಿಂಡಿಯೇನೆಂದು ನಿರ್ಧಾರ ಮಾಡಿಲ್ಲದಿದ್ದರೆ 'ಹೇಗೂ ನಮ್ಮ ಅಮರಿ ಐಡಿ ದೋಸೆ/ಇಡ್ಲಿ ಹಿಟ್ಟು ಇಟ್ಟಿರುತ್ತಾನೆ ತಂದು ಮಾಡಿಕೊಂಡರಾಯಿತು' ಎಂದು ಒಂದುರೀತಿ ಅದನ್ನು ನಮ್ಮ ಮನೆಗಳ ವಿಸ್ತರಿಸಿದ ಉಗ್ರಾಣವನ್ನು ಮಾಡಿಕೊಂಡಿದ್ದು ನಿಶ್ಚಿಂತರಾಗಿದ್ದೆವು. ಇಂತಹ ನಮ್ಮ ಉದಾಸ ಮನೋಭಾವಕ್ಕೆ ಧಕ್ಕೆ ಬಂದು ಈಗ ಅಂಗಡಿ ತೆರೆದಿರುವ ವೇಳೆಯಲ್ಲೆ ಮೊದಲೇ ಯೋಚಿಸಿಕೊಂಡು ಬೇಕಾದ ಸಾಮಾನುಗಳ ಪಟ್ಟಿಯನ್ನು ನೆನಪಿನಲ್ಲಿಟ್ಟುಕೊಂಡು ತಂದುಕೊಳ್ಳಬೇಕಾಯಿತು. ಹಾಗೆಯೇ ಪೂರೈಕೆಯಿಲ್ಲದೆ ಎಷ್ಟೋ ಸರಕುಗಳು ಅವನಲ್ಲಿ ಮುಗಿದುಹೋದರೆ ಒಂದೆರಡು ದಿನಗಳಲ್ಲಿ ಸಿಗುವುದಿಲ್ಲವೆನ್ನುವುದೂ ನಿಶ್ಚಿತವಾಯಿತು. ಹಾಗೆಂದು ನಾವು ಇಬ್ಬರಿರುವ ಮನೆಯಲ್ಲಿ ಎಷ್ಟನ್ನು, ಏನೇನನ್ನು ಮನೆಯೊಳಗೆ ಶೇಖರಿಸಿಟ್ಟುಕೊಳ್ಳಲು ಸಾಧ್ಯ? ಈಗಲೇ ಒಂದಷ್ಟು ಕಡಿಮೆ ಉಪಯೋಗಿಸುವ ಸರಕುಗಳು ಹುಳುಕು, ಮುಗ್ಗುಲು ಹಿಡಿದು ಆಗಾಗ ಕಸದ

ಬುಟ್ಟಿಯ ಸ್ನೇಹವನ್ನು ಮಾಡಿಕೊಳ್ಳುತ್ತಿರುತ್ತವೆ. ಅಂತಹದರಲ್ಲಿ ತಂದೊಟ್ಟಿಕೊಳ್ಳುವುದು ಯಾವ ಜಾಣತನ? ಕಷ್ಟ ಪಡುವವರಿಗೆ ಸುಖಕ್ಕೆ ಒಗ್ಗಿಕೊಳ್ಳುವುದು ಸುಲಭ; ಸುಖವೇ ಅಭ್ಯಾಸವಾಗಿದ್ದವರಿಗೆ ಇಂತಹ ಪರಿಸ್ಥಿತಿಗೆ ಹೊಂದಿಕೊಳ್ಳಲು ಸುಲಭವೇ?! ಏನೋ‘ ಜಗದ ಕಷ್ಟದ ಮುಂದೆ ನಮ್ಮದೇನಲ್ಲ’ ಎನ್ನುವ ವೇದಾಂತಕ್ಕೆ ಬಾಗಿ ಒಗ್ಗಿಸಿಕೊಂಡೆವು ಎನ್ನಿ.

ನಮ್ಮ ಮನೆಯ ಬಲಪಕ್ಕದಲ್ಲೇ ಇದ್ದ ತರಕಾರಿ ಅಂಗಡಿಯ ನಾರಾಯಣನಿಗೆ ತಮಿಳುನಾಡಿನಲ್ಲಿ ಒಂದಷ್ಟು ಭೂಮಿಕಾಣಿ ಇದೆಯಂತೆ. ಹಾಗಾಗಿ ಅವನು ಆಗಾಗ್ಗೆ ಊರಿಗೆ ಓಡುತ್ತಿದ್ದರೂ ಅವನ ಹೆಂಡತಿ ಮೀನಾಕ್ಷಿ ಅಂಗಡಿಯನ್ನು ಚೆನ್ನಾಗೇ ನಿಭಾಯಿಸಿಕೊಂಡು ಹೋಗುತ್ತಾಳೆ. ನಾರಾಯಣನಾದರೋ “ಹತ್ತು ಗ್ರಾಂ ಹೆಚ್ಚು ಹಾಕಿದರೂ ಪರವಾಗಿಲ್ಲ; ಕಮ್ಮಿ ಮಾತ್ರಾ ಕೊಡಲ್ಲ ಆಂಟಿ” ಎನ್ನುವ ವ್ಯಾಪಾರಿ ಧರ್ಮದ ನಿಯತ್ತಿನವನು. ಅದೇ ಮೀನಾಕ್ಷಿಯಾದರೆ ಇಪ್ಪತ್ತು ಗ್ರಾಂ ಹುಳಿತದ್ದೋ, ಬಲಿತದ್ದೋ ಹಾಕಿ ಆ ಧರ್ಮವನ್ನು ತನ್ನದೇ ರೀತಿಯಲ್ಲಿ ನಿಭಾಯಿಸಿಬಿಡುತ್ತಾಳೆ! ಎಷ್ಟೋ ಸಲ ಕೆಳಗೆ ಇಳಿಯಲೂ ಸಮಯವಾಗದೆ ಬಾಲ್ಕನಿಯಿಂದಲೇ ಕರೆದು ಬುಟ್ಟಿಯನ್ನು ಇಳಿಬಿಟ್ಟು ಅವನಂಗಡಿಯಿಂದ ತರಕಾರಿಯನ್ನು ಮೇಲಕ್ಕೆಳೆದುಕೊಂಡಿದ್ದೂ ಇದೆ. ಯಾವಾಗಲಾದರೂ ಸಂಸಾರ ಸಮೇತ ವಾರ, ಹತ್ತು ದಿನ ಊರಿಗೆ ಹೊರಡುವಂತ ಸಂದರ್ಭ ಬಂದಲ್ಲಿ ನಾರಾಯಣ ಅಂಗಡಿಯ ತರಕಾರಿಯನ್ನೆಲ್ಲಾ ಒಂದು ರೀತಿ ಡಿಸ್ಕೌಂಟ್ ಸೇಲ್ಗೆ ಇಟ್ಟು ಆ ತಕ್ಷಣಕ್ಕೆ ಹತ್ತು ರೂಪಾಯಿ ನಷ್ಟವಾದರೂ, ಹಾಗೇ ಇಟ್ಟರೆ ವಾಪಸ್ಸು ಬರುವಷ್ಟರಲ್ಲಿ ಕೊಳೆತು ಹೋಗುವ ತರಕಾರಿಗಳ ನಷ್ಟವನ್ನು ಕಡಿಮೆಮಾಡಿಕೊಳ್ಳುತ್ತಾನೆ. ಅಂತಹ ಸಮಯದಲ್ಲಿ ನನ್ನಂತಹ ಖಾಯಂ ಗಿರಾಕಿಗಳ ಹತ್ತಿರ ಮೊದಲೇ ತಾನು ಎಷ್ಟು ದಿನ ಇರುವುದಿಲ್ಲ ಎನ್ನುವುದರ ಮುನ್ನೆಚ್ಚರಿಕೆ ಕೊಟ್ಟು ನಮ್ಮ ಮನೆಯ ಫ್ರಿಜ್ಜು ತುಂಬಿತುಳುಕುವಂತೆ ಮಾಡುವಲ್ಲಿ ಯಶಸ್ವಿಯೂ ಆಗುತ್ತಾನೆ. ಹಾಗೆ ಈ ಲಾಕ್ಡೌನ್ ಶುರುವಾಗುವ ಎರಡುದಿನ ಮೊದಲು ನಾರಾಯಣ ಸಂಸಾರ ಸಮೇತ ಊರಿಗೆ ಹೊರಟು ನಿಂತು ತನ್ನ ಮಾಮೂಲಿನ ಮುನ್ನೆಚ್ಚರಿಕೆಯನ್ನು ಕೊಟ್ಟ. ನಾನೂ ಹೆಚ್ಚು ದಿನ ಬಾಳುವಂತ ಸುವರ್ಣಗೆಡ್ಡೆ, ಬಣ್ಣದಸೌತೆ, ಬೀಟ್ರೂಟು ಇಂತಹ ತರಕಾರಿಗಳನ್ನು ಮಾಮೂಲಿನ ತರಕಾರಿಗಳೊಂದಿಗೆ ಕೊಂಡು ತರುವಾಗ “ಇಂತಾ ಸಮಯದಲ್ಲಿ ಹೋಗುತ್ತಿದ್ದೀಯಲ್ಲಾ ನಾರಾಯಣ, ನಾಳಿದ್ದು ಬಂದ್ ಅಂತಲ್ಲಾ, ಆಮೇಲೆ ಅದೇ ಮುಂದುವರೆದುಬಿಟ್ಟರೆ ನೀನು ವಾಪಸ್ಸು ಹೇಗ್ಬರ್ತೀಯಾ?” ಎಂದು ನನ್ನದೂ ಒಂದು ಎಚ್ಚರಿಕೆಯ ಮಾತಿರಲಿ ಅಂತ ಕಿವಿಯ ಮೇಲೆಸೆದೆ. ಅದೇನೂ ಅವನ ಕಿವಿಯೊಳಗೆ ಹೋಗಲಿಲ್ಲ ಬಿಡಿ. “ಅಂತದೇನಾಗಲ್ಲ ಆಂಟಿ, ಒಂದ್ವಾರ ಅಷ್ಟೇ, ಬಂದ್ಬಿಡ್ತೀನಿ” ಎನ್ನುತ್ತಾ ಅಳಿದುಳಿದ ಎಲ್ಲಾ ತರಕಾರಿಯನ್ನೂ ಅವನ ಮಾಮೂಲಿನ ಮೆಸ್ಗೆ ಸುರಿದು ಆ ರಾತ್ರಿಯೇ ಸಂಸಾರ ಸಮೇತ ಬಸ್ಸು ಹತ್ತೇ ಬಿಟ್ಟ! ಇತ್ತ ಲಾಕ್ ಡೌನ್ ಶುರುವಾಗೇ ಬಿಟ್ಟಿತು…

ಹೀಗೆ ಸದಾ ತೆರೆದಿರುತ್ತಿದ್ದ ಅವನಂಗಡಿ ಮುಚ್ಚಿದ್ದರಿಂದ ದಿನವೂ ನಾವು ಮನೆಮುಂದೆ ಬರುವ ತರಕಾರಿಗಾಗಿ ಕಾಯಬೇಕಾಗಿ ಬಂದು ಅವನ ಮಹತ್ವದ ಅರಿವೂ ನಮಗಾಯಿತು ಎನ್ನಿ. ಲಾಕ್ಡೌನ್ ಮುಗಿದ ತಕ್ಷಣ ಫೋನಾಯಿಸಿ ಅವನ ಯೋಗಕ್ಷೇಮವನ್ನು ವಿಚಾರಿಸಿಕೊಂಡೆ. “ನಾಡಿದ್ದು ಹೊರ್ಟು ಬಂದ್ಬಿಡ್ತೀನಿ” ಅಂದ. “ಹೇಗ್ಬರ್ತೀಯಾ, ಯಾವ್ದೂ ಬಸ್ಸು ಓಡಾಡ್ತಿಲ್ವಲ್ಲ” ಅಂದೆ. “ಕಾರ್ ಮಾಡ್ಕೊಂಡು ಬರ್ತೀವಿ” ಅಂದ. “ಅಂತ ಸಾಹಸ ಮಾಡಕ್ಕೆ ಹೋಗ್ಬೇಡ. ಆಮೇಲೆ ಗಡಿನಲ್ಲಿ ನಿಲ್ಸಿದ್ರೆ ಹಿಂದೂ ಇಲ್ಲ;

ಮುಂದೂ ಇಲ್ಲ. ಎಲ್ಲ ಕಡೆ ಬಿಡೋತಂಕ ಅವಸ್ರ ಮಾಡ್ಕೊಂಡು ಬರ್ಬೇಡ" ಎಂದು ನನ್ನ ಮಾಮೂಲಿ ಹಿತವಚನವನ್ನು ಊದಿದೆ, ಅವನು ಕೇಳಿಸಿಕೊಳ್ಳುತ್ತಾನೆಂಬ ಯಾವ ಭರವಸೆಯೂ ಇಲ್ಲದಿದ್ದರೂ. ಅಂತೂ ಯಾಕೋ ಬರಲಿಲ್ಲ ಅವನ ಪುಣ್ಯಕ್ಕೋ ಅಥವಾ ನನ್ನ ಹಿತವಚನವನ್ನು ಒಂದು ಸಲವಾದರೂ ಪಾಲಿಸಿದ್ದಕ್ಕೋ!

ಲಾಕ್ಡೌನ್ ಶುರುವಾದ ನಂತರ ಮೊಮ್ಮಕ್ಕಳೂ ಮಗಳ ಮನೆಯಲ್ಲೇ ಲಾಕ್ ಆದ್ದರಿಂದ ನಮ್ಮಿಬ್ಬರಿಗೂ ಮಾಡಲು ಬೇರೆ ಕೆಲಸವಿಲ್ಲದೆ, ಮಾತಾಡಲು ವಿಷಯಗಳಿಲ್ಲದೆ, ಯಾವಾಗ ಟೀವಿಯನ್ನು ಹಚ್ಚಿದರೂ 'ನಮ್ಮಲ್ಲೇ ಮೊದಲು... ಬ್ರೇಕಿಂಗ್ ನ್ಯೂಸ್... ಕೊರೋನಾ ಮಾರಿಯ ಅಟ್ಟಹಾಸ...' ನೋಡಿ ನೋಡಿ ಸಾಕಾಗಿ ಬೋರ್ ಹೊಡೆಸಿಕೊಂಡು ಮಧ್ಯಾಹ್ನ ಊಟವಾದ ಮೇಲೆ ವಿಶ್ರಾಂತಿಯೆಂದು ಬಲವಂತವಾಗಿಯಾದರೂ ಮಲಗುವ ಅಭ್ಯಾಸವನ್ನು ಮಾಡಿಕೊಂಡೆವು. ಹೀಗೆ ಒಂದು ವಾರವಾಗಿತ್ತೇನೋ... ಮಧ್ಯಾಹ್ನ ನಾವಿನ್ನೂ ಮಂಪರಿನಲ್ಲಿದ್ದಾಗಲೇ ಅಂಬ್ಯುಲೆನ್ಸ್ನ ಗಂಟೆ ಹತ್ತಿರದಲ್ಲೇ ಮೊಳಗಿತು. 'ಸೇವಾಶ್ರಮ ಆಸ್ಪತ್ರೆಗೇನೋ, ವಾಹನಗಳ ಗಲಾಟೆಯಿಂದಾಗಿ ಇಷ್ಟು ಕಾಲ ಕೇಳುತ್ತಿರಲಿಲ್ಲ; ಈಗ ಎಷ್ಟು ಸ್ಪಷ್ಟವಾಗಿ ಕೇಳುತ್ತಿದೆ' ಎಂದು ಒಂದು ಹೊಸ ವಿಚಾರಧಾರೆಯನ್ನು ಕಂಡುಕೊಂಡಂತೆ ಮಂಪರಿನಲ್ಲೇ ಖುಷಿಪಟ್ಟು ಮತ್ತೆ ನಿದ್ರೆಯನ್ನು ಮುಂದುವರೆಸಿದೆವು. ಆದರೆ ಸ್ವಲ್ಪ ಹೊತ್ತಿನಲ್ಲೇ ನಮ್ಮ ಮನೆಯೆದುರು ಜನಗಳ ಗಲಗಲ, ಕೂಗಾಟ, ಅರಚಾಟ.... 'ಓ! ಏನೋ ಆಗಿದೆ' ಎಂದು ಅರ್ಥವಾಗಿ ಮಂಪರಿನಿಂದ ಹೊರಬಂದೆವು. ಇವರು ಬಾಗಿಲು ತೆರೆದು ಹೊರಗೆ ಇಣಕಿದರು.

ನಮ್ಮ ಮನೆಯೆದುರಿಗೆ 'ಕ್ರೇಜೀ಼ ಬಾಯ್ಸ್' ಯುವಕರು ಆವೇಶಭರಿತರಾಗಿ ಕೂಗಾಡುತ್ತಿದ್ದರು. ನಮ್ಮ ಮನೆಗೆ ಓರೆಯಾಗಿ ಅವರ ಕಚೇರಿಯಿದೆ. ಯಾವ ರಾಜಕೀಯ ಪಕ್ಷದವರೊಂದಿಗೂ ಅವರು ಖಾಯಮ್ಮಾಗಿ ತಮ್ಮನ್ನು ಗುರುತಿಸಿಕೊಂಡಿಲ್ಲ. ಕೆಲವೊಮ್ಮೆ ಕೈ ಮುಗಿಯುತ್ತಾರೆ, ಮತ್ತೆ ಕೆಲವೊಮ್ಮೆ ಕೇಸರಿ ಶಲ್ಯವನ್ನು ಹೊದ್ದಿರುತ್ತಾರೆ, ಇನ್ನೂ ಕೆಲವೊಮ್ಮೆ ಥೇಟ್ ಮಣ್ಣಿನ ಮಕ್ಕಳಂತೆ ಪೋಸ್ ಕೊಡುತ್ತಿರುತ್ತಾರೆ. ಗಣಪತಿ ಉತ್ಸವವನ್ನೂ, ಅಣ್ಣಮ್ಮ ದೇವಿಯ ಪೂಜೆಯನ್ನು, ಗಂಗಮ್ಮ ದೇವಿಯ ಕರಗವನ್ನೂ ತಮ್ಮದನ್ನಾಗಿ ಮಾಡಿಕೊಂಡು ಉತ್ಸಾಹದಿಂದ ಓಡಾಡುತ್ತಿರುತ್ತಾರೆ. ಕನ್ನಡ ರಾಜ್ಯೋತ್ಸವ, ಸ್ವಾತಂತ್ರ್ಯ ದಿನಾಚರಣೆಯನ್ನೂ ಬಲು ಸಂಭ್ರಮದಿಂದ ಆಚರಿಸುತ್ತಾರೆ. ಮೊಹರಂ ಉತ್ಸವದಂದು ಮೆರವಣಿಗೆಯನ್ನು ಹಿಂಬಾಲಿಸುತ್ತಿರುತ್ತಾರೆ. ಒಟ್ಟಿನಲ್ಲಿ ವಯೋಸಹಜವಾಗಿ ಒಂದು ಬಿಲ್ಡಪ್ ಕೊಟ್ಟುಕೊಂಡು ಓಡಾಡುವ ಖಯಾಲಿಯ ವಯೋಮಾನದವರು, ಅವರಿಂದ ಯಾರಿಗೇನೂ ತೊಂದರೆಯಿಲ್ಲ ಬಿಡಿ. ಏನೋ ಉತ್ಸವದ ಸಮಯದಲ್ಲಿ ನಮ್ಮ ಸೆಲ್ಲರನ್ನು ಅವರು ಏರ್ಪಡಿಸಿರುವ 'ನಾಟಕದ ನಟರಿಗೆ ಗ್ರೀನ್ ರೂಂ ಮಾಡಿಕೊಳ್ಳಲು ಕೊಡಕ್ಕಾಗತ್ತಾ', 'ಅನ್ನ ಸಮಾರಾಧನೆಯ ನಂತರ ಕೈ ತೊಳೆದುಕೊಳ್ಳಲು ನಿಮ್ಮ ಮನೆ ನಲ್ಲಿಯಿಂದ ನಮ್ಮ ಡ್ರಮ್ ತುಂಬಿಕೊಳ್ಳಬಹುದಾ' ಎನ್ನುವಂತಹ ನಮ್ಮ ತಲೆಕೆಡಿಸದಂತಹ ಅಹವಾಲುಗಳನ್ನು ಇಟ್ಟು ನಮ್ಮ ಪರವಾನಗಿ ಪಡೆದುಕೊಳ್ಳುತ್ತಾರೆ. ಇಂಥವರು ಹೀಗೇಕೆ ಕೂಗಾಡುತ್ತಿದ್ದಾರೆ ಎಂದು ವಿಚಾರಿಸಲು ಹೋದರು ನಮ್ಮವರು.

“ಅಂಕಲ್, ಅಲ್ಲಿ ಆ ಕಡೆ ಮಸೀದಿ ಎದುರು ಮನೆ ಸಾಬ್ರ ಮಗನಿಗೆ ಕೊರೋನಾ ಬಂದಿದ್ಯಂತೆ. ಈಗ ಅವನ್ನ ಕರ್ಕೊಂಡು ಹೋಗಕ್ಕೇ ಅಂಬುಲೆನ್ಸ್ ಬಂದಿದ್ದಿದ್ದು. ಅದಕ್ಕೇ ಇಲ್ಲಿಂದ ಒಂದು ಕ್ರಾಸ್ ಬಿಟ್ಟು ಮುಂದಕ್ಕೆ ಅಡ್ಡ ಹಾಕ್ತಿದೀವಿ. ಆಕಡೆಯಿಂದ ಈಕಡೆಗೆ ಯಾರೂ ಬರ್ದೇ ಇರೋ ಹಾಗೆ. ಎಲ್ರೂ ಹುಷಾರಾಗಿರ್ಬೇಕಲ್ವಾ” ಎನ್ನುತ್ತಾ “ಎಷ್ಟು ಹೊತ್ತು ಬೇಕ್ರಲೋ…ಬಡೇತ್ತವಾ ತಂದ್ರೇನ್ರಲಾ” ಎನ್ನುತ್ತಾ ತಮ್ಮ ಮರಿಗಳನ್ನು ಅಟ್ಟಾಡಿಸಿ, ಎಲ್ಲಿಂದಲೋ ಒಂದಷ್ಟು ತಗಡಿನ ಡ್ರಮ್ಮುಗಳನ್ನು ಕೋಲುಗಳನ್ನು ಹೊಂದಿಸಿಕೊಂಡು ತಂದು ಅಡ್ಡಗೋಡೆ ಹಾಕೇ ಬಿಟ್ಟರು. ಎಲ್ಲೆಲ್ಲೋ ‘ತಕಧಿಮಿತ್ಥೈ’ ಎಂದು ಚಂಡಾಡುತ್ತಿದ್ದ ಮಾರಿ ನಮ್ಮ ಬೀದಿಗೆ ಯಾವುದೇ ಆಹ್ವಾನವಿಲ್ಲದೆಯೂ ಬಂದಿದ್ದರ ಬಗ್ಗೆ ಬೀದಿಯವರೆಲ್ಲರಿಗೂ ಸಹಜವಾಗಿಯೇ ಪುಕಪುಕವಾಯಿತು. ಸಾಯಂಕಾಲದ ಹೊತ್ತಿಗೆ ಬೀದಿಯಲ್ಲೆಲ್ಲಾ ಕರ್ಫ್ಯೂ ವಾತಾವರಣ. ನಮ್ಮ ಕ್ರೇಜೀ಼ ಬಾಯ್ಸ್ಗಳೆಲ್ಲಾ ತಮ್ಮ ಮುಂದಿನ ಯೋಜನೆಗಳ ಬಗ್ಗೆ ಚರ್ಚಿಸುತ್ತಿದ್ದರು. ಇನ್ನು ಅಮರನಾಥನ ಅಂಗಡಿ ಮುಚ್ಚೇಬಿಟ್ಟರೆ ಎನ್ನುವ ಮುನ್ನೆಚ್ಚರಿಕೆಯಿಂದ ಇವರು ಒಂದಷ್ಟು ಅತ್ಯಾವಶ್ಯಕ ಸಾಮಾನುಗಳನ್ನು ತಂದುಬಿಡೋಣವೆಂದು ಹೊರಟಾಗ ಮನಸ್ಸಿನಲ್ಲೇ ‘ಇಷ್ಟರವರೆಗೆ ಅದೇ ಮನೆಯವರು ಬಂದು ಇವನಂಗಡಿಯಿಂದ ಎಷ್ಟು ಸಲ ವ್ಯಾಪಾರ ಮಾಡಿಕೊಂಡು ಹೋಗಿದ್ದಾರೋ’ ಎನ್ನುವ ಅನುಮಾನ ಬೇರೆ ಕಾಡತೊಡಗಿತು.

ಅಲ್ಲೇ ನಿಂತಿದ್ದ ಕ್ರೇ.ಬಾ. ಮುಖಂಡನೊಬ್ಬ “ಆ ಕಡೆಯಿಂದ ಈ ಕಡೆ ಯಾರೂ ಬರ್ದೇ ಇರೋಹಾಗೆ ಪಾಳಿ ಮೇಲೆ ರಾತ್ರಿಯೆಲ್ಲಾ ಕಾವಲು ಕಾದುಬಿಡ್ತೀವಿ ಅಂಕಲ್” ಎಂದು ತಮ್ಮ ಮುಂದಿನ ಯೋಜನೆಯನ್ನು ಬಿಚ್ಚಿಟ್ಟ. ಇವರೂ ಅಂತರವನ್ನು ಕಾಯ್ದುಕೊಳ್ಳಬೇಕಾದ್ದರಿಂದ ಬೆನ್ನುತಟ್ಟದೆ ಮೂರಡಿ ದೂರದಲ್ಲಿ ನಿಂತು “ಒಳ್ಳೇದಪ್ಪ” ಎಂದು “ಯಾರಿಗಂತೆ ಕೊರೋನಾ ಬಂದಿರೋದು?” ಕೇಳಿದರೆ ಅವರಿಗೂ ಅದರ ಬಗ್ಗೆ ಮಾಹಿತಿಯಿಲ್ಲ. “ಆ ರೋಡಲ್ಲಿರೋ ನಮ್ಮುಡುಗ ಅವ್ರ ಮಾವ್ನ ಮನೆಗೋದವ್ನು ಅಲ್ಲೇ ಸಿಕ್ಕಾಕೊಂಡ್ಬಿಟ್ಟಿದಾನೆ. ಹಂಗಾಗಿ ಗೊತ್ತಾಗ್ಲಿಲ್ಲ. ಯಾರೋ ತಬ್ಲಿಘಿಯಿಂದ ಬಂದಿರತ್ತೆ ಬಿಡಿ ಅಂಕಲ್, ಅಲ್ಲೇ ಮಸೀದಿಯಿದೆ ಅಲ್ವಾ. ಆ ಉಡ್ಗ ಎಲ್ಲೋ ಮಳವಳ್ಳಿ ಕಡೆ ಓಗಿದ್ನಂತೆ. ಅಲ್ಲೆಲ್ಲಾ ಅದೇ ಗಲಾಟೆ ತಾನೆ” ಎಂದು ತನ್ನದೇ ತೀರ್ಮಾನವನ್ನು ನುಡಿದು ಪಕ್ಕದವನೊಂದಿಗೆ ‘ರಾತ್ರಿ ಫಸ್ಟ್ ಷಿಫ್ಟ್ ಯಾರ್ದೋ’ ಎನ್ನುತ್ತಾ ಅವನೊಂದಿಗೆ ಮಾತಿಗಿಳಿದ. ಏನೋ ಅಂತೂ ಸಧ್ಯಕ್ಕೆ ಎಲ್ಲಾ ಚುನಾವಣೆಗಳೂ ಮುಗಿದು, ಹಬ್ಬ, ಹುಣ್ಣಿಮೆಗೆ ಅವಕಾಶವಿಲ್ಲದೇ ಕರೋನಾದ ಗಲಾಟೆಯಲ್ಲಿ ಮಂಕು ಹಿಡಿದು ಕೂತಿದ್ದ ಹುಡುಗರಿಗೆ ಮೆರೆಯಲು ಒಂದು ಅವಕಾಶ ಸಿಕ್ಕಿತ್ತು ಬಿಡಿ…

ಮಾರನೆಯ ದಿನ ಬೆಳಗ್ಗೆಯಿಂದ ಅಮರನಾಥ ಅಂಗಡಿಯ ಮುಂದೆ ರಂಗೋಲಿಯಲ್ಲಿ ಮೂರು ಮೂರು ಅಡಿಗೊಂದು ಗೆರೆ ಹಾಕಿ ತಾನೂ ಮಾಸ್ಕ್ ಕಟ್ಟಿಕೊಂಡು, ಯಾರೇ ವ್ಯಾಪಾರಕ್ಕೆ ಬಂದರೂ ಮಾಸ್ಕ್ ಕಟ್ಟಿಕೊಂಡು ಒಬ್ಬರಾದ ಮೇಲೊಬ್ಬರು ಆ ಗೆರೆಯನ್ನು ದಾಟಿಕೊಂಡು ಬಂದು ಸಾಮಾನು ಕೊಳ್ಳಬೇಕೆಂದು ಠರಾವು ಹೊರಡಿಸಿದ; ಅಂತೆಯೇ ಮಾಸ್ಕ್ ಇಲ್ಲದವರಿಗೆ ಮೊದಲು ತಮ್ಮ ಅಂಗಡಿಯಲ್ಲಿ ಮಾಸ್ಕ್ ಕೊಂಡು ಕಟ್ಟಿಕೊಂಡ ನಂತರ ಮುಂದಿನ ವ್ಯಾಪಾರವೆಂದು ಠರಾವು ಹೊರಡಿಸಿದ. ಜನರೂ ಪಾಲಿಸಿದರು. ಇಷ್ಟಾದರೂ ಕೊರೋನಾ ಯಾರಿಗೆ, ಹೇಗೆ ಬಂದಿದ್ದು ಎಂದು ತಿಳಿಯದ್ದರಿಂದ ಇವರು ‘ನಮ್ಮ ರಜಾಕ್ ಸಾಬರಿಗಾದರೂ ಫೋನ್ ಮಾಡೋಣ. ಅವರ ಮನೆಯೂ

ಅಲ್ಲೇ ಇರೋದು. ನಮ್ಮ ಏರಿಯಾದಲ್ಲಿ ಸಾವಿರಕ್ಕೂ ಹೆಚ್ಚಿನ ಮನೆಗಳಲ್ಲಿ ಅವರ ಕೇಬಲ್ ಕನೆಕ್ಷನ್ ಇದೆ. ವಿಷಯ ತಿಳ್ದೇ ಇರತ್ತೆ' ಎಂದುಕೊಂಡರು. ರಜಾಕ್ ಸಾಬ್ ಸಂಭಾವಿತರು. ಕೇಬಲ್ನ ಏನೇ ಸಮಸ್ಯೆಯಿದ್ದರೂ "ಸಾಹೇಬ್ರೇ..." ಎಂದು ಫೋನಾಯಿಸಿದ ತಕ್ಷಣ "ಓ... ಬಂದೇ" ಎನ್ನುತ್ತಾ ತಾವಾದರೂ ಬಂದು, ಇಲ್ಲವೇ ಮಗನನ್ನಾದರೂ ಕಳುಹಿಸಿ ತಕ್ಷಣವೇ ಸರಿಪಡಿಸಿಕೊಡುತ್ತಿದ್ದವರು ಇಂದು ಫೋನ್ ಮಾಡಿದರೆ ತೆಗೆಯಲೇ ಇಲ್ಲ. ಏನು ಗಡಿಬಿಡಿಯಲ್ಲಿದ್ದಾರೋ ಎಂದುಕೊಂಡು ಸುಮ್ಮನಾದದ್ದಾಯಿತು.

ಸ್ವಲ್ಪ ಹೊತ್ತಿನಲ್ಲೇ ಆರೋಗ್ಯಾಧಿಕಾರಿಗಳು, ಆಶಾ ಕಾರ್ಯಕರ್ತೆಯರು ಮನೆಮನೆ ಬಾಗಿಲಿಗೆ ಬಂದು ಎಲ್ಲರ ಆರೋಗ್ಯದ ವಿವರಗಳನ್ನೂ ಪಡೆದುಕೊಳ್ಳತೊಡಗಿದರು. 'ಅವರಿಗೆ ಗೊತ್ತೇ ಇರತ್ತೆ' ಎಂದು ವಿಚಾರಿಸಿದರೆ "ಅದೇ ಕೇಬಲ್ ಆಪರೇಟರ್ ರಜಾಕ್ ಸಾಬ್ ಅಂತ ಇದ್ದಾರಂತಲ್ಲ. ಅವರ ಮಗ ವಾಜೀದ್ ಅನ್ನೋವ್ರಿಗೆ" ಎಂದು ಕುರಿ ಲೆಕ್ಕ ಹೇಳೋ ಹಾಗೆ ನಿರ್ವಿಕಾರವಾಗಿ ಹೇಳಿದರು. ನಮ್ಮಿಬ್ಬರಿಗೂ ಶಾಕ್! ಅದಕ್ಕೇ ರಜಾಕ್ ಸಾಬರು ಫೋನ್ ತೆಗೆದಿಲ್ಲ. ಲಾಕ್ಡೌನ್ ಶುರುವಾಗೋ ಹಿಂದಿನ ದಿನವಷ್ಟೇ ನಮ್ಮನೆಗೆ ಬಂದಿದ್ರಲ್ಲಾ! ಆ ವಾಜೀದ್ನೂ ಬಂದಿದ್ನಲ್ಲ! ಆಗ ಅವ್ನಿಗೆ ಇನ್ನೂ ಕೊರೋನ ತಗುಲ್ಕೊಂಡಿರ್ಲಿಲ್ವಾ...? ಅವ್ನು ಮಳವಳ್ಳಿಗೆ ಹೋಗಿದ್ನಾ? ಅಕಸ್ಮಾತ್ ನಮ್ಗೂ ಏನಾದ್ರೂ ಅವ್ನಿಂದ ಹಾರ್ಕೊಂಡು ಬಂದ್ಬಿಟ್ಟಿದ್ರೆ?! ಒಮ್ಮೆಲೇ ಭಯವಾಯಿತು. ಆದರೆ ಮಿಕ್ಕ ಯಾವುದೇ ಲಕ್ಷಣಗಳಿಲ್ಲದೇ ಇರೋದ್ರಿಂದ ಸ್ವಲ್ಪ ಮಟ್ಟಿಗೆ ನಮಗೆ ನಾವೇ ಧೈರ್ಯ ತೆಗೆದುಕೊಂಡೆವು. "ಹೇಗಂತೆ?" ಎಂದರೆ ಅವರಿಗೂ ಕಾರಣ ಗೊತ್ತಿಲ್ಲ/ಹೇಳಲಿಲ್ಲ. ಆದರೂ ಅವತ್ತೆಲ್ಲಾ ಆಗೀಗ ಗಂಟಲು ಕೆರೆಯುತ್ತಿದೆಯೇನೋ ಎಂದು ನಮ್ಮಿಬ್ಬರಿಗೂ ಅನ್ನಿಸಿದ್ದು ಸುಳ್ಳಲ್ಲ!

ಮರುದಿನ ಬೆಳಗ್ಗೆ ಮತ್ತೆ ರಜಾಕ್ ಸಾಬರಿಗೆ ಫೋನ್ಮಾಡಿದರೆ ತೆಗೆದುಕೊಂಡರು. ಕೇಳಕ್ಕೆ ಮೊದಲೇ ಅವರೇ ಪುರಾಣ ಪ್ರವಚನ ಶುರುಮಾಡಿದ್ರು "ನೋಡಿ ಸರ್ ಎಂಗಾಗೋಯ್ತು. ನಮ್ಮ ವಾಜೀದಂಗೆ ಈಗೊಂದು ವರ್ಷದಿಂದ ಆಗೀಗ ಕೆಮ್ಮು ಬರ್ತಾನೇ ಐತೆ. ಅಲ್ಲೇ ದೀಪಾ ನರ್ಸಿಂಗ್ಹೋಮ್ನಲ್ಲೇ ತೋರುಸ್ತಿದ್ವು. ಮೊನ್ನೆಯೂ ಅಂಗೇ ನಮ್ಮೆಂಗುಸ್ರು ಅಲ್ಗೆ ಕರ್ಕೊಂಡೋಗಿದ್ರಾ, ಮಾಮೂಲಿ ದಾಕುಟ್ರೇರ್ನಿಲ್ಲ. ಇನ್ನೊಬ್ರು, ಈಗ ಇಂತಾ ಕೇಸೆಲ್ಲಾ ಬಂದ್ರೆ ರಾಜೀವ್ ಗಾಂಧಿ ಆಸ್ಪತ್ರೆಗೆ ಕಳಿಸ್ಬೇಕು ಅಂತ ನಮ್ಗೆ ಆರ್ಡರಾಗದೆ. ಅಂಬುಲೆನ್ಸ್ ಬಂದು ಕರ್ಕಂಡೋಯ್ತುದೆ ಅಂತೇಳಿ ಕಳ್ಸಿದ್ರಾ, ಇನ್ನೂ ಇವ್ರು ಮನೆಯೊಳ್ಗೆ ಎಜ್ಜೆ ಇಕ್ಕಿದ್ರೋ ಇಲ್ವೋ ಬಂದೇಬುಡ್ತಲ್ಲಾ ಅಂಬುಲೆನ್ಸ್. ವಾಜೀದನ್ನೂ, ಜೊತೆಗೋಗಿದ್ರು ಅಂತ ನಮ್ಮೆಂಗುಸ್ರುನ್ನೂ ಕರ್ಕಂಡೋಗಿ ರಾಜೀವ್ ಗಾಂಧಿ ಆಸ್ಪತ್ರೇಲಿ ಮಡಗವ್ರೆ. ಇನ್ನೊಂದು ವ್ಯಾನಲ್ಲಿ ನಮ್ಮೆಲ್ಲಾ ಕರ್ಕಂಡ್ಬಂದು ಇಲ್ಲಿ ಡಬಲ್ ರೋಡಲ್ಲಿ ಒಂದು ಓಟ್ಲಲ್ಲಿ ಇರ್ಸವ್ರೆ. ಎಂತದೋ ಕ್ವಾರಂಟೇನಂತೆ. ಅವ್ನದು ರಕ್ತ, ಕಫ ಎಲ್ಲಾ ಪರೀಕ್ಷೆಗೆ ಕಳ್ಸವ್ರಂತೆ. ನಮ್ಮೆಂಗುಸ್ರು ಅಲ್ಲಿ ತಲ್ಕೆಟ್ಟು ಕೂತವ್ರೆ, ನಾವು ಇಲ್ಲಿಂಗೆ ಕುಂತಿದೀವಿ" ಎಂದು ಹರಿಯುತ್ತಿದ್ದ ವಾಗ್ಝರಿಗೆ ಒಂದು ನಿಮಿಷ ತಡೆಯೊಡ್ಡಿ ಸುಧಾರಿಸಿಕೊಂಡರು. "ನಿಮ್ಮಗ ಏನಾದ್ರೂ ಮಳವಳ್ಳಿ ಕಡ್ಗೆ ಹೋಗಿದ್ನಾ, ಇಲ್ಲಾ ಅಲ್ಲಿಂದ ಯಾರಾರೂ ಅವ್ನ ಫ್ರೆಂಡ್ಸ್ ಬಂದಿದ್ರಾ" ಸಿಕ್ಕ ಅವಕಾಶದಲ್ಲೇ ಇವರೊಂದು ಪ್ರಶ್ನೆಯನ್ನೆಸೆದರು. "ಅಯ್ಯೋ ಕೆರ್ಕಣಾಕ್ ಪುರ್ಸತ್ತಿಲ್ದಷ್ಟು ಕೆಲ್ಸವೈತೆ ಎಲ್ಲಿಗೋಗೋದು ಸಾರ್ ಅವ್ನು. ಅವ್ನಿಗೆ ಫ್ರೆಂಡ್ಸ್ ಜತಿಗೆ ತಿರ್ಗಾಡೋ

ಖಯಾಲಿ ಇಲ್ಲ. ನಮ್ಮಿಲ್ಲಿ, ಅವ್ರನಲ್ಲಿ ಕೂಡಾಕಿದಾರೆ. ಯಾರ್ಮನೇಲಾದ್ರ ಕೇಬಲ್ ತೊಂದ್ರೆಯಾದ್ರೆ ಎಂಗ್ ಮಾಡೋದು ಅನ್ನೋದೆ ಯೋಚ್ನೆಯಾಗೈತೆ" ಎಂದು ಅಲವತ್ತುಕೊಂಡರು. ಇವರೂ ನಾಲ್ಕು ಸಮಾಧಾನದ ಮಾತನಾಡಿ ಇಟ್ಟರು.

ಇಷ್ಟರಲ್ಲಿ ಎಲ್ಲ ಕಡೆಯೂ ಬಡಬಗ್ಗರಿಗೆ, ಕೂಲಿ ಕಾರ್ಮಿಕರಿಗೆ ಸರ್ಕಾರದಿಂದ ಆಹಾರ ಧಾನ್ಯಗಳನ್ನು ಹಂಚುವ ವ್ಯವಸ್ಥೆ ಬೇರೆ ಆರಂಭವಾಯಿತು. ನಮ್ಮ ಬೀದಿಯ ಅರ್ಧ ಭಾಗ ಮಧ್ಯಮ ವರ್ಗದವರಿದ್ದರೆ, ಇನ್ನರ್ಧ ಭಾಗದಲ್ಲಿರುವವರು ಬಡತನದ ರೇಖೆಯಡಿ ಬರುವವರೇ. ಬೀದಿಯ ಆ ಭಾಗದಲ್ಲಿ ಒಂದು ರೇಷನ್ ಅಂಗಡಿಯೂ ಇದ್ದು ಆ ಕಾರ್ಯಕ್ರಮವೂ ಭರದಿಂದ ಸಾಗಿತು. ಇಷ್ಟರಲ್ಲಿ ನಮ್ಮ ಕ್ರೀ.ಬಾ.ಯುವಕರಿಗೂ ಸ್ಫೂರ್ತಿ ಬಂದು ಒಂದು ಶುಭ ಮುಂಜಾನೆ ತಮ್ಮ ಕಚೇರಿಯ ಮುಂದೆ ಮೂರ್ನಾಲ್ಕು ಟೇಬಲ್ಲುಗಳನ್ನು ಹೊಂಚಿಕೊಂಡು ಅದರ ಮೇಲೆ ಬಿರ್ಯಾನಿ ಪ್ಯಾಕೆಟ್ಟು, ಮಾಸ್ಕು, ದಿನಸಿ ಸಾಮಾನುಗಳ ಚೀಲ, ನೀರಿನ ಬಾಟಲ್ಲು, ತರಕಾರಿ, ಬಿಸ್ಕತ್ತು ಇಂತವನ್ನು ಹರಡಿಕೊಂಡು ಮೊದಲು ಅದರ ಹಿಂದೆ ಶಿಸ್ತಾಗಿ ಮಾಸ್ಕ್ ಕಟ್ಟಿಕೊಂಡು ನಿಂತು ಫೋಟೋ ತೆಗೆಸಿಕೊಂಡರು. ನಂತರ ಅದಕ್ಕಾಗಿ ಕಾಯುತ್ತಾ ನಿಂತಿದ್ದ ಜನರಿಗೆ ಮೊದಲು ಮಾಸ್ಕ್ ನೀಡಿ, ಕಟ್ಟಿಸಿ, ಗೆರೆಗಳ ಮೇಲೆ ನಿಲ್ಲಿಸಿ, ನಂತರ ಒಬ್ಬೊಬ್ಬರೂ ಸರಕುಗಳನ್ನು ನೀಡುತ್ತಿರುವ ಫೋಟೋಗಳನ್ನು ತೆಗೆದುಕೊಳ್ಳುತ್ತಾ ಸಂಭ್ರಮಿಸಿಕೊಳ್ಳುತ್ತಿರುವ ವೇಳೆಗೆ ಆರೋಗ್ಯಾಧಿಕಾರಿಗಳು ಬಂದು "ಹೀಗೆ ಹಂಚಲು ಪರವಾನಗಿ ಪಡೆದುಕೊಂಡಿದ್ದೀರಾ" ಎಂದು ವಿಚಾರಣೆ ನಡೆಸಿ ಈ ಹಂಚಿಕೆಯ ಪ್ರಕರಣವು ಅರ್ಧಕ್ಕೇ ಮುಕ್ತಾಯವಾಯಿತು. ಅವರತ್ತ ಸಾಗಿದೊಡನೆಯೇ ಇವರಿತ್ತ ತಮ್ಮ ಕೆಲಸವನ್ನು ಪೂರೈಸಿದರು ಅಂತಿಟ್ಟುಕೊಳ್ಳಿ.

ವಾರವಾಯ್ತು ಇಷ್ಟರಲ್ಲಿ ಆಶಾ ಕಾರ್ಯಕರ್ತೆಯರು ಆರೋಗ್ಯಾಧಿಕಾರಿಗಳು ಎರಡು, ಮೂರು ಸಲ ಮನೆಮನೆಗೂ ಬಂದು ಹೋದರು. ಬೀದಿಯವರಿಗೆಲ್ಲಾ ಭಯಮಿಶ್ರಿತ ಕುತೂಹಲ 'ವಾಜೀದಂಗೇನಾದ್ರೂ ಕೊರೋನಾ ಬಂದಿದ್ಯಾಂತ'. ಮೂರನೆ ದಿನ ಮತ್ತೆ ರಜಾಕ್ ಸಾಹೇಬರಿಗೆ ಫೋನಾಯಿಸಿ ಕುಶಲ ವಿಚಾರಿಸಿದ್ದಾಯ್ತು. "ಅಲ್ಲಾನ ದಯೆ ಸಾರ್, ಎರ್ಡು ಟೆಸ್ಟಲ್ಲೂ ಇಲ್ಲಾಂತ ಬಂದೈತಂತೆ. ಇನ್ನೊಂದ್ರಾಗೆ ಇಲ್ಲಾಂತ ಬಂದ್ಬಿಟ್ರೆ ಆಯ್ತು. ನಾವೆಲ್ಲಾ ಇಲ್ಲಿ ಅರಾಮಾಗೇ ಇದೀವಿ. ಕೆಲ್ಸ ಬಿಟ್ಟು ಇಂಗ್ ಕೂತ್ಕೊಳೋದಂದ್ರೆ ಖುಸಿ ಇಲ್ಲ ಸಾರ್" ಎಂದರು. ಅರ್ಧ ಸಮಾಧಾನವಾಯಿತು. ಇನ್ನೆರಡು ದಿನಕ್ಕೆ ಆ ಪರೀಕ್ಷೆಯಲ್ಲೂ ಖಾಯಿಲೆಯಿಲ್ಲ ಎಂದು ಬಂದಿದೆಯೆಂದಾಯಿತು. ನಾವೆಲ್ಲಾ ಸಮಾಧಾನದ ನಿಟ್ಟುಸಿರು ಬಿಟ್ಟೆವು. ಆದರೆ ನಮ್ಮ ಮನೆಯ ಪಕ್ಕದಿಂದ ಮುಂದಕ್ಕೆ ಇಡೀ ಜಾಗವನ್ನು ಕಂಟೇನ್ಮೆಂಟ್ ಝೋನ್ ಎಂದು ಜಾರಿ ಮಾಡಿ ಈ ಕಡೆಯಿಂದ ಆ ಕಡೆಗೆ ಯಾರೂ ಹೋಗದಂತೆ ಬಂದೋಬಸ್ತ್ ಮಾಡಿಬಿಟ್ಟರು. ವಾಘಾ ಬಾರ್ಡರಿನಲ್ಲಿದ್ದಂತೆ ಇಲ್ಲಿನವರು ಇಲ್ಲಿಯೇ ಮಾರ್ಚ್ಫಾಸ್ಟ್, ಅಲ್ಲಿನವರು ಅಲ್ಲಿಯೇ ಮಾರ್ಚ್ಫಾಸ್ಟ್! ಕೈಕುಲುಕುವಂತಿಲ್ಲ; ಸಾಮಾಜಿಕ ಅಂತರ! ಆ ಭಾಗದಲ್ಲಿರುವ ಕಿರಾಣಿ ಅಂಗಡಿಯನ್ನು ಮುಚ್ಚಿದ್ದರಿಂದ ಅಲ್ಲಿನ ಬಡತನದ ರೇಖೆಯ ಕೆಳಗಿರುವವರಿಗೆಲ್ಲಾ ಸರ್ಕಾರದಿಂದಲೇ ಜೀವನಾವಶ್ಯಕ ಕಿರಾಣಿ ಸಾಮಾನುಗಳನ್ನು ಪೂರೈಸಿದರು. ಅದರ ಮೇಲೂ ಮತ್ತೂ ಏನಾದರೂ ಬೇಕಾದರೆ ಅವರು ಅಮರನಾಥನ ಅಂಗಡಿಗೇ ಎಡತಾಕಬೇಕಾಯಿತು. ಅವರಿಗೆ ಬೇಕಾದ

ಸಾಮಾನನ್ನು ಕಟ್ಟಿ ಇವನು ಬಾರ್ಡರಿನ ಮೇಲಿಟ್ಟರೆ, ಅವರು ದುಡ್ಡಿಟ್ಟು ಅಲ್ಲಿಂದ ತೆಗೆದುಕೊಂಡು ಹೋಗುವ ವ್ಯವಸ್ಥೆಯಾಯಿತು.

ಅಲ್ಲಿನವರೆಲ್ಲರ ನಂಬರ್ಗಳನ್ನೂ ತೆಗೆದುಕೊಂಡು ಒಂದು ವಾಟ್ಸಾಪ್ ಗ್ರೂಪ್ ಮಾಡಿ ಅವರಿಗೆ ಜೀವನಾವಶ್ಯಕ ಸಾಮಾನುಗಳೇನು ಬೇಕಿದ್ದರೂ ಸ್ವಯಂಸೇವಕರು ಪೂರೈಸುವ ವ್ಯವಸ್ಥೆ ಮಾಡಲಾಯಿತು. ಹಾಗೆಯೇ ನಿಗಾವಣೆಗಾಗಿ ನಮ್ಮವರನ್ನೂ ಸೇರಿಕೊಂಡು ಈ ಭಾಗದ ಕೆಲವರ ನಂಬರನ್ನೂ ತೆಗೆದುಕೊಂಡು ಹೋಗಿದ್ದರಿಂದ ಪುರಸೊತ್ತಿಲ್ಲದಂತೆ ಇವರ ಮೊಬೈಲ್ ಫೋನ್ ಕಿಣಿಕಿಣಿ ಎನ್ನಲು ಶುರುವಾಯಿತು. ಆ ಸಂದೇಶಗಳ ಕೆಲವು ಸ್ಯಾಂಪಲ್ 'ನನಗೆ ಅರ್ಧ ಲೀಟರ್ ಕೇಸರಿ ಹಾಲಿನ ಪ್ಯಾಕೇಟೇ ಬೇಕು', 'ನನಗೆ ಗುಡ್ ಡೇ ಬಿಸ್ಕತ್ ಬೇಕು', 'ಆರು ಏಲಕ್ಕಿ ಬಾಳೆಹಣ್ಣು ಬೇಕು' ' ಐವತ್ತು ಗ್ರಾಂ ಹಸಿಮೆಣಸಿನ ಕಾಯಿ ಬೇಕು' 'ಎರಡು ನಾಟಿ ಕೋಳಿ ಮೊಟ್ಟೆ ಬೇಕು' 'ಲಕ್ಷ್ಮಣರೇಖಾ ಬೇಕು' ಹೀಗಿತ್ತು. ಜೊತೆಗೆ ನಮ್ಮನೆಯಲ್ಲಿ ಕರೆಂಟು ಹೋಗಿದೆ- ಕೆಇಬಿಗೆ ಫೋನ್ ಮಾಡಿ, ಟೀವಿ ಕೆಟ್ಟು ಹೋಗಿದೆ- ರಿಪೇರಿಯವರನ್ನು ಕಳಿಸಿ, ಕೇಬಲ್ ಕೆಲಸ ಮಾಡುತ್ತಿಲ್ಲ-ಹೇಗೆ ಕಾಲಕಳೀಬೇಕು?, ನನ್ನ ಮೊಬೈಲ್ಗೆ ಯಾರಾದರೂ ಫ್ರೀಯಾಗಿ ಕರೆನ್ಸಿ ಹಾಕಿಸಿ' ಇವೆಲ್ಲಾ ಜೀವನಾವಶ್ಯಕ ವಿಷಯಗಳೆಂದು ನಮಗೆ ಗೊತ್ತಾಗಿದ್ದೇ ಇಂತಹ ಸಂದೇಶಗಳನ್ನು ನೋಡಿದಾಗ…

ಅಂತೂ ವಾಜೀದನಿಗೆ ಕೊರೋನಾ ಇಲ್ಲವೆಂದು ದೃಢಪಟ್ಟಿತು. ಆದರೂ ಆ ಕುಟುಂಬದವರನ್ನೆಲ್ಲಾ ಹದಿನಾಲ್ಕು ದಿನ ಕೋರಂಟೇನ್ನಲ್ಲಿ ಇರಿಸಿಕೊಂಡು ಹದಿನೈದನೆಯ ಶುಭ ಬೆಳಗು ಅಪ್ಪ ಮಕ್ಕಳನ್ನು ಹೋಟೇಲಿನಿಂದ, ಅಮ್ಮ ಮಗನನ್ನು ರಾಜೀವ್ ಗಾಂಧಿ ಆಸ್ಪತ್ರೆಯಿಂದ, ಮನೆಯವರೆಲ್ಲರೂ ಇನ್ನೂ ಹದಿನಾಲ್ಕು ದಿನ ಮನೆಯಲ್ಲೇ ಕೊರಂಟೇನ್ನಲ್ಲೇ ಇರಬೇಕು ಎನ್ನುವ ಶರತ್ತು ಬದ್ಧ ಆಜ್ಞೆಯೊಂದಿಗೆ ಕರೆತಂದು ಬಿಟ್ಟರು. ಇಲ್ಲಿಗೆ ಮುಗಿಯಿತೇ… ಇಲ್ಲ, ಮಧ್ಯದ ತಡೆಗೋಡೆ ಹಾಗೆಯೇ ಮುಂದುವರೆಯಿತು. ದಿನವೂ ಟೀವಿಯಲ್ಲಿ, ಪೇಪರಿನಲ್ಲಿ ನಮ್ಮ ವಾರ್ಡ್ ಯಾವಾಗ 'ಮುಕ್ತ ಮುಕ್ತ ಮುಕ್ತ' ಎಂದು ಹಾಡುತ್ತದೆ ಎಂದು ನೋಡುವುದೇ ಕೆಲಸವಾಯಿತು. ಯಾವ ಕಾಲದಿಂದಲೂ ನಾವು ಹೀಗೇ ಇದ್ದೇವೇನೋ ಎಂದು ನಮಗೆ ಅನ್ನಿಸುವ ವೇಳೆಗೆ, ಅಂತೂ ಈಗ ಎರಡು ದಿನದ ಕೆಳಗೆ ಸಂಜೆಯ ವೇಳೆಗೆ ಗೋಧೂಳಿ ಲಗ್ನದಲ್ಲಿ ನಮ್ಮ ವಾರ್ಡ ಬಾಗಿಲು ತೆರೆದು ಸಂಚಾರಕ್ಕೆ ಮುಕ್ತವಾಯಿತು ಎನ್ನುವಲ್ಲಿಗೆ ಈ ಕೊರೋನ ಪುರಾಣ ಮುಗಿಯಿತು.

ಶ್ರವಣಕುಮಾರಿ

ಚೆಂಗಾಯಣ
ಚೆಂಗನ ಆನ್ಲೈನ್ ಬೂಟಿ ಕೋರ್ಸು!

"ಸಾ..., ಸಾ..." ಚೆಂಗ ರವೀಂದ್ರ ಅವರ ಮನೆಯ ಮುಂದೆ ನಿಂತು ಜೋರಾಗಿ ವದರ್ತಾ ಇದ್ದ. ಅಕ್ಕಪಕ್ಕದ ಮನೆಯವರೆಲ್ಲರೂ ಕಿಟಕಿಯಿಂದ ರವೀಂದ್ರ ಅವರ ಮನೆಯ ಕಡೆ ಇಣುಕಿ ನೋಡುತ್ತಿದ್ದರು. ಅವರೆಲ್ಲರ ಮುಖದಲ್ಲೂ ಭಯಮಿಶ್ರಿತ ಆಶ್ಚರ್ಯ!

ರವೀಂದ್ರ ಅವರು ಕೂಡ ಕಿಟಕಿಯಿಂದ ಇಣುಕಿದರು. ಅವರ ಮುಖ ಕಾಣುತ್ತಿದ್ದ ಹಾಗೆ, ಚೆಂಗ ಹಲ್ಲುಗಿಂಜುತ್ತಾ "ನಂಸ್ಕಾರ ಸಾ... ನಾನು ಚೆಂಗ!... ನಮ್ಮ ಸಾರು ನಿಮ್ಗೆ ಫೋನ್ ಮಾಡಿರ್ಬೇಕಲ್ಲ ಸಾ..." ಅಂದ.

'ಓಹೋ ನೀವು ಚೆಂಗಾನ...' ಅಂದ್ರು ಆಶ್ಚರ್ಯದಿಂದ ರವೀಂದ್ರ.

"ನೀವು ಅನ್ಬೇಡಿ ಸಾ... ನೀನು ಅನ್ನಿ... ಏನೋ ನಿಮ್ಮಂತೋರಿಂದ ನಾನು ಒಟ್ಟೆ ಒಕ್ರೋತಾ ಇವ್ನಿ...!"

ಅಷ್ಟು ಹೊತ್ತಿಗೆ ಮಾಸ್ಕನ್ನು ಹಾಕಿಕೊಂಡು ರವೀಂದ್ರ ಬಾಗಿಲು ತೆಗೆದು 'ಹೌದು... ನಿಮ್ಮ ಸರ್ ಕರೆ ಮಾಡಿದ್ರು. ಆದರೆ ಇಷ್ಟು ಬೇಗ ನೀನು ಬರ್ತೀ ಅನ್ಕೊಂಡಿರ್ಲಿಲ್ಲ ಚೆಂಗ... ಅದೇನೋ ನನ್ನಿಂದ ಬಹಳ ಸಹಾಯ ಆಯ್ತು... ಅದಕ್ಕೆ ವಂದನೆ ಹೇಳೋಕೆ ನೀನು ಬರ್ತೀ ಅಂತ ಅಂದ್ರು... ನನಗೆ ಒಂದೂ ಅರ್ಥ ಆಗಲಿಲ್ಲ!'

"ಔದು ಸಾ... ನಾನು ನಿಯತ್ತಿನ ಮನುಸ್ಯ ಸಾ... ನಂಗೆ ಸಾಯ ಮಾಡ್ದೋರನ್ನ ಯಾವತ್ತೂ ಮರೆಯೋದಿಲ್ಲ ಸಾ... ಅಂದಾಗೆ ನಾ ಯಾರು ಅಂತ ಗೊತ್ತಲ್ವಾ ಸಾ..." ಚೆಂಗ ಒಂದೇ ಉಸಿರಿಗೆ ಹೇಳಿದ.

ಚೆಂಗ ಗೇಟಿನಿಂದ ಹಿಂದೆ, ರವೀಂದ್ರ ಅವರು ಮನೆಯ ಬಾಗಿಲಿನ ಒಳಗೆ; ಚೆಂಗನ ಮಾಸ್ಕು ಗಲ್ಲದ ಕೆಳಗೆ, ರವೀಂದ್ರ ಮೂಗಿನ ತುದಿ ಮುಚ್ಚುವಷ್ಟು ಎಳೆದುಕೊಂಡಿದ್ದರು.

ರವೀಂದ್ರ ಅವರು 'ನಿಮ್ಮ ಸರ್ ನಿನ್ನ ಬಗ್ಗೆ ಹೇಳ್ತಾನೆ ಇರ್ತಾರೆ. ಒಂದೆರಡು ಸಲ ನಿನ್ನ ನೋಡೂ ಇದೀನಿ... ನಿನ್ನ ವಿಚಾರ ಎಲ್ಲಾ ಗೊತ್ತಪ್ಪ! ಆದ್ರೆ ರಿಟೈರ್ ಆಗಿರೋ ನನ್ನಿಂದ, ಮನೆಯಿಂದ ಹೊರಗೆ ಕಾಲೇ ಇಡದ ಈ ಕೊರೋನಾ ಸಮಯದಲ್ಲಿ ಏನು ಸಹಾಯ ಆಯ್ತು ಗೊತ್ತಾಗ್ಲಿಲ್ಲ...'

"ಅದ್ನ ಏಳಾಮಾ ಅಂತ್ಲೇ ಬಂದೆ ಸಾ... ನಾನು ಮನಿ ಒಳೀಕ್ಕೆ ಬರಾಕ್ಕಿಲ್ಲ... ಇಲ್ಲೆ ನಿಂತು ಮಾತಾಡ್ತೀನಿ ಸಾ..." ಎಂದು ಹೇಳಿ, ಚೆಂಗ ತನ್ನ ಎರಡೂ ಕೈಗಳಲ್ಲಿದ್ದ ದೊಡ್ಡ ಚೀಲಗಳನ್ನು ಗೇಟ್ ಒಳಗೆ ಇಟ್ಟು, ಜೇಬಿನಿಂದ ಸ್ಯಾನಿಟೈಸರ್ ಸ್ಪ್ರೇ ತೆಗೆದು ಚೀಲಗಳಿಗೆ ಚೆನ್ನಾಗಿ ಸ್ಯಾನಿ-ಸ್ನಾನ ಮಾಡಿಸಿದ!

"ಸಾ... ಇದ್ರಲ್ಲಿ ಬಾಳೆ ಪರಂಗಿ ಸೇಬು ಸೀಬೆ ಮಡಗಿವ್ನಿ. ಅದರಲ್ಲಿ ಓಂ ಮೇಡ್ ಪ್ರಾಡಕ್ಟು ಸಾ... ಬೇಕಾದಾಗೆ ಉಪಯೋಗಿಸಿ ಸಾ..."

ಅಷ್ಟು ಹೊತ್ತಿಗೆ ರವೀಂದ್ರರ ಹಿಂದೆ ಜಮಾಯಿಸಿದ್ದ ಅವರ ಮನೆಯವರೆಲ್ಲ ಒಂಟೆ ಕತ್ತು ಮಾಡಿಕೊಂಡು ಚೀಲಗಳತ್ತ ಆಶ್ಚರ್ಯ ಚಿತ್ತ ಹರಿಸಿದ್ದರು.

'ಏನಿದು ಚೆಂಗ... ನನ್ಗೆ ಅರ್ಥ ಆಗ್ತಾ ಇಲ್ಲ!'   "ಏಳ್ತೀನಿ ಸಾ... ನೀವು ಮೊನ್ನೆ ನಿಮ್ಮ ಓಡಿಯೋ ಪೋಗ್ರಾಂನಾಗೆ..."

'ಓಡಿಯೋ ಅಲ್ಲಪ್ಪ ಅದು ನೋಡಿಯೋ ಪ್ರೋಗ್ರಾಮ್' ರವೀಂದ್ರ ತಿದ್ದಿದರು.

"ಎಲ್ಲಾ ಒಂದೇ ಅಲ್ವಾ ಸಾ...ನೋಡ್ತಾ ಇದ್ದಾಗೆ ಓಡ್ತಾ ಇತ್ತದೆ!... ಅಲ್ಲಿ ನೀವು ಸೌಂದರ್ಯ ವರ್ದ್ನೆ ಮಾಡಿಕೊಳ್ಳೋಣ ಎಂದರೆ ಬೂಟಿ ಪರೋಲ್‌ಗಳು ಮುಚ್ಚಿಕೊಂಡಿವೆ ಅಂತ ದುಕ್ಕ ತೋಡ್ಕೊಂಡಿದ್ದರಂತಲ್ಲ ಸಾ..."

'ಹೌದು ಹಾಗೆ ಹೇಳಿದ್ದೆ. ಆದರೆ ದುಃಖದಿಂದ ಅಲ್ಲ, ಹಾಸ್ಯಕ್ಕೆ ಹೇಳಿದ್ದು... ನಿಂಗೆ ಹೇಗೆ ಗೊತ್ತಾಯ್ತು...?'

"ನಮ್ಮ ಸಾ ಯೇಳಿದ್ರು ಸಾ... ದುಕ್ಕಾನೋ ಆಸ್ಯನೋ; ಆದ್ರೆ ಅದು ಹದಿನಾರಾಣೆ ನಿಜ ಅಲ್ಲವ್ರಾ... ನಾನು ತಿಳ್ಕಂಡಿರದು ಇಷ್ಟೇಯ... ಎಲ್ಲಿ ಸಮಸ್ಯೆ ಇತ್ತದೋ ಅಲ್ಲಿ ಅವಕಾಸ ಇತ್ತದೆ ಅಂತ! ನಾನು ತಕ್ಷಣ ನನ್ನ ಐಟಿ ಕಂಪನೀಲಿ ಮೀಟಿಂಗ್ ಕರ್ದೆ..."

'ನಿಂದೇ ಐ ಟಿ ಕಂಪನಿ ಇದೆ ಅಂತ ಗೊತ್ತು ಚೆಂಗಾ... ಮುಂದೆ ಹೇಳು...'

"ನಮ್ಮುಡುಗ್ರುಗೆ ಏಳ್ದೆ... ನೋಡ್ರೋ ಈಗ ಬೂಟಿ ಪರೋಲ್‌ಗಳು ತೆಗೆದಿಲ್ಲ. ಆದ್ರೆ ಆನ್ಲೈನ್ ಕ್ಲಾಸ್ಗಳು, ಝೂಮು, ಜಿಮೀಟು ಹೀಗೆ ಸ್ಟಾರ್ಟ್ ಆಗೋಗದೆ. ಅಲ್ಲಿ ಮುಖ ಚೆನ್ನಾಗಿ ಕಾಣ್ದಿದ್ರೆ ಏನು ಚೆಂದ?... ಅದ್ಕೆ "ಆನ್ಲೈನ್ ಕ್ಲಾಸ್ಗೆ ತಯಾರಾಗುವುದು ಹೆಂಗೆ" ಅಂತ ನರ್ಸರಿ - ಪ್ರೈಮರಿ ಮಕ್ಕಳಿಗೆ, ಅವರ ಅಮ್ಮಂದಿರಿಗೆ, ಟೀಚರ್ಸ್‌ಗೆ ಒಂದು ಆನ್ಲೈನ್ ಕೋರ್ಸು; ಐಸ್ಕೂಲು ಕಾಲೇಜುಗಳ ಐಕ್ಳಿಗೆ ಒಂದು ಕೋರ್ಸು, ಇನ್ನು ನಿಮ್ಮ ಓಡಿಯೋ ತರ ಪ್ರೋಗ್ರಾಂಗೆ ತಯಾರಾಗೋಕೆ ಅಂತ್ಲೇ ಒಂದು ಆನ್ಲೈನ್ ಕೋರ್ಸು ಶುರು ಹಚ್ಚಿಕೊಳ್ಳಿ ಅಂತ ಆಲ್ಡರ್ ಕೊಟ್ಟೆ. ಅರ್ಧ ದಿನದಲ್ಲಿ ಎಲ್ಲಾ ಆನ್ಲೈನ್ ಕೋರ್ಸ್ಗೋಳು ರೆಡಿ ಆದ್ವು. ಮೊದಲು ಸೇರ್ಕೋಳೊ ನೂರು ಜನಕ್ಕೆ ಓಂ ಮೇಡ್ ಮೇಕಪ್ ಕಿಟ್ ಉಚಿತ ಅಂತ ಹಾಕ್ಸಿದೆ. ಒಂದೇ ದಿನದಲ್ಲಿ ಎಲ್ಡೂವರೆ ಸಾವಿರ ಜನ ದುಡ್ಡು ಕೊಟ್ಟು ಸೇರಿಕೊಂಡವ್ರೇ ಸಾ..."

ರವೀಂದ್ರ ಬಿಟ್ಟ ಬಾಯಿ ಬಿಟ್ಟುಕೊಂಡು ಕೇಳುತ್ತಿದ್ದರು.

'ಚೆಂಗ ಹೋಂ ಮೇಡ್ ಕಿಟ್ ಅಂದ್ಯಲ್ಲ ಹಾಗಂದ್ರೆ?' "ಸರ್ ಅದಕ್ಕೆ ಇನ್ನೊಂದು ಬಿಜ್ನೆಸ್ ಶುರು ಹಚ್ಚಿಕೊಂಡಿದೀನಿ ಸಾ... ತೆಳ್ಳಗೆ ಬೆಳ್ಳಗೆ ಇರೋರಿಗೆ ಒಂದು ತರಹ ಕಿಟ್ಟು, ಇನ್ನು ಗೋದಿಬಣ್ಣ ಸಾದಾರಣ ಮೈಕಟ್ಟಿನೋರಿಗೆ ಬೇರೆ ರೀತಿ ಕಿಟ್ಟು, ಕಲ್ಯಾಣ ಕರ್ನಾಟಕದೋರಿಗೆ ಒಂತರಾ ಕಿಟ್ಟು, ಇದ್ಯಾವುದಕ್ಕೂ ಸೇರದವರಿಗೆ ಬೇರೆ ಸ್ಪೆಷಲ್ ಕಿಟ್ಟು... ಆನ್ಲೈನ್ನಲ್ಲೇ ಅವರ ಬಣ್ಣ ತಿಳಿಸೋಕೆ ಆಪ್ಸನ್ ಐತೆ ಸಾ..."

'ಅಲ್ಲ ಚೆಂಗಾ, ನಿನ್ನ ಇನ್ಫರ್ಮೇಷನ್ ಟೆಕ್ನಾಲಜಿ ಕಂಪನಿ ಬಗ್ಗೆ ಕೇಳಿದ್ದೆ. ಸೌಂದರ್ಯ ಪ್ರಸಾಧನಗಳನ್ನು ತಯಾರಿ ಮಾಡೋಕೆ ಯಾವಾಗಿಂದ ಶುರು ಮಾಡ್ದೆ?'

'ನಿನ್ನೆ ತಾನೆ ಶುರುಮಾಡಿದ್ದು ಸಾ... ಎರಡು ಗಂಟೆ ಬೇಕಾಯ್ತು ಸಾ ಪಾರ್ಮುಲ ಕಂಡಹಿಡಿಯಾಕ್ಕೆ!... ಒಂದು ಸೀಕ್ರೆಟ್ ಅಂಚಿಕೊಳ್ತೀನಿ ಯಾರತ್ರನು ಬಾಯಿ ಬಿಡಬೇಡಿ ಸಾ... ಎಣ್ಣೆ ಬಂದಾಗ ತೂರ್ಕೋ ಅಂತ, ಏನೋ ಒಂದ್ನಾಕು ಕಾಸು ಮಾಡ್ಕೋತಿದೀನಿ ಸಾ... "

'ಅದು ಗಾಳಿ ಬಂದಾಗ ತೂರಿಕೋ ಅಂತ ಕಣಪ್ಪ... ಆಮೇಲೆ ...?'

"ತೆಳ್ಳಗೆ ಬೆಳ್ಳಗೆ ಇರೋರ ಕಿಟ್‌ನಲ್ಲಿ ಅಕ್ಕಿಇಟ್ಟು ಅರ್ಸ್ಣ ಬೆರೆಸಿದ ಪುಡಿ, ಗೋದಿ ಬಣ್ಣದೋರಿಗೆ ಗೋದಿಇಟ್ಟು ಅರ್ಸ್ಣ, ಕಲ್ಯಾಣ ಕರ್ನಾಟಕದವರಿಗೆ ಜೋಳದ ಹಿಟ್ಟಿಗೆ ಅರ್ಸ್ಣ ಸೇರ್ಸಿದ ಪ್ಯಾಕೆಟ್ಟು, ಸ್ಪೆಷಲ್'ನಲ್ಲಿ ಇವೆಲ್ಲವನ್ನು ಒಟ್ಟಿಗೆ ಬೆರ್ಸಿ ಇಟ್ಟಿರ್ತೀವಿ ಸಾ...

ನೋಡಿ ಸಾ ನೀವು ಬೂಟಿ ಪರೋಲ್ ಗಳು ಮುಚ್ಚೈತೆ ಅಂತ ಯೋಳಿ ನನ್ನ ಕಣ್ಣು ತೆರ್ಸಿದ್ರಿ ಸಾ...

ಅದ್ರಿಂದಲೇ ಇವೆಲ್ಲಾ ಶುರು ಅಚ್ಚಿಕೊಂಡಿವ್ನಿ. ಇನ್ನೊಂದು ಎಲ್ಡು ಮೂರು ತಿಂಗಳು ಒಳ್ಳೆ ಡಿಮ್ಯಾಂಡ್ ಇರ್ತೈತೆ ಸಾ... ಅದ್ಕೆ ನಿಮ್ಗೆ ತಿಳ್ಸಿ ನಿಂ ಆಸೀರ್ವಾದ ತಗಂಡ್ ಓಗಾಮಾ ಅಂತ ಬಂದಿವ್ನಿ ಸಾ..."

ರವೀಂದ್ರರಿಗೆ ಏನು ಹೇಳಬೇಕೋ ಗೊತ್ತಾಗಲಿಲ್ಲ! ಅವನಿಗೆ ಕೈಮುಗಿದು 'ನಿನಗೆ ಒಳ್ಳೆಯದಾಗಲಪ್ಪಾ!' ಅಂದರು.

"ತ್ಯಾಂಕ್ಸ್ ಸಾ... ನಾ ಬತ್ತೀನಿ, ಕಿಟ್ಟುಗೊಳ್ನ ಡಿಸ್ಪ್ಯಾಚ್ ಮಾಡಿಸಬೇಕು... ಅಂದಂಗೆ ನಿಮ್ಮ ಓಡಿಯೋ ಮೆಂಬರ್ಸ್‌ಗೆ ಏಳ್ಬಿಡಿ ಸಾ.. ಅವರು ನಮ್ಮ ಆನ್ಲೈನ್ ಕೋರ್ಸ್ಗೆ ಸೇರುವಾಗ 'ರವೀಂದ್ರ' ಅಂತ ಡಿಸ್ಕೌಂಟ್ ಕೋಡ್‌ನಲ್ಲಿ ಹಾಕಿದರೆ ಅವರಿಗೆ 60% ಡಿಸ್ಕೌಂಟ್ ಕೊಡ್ತೀನಿ ಸಾ... ! ಹಂಗೆ ಅವ್ರಿಗೆಲ್ಲಾ ಎಲ್ಡು ಎಲ್ಡು ಕಿಟ್‌ಗಳ್ನ ಪ್ರೀ ಕಳಿಸ್ತೀನಿ ಸಾ... ನಂಸ್ಕಾರ ಸಾ ..."

ಕೈಮುಗಿದ ಚೆಂಗ, ಡ್ರೈವರ್ ಬಾಗಿಲು ತೆಗೆಯುತ್ತಿದ್ದ ಹಾಗೆ ತನ್ನ ದೊಡ್ಡ ಕಾರ್ ಹತ್ತಿದ!

- ಜಿ ವಿ ಅರುಣ

ಕರ್ಣಭೇದನ:

ಕೃಷ್ಣ : ವಸುಷೇಣ, . ಬಾ . ರಥವೇರು. ನನ್ನ ಪಕ್ಕದ ಆಸನ ಶೂನ್ಯವಾಗಿದೆ. ಎಂದೋ ದೊರೆಯಬೇಕಾಗಿದ್ದ , ಹಿರಿಯನಾದ ನಿನ್ನ ಆಲಿಂಗನ ಸುಖಕ್ಕಾಗಿ ನನ್ನ ಶರೀರ ಕಾತರಿಸುತ್ತಿದೆ. ಯಾಕೆ ನನ್ನ ಕುರಿತು ಬೇಸರ. ಯಾಕೆ ಈ ಉದಾಸೀನತೆ. ನನ್ನ ಈ ಸಣ್ಣ ಕೋರಿಕೆಯನ್ನೂ ನೀನು ನಡೆಸಿಕೊಡಲಾರೆಯಾ ?

ಕರ್ಣ : ಕೃಷ್ಣ, ಇದೆಂತಹ ಹೇಳಿಕೆ. ಎಲ್ಲಿಯ ಪರುಷಮಣಿ, ಎಲ್ಲಿಯ ಬೆಣಚುಗಲ್ಲು . ಎಲ್ಲಿಯ ಯದುಕುಲೋದ್ಭವನಾದ ಕೃಷ್ಣ , ಎಲ್ಲಿಯ ಕುಲಹೀನನಾದ ಯಃಕಶ್ಚಿತ ಕರ್ಣ. ಕೊಡುವವನ ಔದಾರ್ಯವನ್ನು , ಕೃಷ್ಣ, ಪಡೆಯುವವನ ಅತ್ಯಾಸೆ ಬಲಿಪಡೆಯಬಾರದಲ್ಲ ? ರಾಜ ಹಂಸದ ಮುಂದೆ ಕಾಗೆ ಕುಳ್ಳಿರಬಹುದೇ ?

ಕೃಷ್ಣ: ಕರ್ಣ , ನನ್ನ ನೋವನ್ನೋ ನಲಿವನ್ನೋ ಹಂಚಿಕೊಳ್ಳಲು ನಿನಗಿಂತಲೂ ಹತ್ತಿರದವರು ಯಾರಿದ್ದಾರೆ.? ನಿನ್ನೆ ರಾತ್ರಿ ವಿದುರನ ಮನೆಯಲ್ಲಿ ನನ್ನತ್ತೆ ಕುಂತಿಯನ್ನು ಭೇಟಿಯಾದೆ ಕರ್ಣ. ಪಾಂಡವರ ಕುರಿತಾದ ಮಾತುಕತೆಯಲ್ಲಿ ಅತ್ತೆ ಪಡೆದ ಐದು ವರದ ಪ್ರಸ್ತಾಪ ಬಂದಿತು. ಕೌಂತೇಯರು ಐವರಾದರೂ, ಬಳಸಿದ ಮಂತ್ರಗಳು ಕೇವಲ ನಾಲ್ಕಲ್ಲವೇ? ದುರ್ವಾಸ ಮುನಿಗಳ ವರ ! ವರ ಬಂಜರು ಆಗಬಾರದಲ್ಲ ? ಮಾತಿನ ಮಧ್ಯದಲ್ಲಿ , ಐದನೇ ವರದ ಪ್ರಸ್ತಾಪವೂ ಬಾಯಿ ತಪ್ಪಿ ಬಂದು ಹೋಯಿತು ಕರ್ಣ. ಪಾಪ , ನನ್ನತ್ತೆ ಕುಂತಿ ಎಷ್ಟು ನೊಂದಳೋ ಏನೋ ? . ಕಣ್ಣೀರ ಕೋಡಿಯನ್ನೇ ಹರಿಸಿದಳು. ಮೊದಲ ವರದ ಪ್ರಸ್ತಾಪವನ್ನು ನೋವಿನಲ್ಲೇ ಹೇಳಿದಳು.

ಕರ್ಣ: ಕೃಷ್ಣ , ಈ ಅನಾಥನಿಗೆ , ನಿಮ್ಮಂತಹ ರಾಜ ಕುಟುಂಬದವರ ವಿಷಯ ಯಾಕೆ. ಇಲ್ಲಿ ಕಥೆ ಹೇಳಲಿಕ್ಕುಂಟೋ ? ಹೇಳಿ ಕೇಳಿ ಕೌಂತೇಯರು ನನ್ನೊಡೆಯನ ಶತೃಗಳು. ಹಾಗೆ ನನ್ನ ವಿರೋಧಿಗಳು. ವಿರೋಧಿಗಳಲ್ಲಿ ಕನಿಕರ ತರವೇ

ಕೃಷ್ಣ. ನಿನ್ನ ಅಂತರಂಗಕ್ಕೆ ನನ್ನ ಸ್ಪಂದನೆ ಇಲ್ಲ. ಕುಂತಿಯ ಕಥೆಯನ್ನು ಬಿಡು. ನನ್ನ ಕುರಿತಷ್ಟೇ ಸಾಕು ನಮ್ಮ ಮಾತುಕತೆ.

ಕೃಷ್ಣ : ಕರ್ಣ, . ಮದುವೆಯ ಮುಂಚೆಯೇ , ಬಾಲ ಕುತೂಹಲೆಯಾದ ನನ್ನತ್ತೆ , ದುರ್ವಾಸ ಮುನಿಯ ವರದ ಪರೀಕ್ಷೆಮಾಡಲು, ಮನಸ್ಸು ಮಾಡಿದಳು. ಭಗವಾನ್ ಭಾಸ್ಕರನನ್ನು ಧ್ಯಾನಿಸಿದಳು. ದುರ್ವಾಸ ಮುನಿಯ ವರ. ಗಂಡು ಮಗುವಿಗೆ ಜನ್ಮವಿತ್ತಳು ಅತ್ತೆ ಕುಂತೀದೇವಿ. ಸಮಾಜದ ಭಯ ಕರ್ಣಾ , ಬಂಗಾರದ ರಾಶಿಯನ್ನು ಹಾಕಿ ಪೆಟ್ಟಿಗೆಯಲ್ಲಿಟ್ಟು ನದಿಯಲ್ಲಿ ತೇಲಿಬಿಟ್ಟಳಂತೆ. ತಾಯಿ ಕರುಳು ಕರ್ಣಾ . ಪೆಟ್ಟಿಗೆಯ ಗತಿ ಏನಾಯಿತು ಎನ್ನುವ ಕಾಳಜಿ ಇತ್ತು.

ಕರ್ಣ: ಕಥೆಯೇನೋ ಸುಂದರವಾಗಿದೆ . ಮತ್ತೆ ?

ಕೃಷ್ಣ: ಕುಂತೀ ಭೋಜನ ಮಗಳಾದವಳಿಗೆ , ಅದಿರಥನಿಗೆ ಸಿಕ್ಕಿದವ ವಸುಷೇಣ ಎಂದು ತಿಳಿಯಲು ಕಷ್ಟವಾಗಲಿಲ್ಲ. ಮಗು ಎಲ್ಲಿಯಾದರೂ ಸುಖವಾಗಿರಲಿ ಎಂದು ಆಶಿಸಿದಳು. ಮಗುವಿನ ಬೆಳವಣಿಗೆಯಲ್ಲಿ ತನ್ನ ದುಃಖವನ್ನು ಮರೆಯಲು ಪ್ರಯತ್ನಿಸಿದಳು. ಆ ದೇವಿ ಕುಂತಿಯು ಪಡೆದ ಮೊದಲ ಮಗನೇ ನೀನು. ವಸುಷೇಣ . ರಾಧೇಯ. ಪಾಂಡವರ ಹಿರಿಯಣ್ಣ.

ಕರ್ಣ : ನನ್ನ ದುರ್ವಿಧಿಯೇ. ಈ ಸಂದರ್ಭದಲ್ಲಿ ನನಗೆ ಈ ಸತ್ಯ ಗೊತ್ತಾಗಬೇಕೇ. ತಂದೆ ಅಧಿರಥನೊಂದಿಗೆ ಹಸ್ತಿನಾವತಿಗೆ ಬಂದಾಗ ಗೊತ್ತಾಗಲಿಲ್ಲ. ಕುರು ಪಾಂಡವರ ಶಸ್ತ್ರ ವಿದ್ಯಾ ಪರೀಕ್ಷಾಕಾಲದಲ್ಲಿ ಗೊತ್ತಾಗಲಿಲ್ಲ. ದ್ರೌಪದೀ ಸ್ವಯಂವರದ ಕಾಲದಲ್ಲಿ ಗೊತ್ತಾಗಲಿಲ್ಲ. ರಾಜಸೂಯ ಯಾಗದಲ್ಲಿ, ನಿನಗೆ ಅಗ್ರಪೂಜೆ ನಡೆದಾಗ, ನನ್ನನ್ನು ಅಡ್ಡ ಪಂಕ್ತಿಗೆ ಸೇರಿಸಿದಾಗ ಗೊತ್ತಾಗಲಿಲ್ಲ. ನಾನು ಸೂತನ ಮಗನಾಗಿ , ಸೂತ ಸಂಸ್ಕಾರ ಹೊಂದಿ , ಸೂತರ ಹೆಣ್ಣುಮಗಳನ್ನು ಮದುವೆಯಾಗಿ , ಸೂತ ಮಕ್ಕಳಿಗೆ ಅಪ್ಪನಾದ ಮೇಲೆ ಈಗ ಗೊತ್ತಾಗಿ ಪ್ರಯೋಜನವೇನು?

ಕೃಷ್ಣ: ನಾನು ಶಾಂತಿ ಪ್ರತಿಪಾದಕ ಎನ್ನುವದು ನಿನಗೂ ಗೊತ್ತು ಕರ್ಣ. ನನಗೂ ನಿನ್ನೆ ರಾತ್ರಿ ಗೊತ್ತಾಯಿತು ನಿನ್ನ ಪೂರ್ತಿ ವಿವರ . ಜಾತಿಯಿಂದಲೇನು ಬಿಡು. ನಾನೂ ಸಹ ಗೋವಳನಾಗಿಯೇ ಬೆಳೆಯಲಿಲ್ಲವೇ. ನೋವನ್ನು ಅನುಭವಿಸಲಿಲ್ಲವೇ ? ಹಳೆಯ ನೋವನ್ನು ಮರೆತು ಹೊಸ ಜೀವನವನ್ನು ಅನುಭವಿಸಬೇಕಾದದ್ದು ಬುದ್ಧಿವಂತರ ಲಕ್ಷಣ. ಕರ್ತವ್ಯವೂ ಹೌದು. ನೀನು ಸಿದ್ಧನಾದರೆ ಎಂತಹ ಸಂಭ್ರಮ. ನೂರೈವರು ಕುರುಪಾಂಡವರಿಗೂ ನೀನು ಹಿರಿಯಣ್ಣ. ನೀನೊಮ್ಮೆ ಮನಸ್ಸು ಮಾಡಿದರೆ, ಹಸ್ತಿನಾವತಿಯ ಸಾಮ್ರಾಟ ಪಟ್ಟ ನಿನಗೇ. ಸುಯೋಧನನಿಗೆ ಎಷ್ಟು ಸಂತೋಷವಾದೀತು. ಪಾಂಡವರಂತೂ ನಿನ್ನಲ್ಲಿ ಧರ್ಮರಾಜನನ್ನೇ ಕಾಣುತ್ತಾರೆ. ಎಡದಿ ಪಾಂಡವರಿರೆ , ಬಲದಲ್ಲಿ ಕೌರವರು. ನಡುವೆ ಗದ್ದುಗೆಯನೇರು, ತಾರಾಮಂಡಲದಲ್ಲಿ ಶೋಭಿಸುವ ಚಂದ್ರಮನ ಹಾಗೆ. ಮಹಾಯುದ್ಧವನ್ನು ನಿಲ್ಲಿಸಿದ ಶ್ರೇಯಸ್ಸು ಯಾರದು ? ಹಸ್ತಿನಾವತಿಯ ಚಕ್ರೇಶ್ವರ ದಾನಶೂರ ಕರ್ಣನದ್ದು.

ಕರ್ಣ : ಏನು ಮರುಳು ನಿನ್ನದು. ಕೌರವನ ಭೂವಲಯದ ಆಸೆಯೊ ನನ್ನದು?. ಕೌರವನ ತಂಬುಲದ ಬಟ್ಟಲನ್ನು ಹಿಡಿಯುವದಕ್ಕಿಂತ ಹೆಚ್ಚಿನ ಭಾಗ್ಯ ಏನು ಸಿಕ್ಕೀತು ? ನಾಳೆ ಪ್ರಪಂಚ ಕರ್ಣನನ್ನು ಏನನ್ನಬಹುದು. ಪಾಂಡವರು ಹಾಗೂ ಕೌರವರಿಂದ ಸೇವೆ ಮಾಡಿಸಿಕೊಳ್ಳುವದರಲ್ಲಿ ನನಗೆ ಮನಸ್ಸಿಲ್ಲ. ನನ್ನ ಈ ಶರೀರ ಸುಯೋಧನನ ಋಣದಲ್ಲಿದೆ. ನನ್ನ ತ್ವಚೆಯನ್ನೇ ಸೀಳಿ ಪಾದುಕೆಯನ್ನಾಗಿ ಸುಯೋಧನನಿಗೆ ತೊಡಿಸಿದರೂ ನನ್ನ ಋಣ ತೀರಲಿಕ್ಕಿಲ್ಲ.

ಕೃಷ್ಣ: ನೀನು ರಾಜನಾದರೆ ಮಹಾವಿಪತ್ತನ್ನು ತಪ್ಪಿಸಬಹುದು . ನೀನು ಸಿದ್ಧನಾಗದೇ ಇದ್ದಲ್ಲಿ ಯುದ್ಧ ಅನಿವಾರ್ಯ. ಯುದ್ಧದಲ್ಲಿ ಇಂತವರಿಗೇ ಜಯ ಎನ್ನುವಂತಿಲ್ಲವಲ್ಲ. ಪಾಂಡವರಿಗೆ ಹತ್ತಿರದವ ನೀನು. ಹಿಂದೆ ಶ್ರೀರಾಮಚಂದ್ರ ಹೇಳಿದ್ದಾನಂತೆ, ಪ್ರಪಂಚದಲ್ಲಿ ಎಲ್ಲವನ್ನೂ ಪಡೆಯಬಹುದು. ಆದರೆ ಸಾಹೋದರ್ಯ ಪಡೆಯುವಂತಹದ್ದಲ್ಲ. ಜನ್ಮನಾ ಬರುವದು ಅಂತ. ಹಸ್ತಿನಾವತಿಯಲ್ಲಿ ನನ್ನ ಅತ್ತೆ ಹಾಗೂ ಅತ್ತೆಯಮಕ್ಕಳು ಅನಾಥರು ಅಂತ ಕುಂಬಾರನ ಮನೆಯಲ್ಲಿ ನನ್ನ ಪ್ರಾಣಗಳಂತೆ ಕಾಯುತ್ತೇನೆ ಅಂತ ಹೇಳಿದ್ದಿತ್ತು. ಈಗೇನೂ ಹಾಗಿಲ್ಲವಲ್ಲ ? ಪಾಂಡವರು ವೀರಾಗ್ರೇಸರ ಮಹಾರಥಿ ಕರ್ಣನ ತಮ್ಮಂದಿರು. ಅನಾಥರಲ್ಲ. ಇದು ಸುಳ್ಳಾಗಲಿಕ್ಕುಂಟೋ. ಯುದ್ಧದಲ್ಲಿ ಬರುತ್ತೇನೆ ಅಂತ ಒಪ್ಪಿಕೊಂಡಿದ್ದೇನೆ, ನಿರಾಯುಧನಾಗಿ ಹೇಗೂ ಅರ್ಜುನನ ಕುದುರೆಗಳನ್ನು ಹೊಡೆಯುವ ಬಾರುಕೋಲಿದೆ. ಇನ್ನು ನೀನುಂಟು ನಿನ್ನ ತಮ್ಮಂದಿರುಂಟು.

ಕರ್ಣ: ಕೃಷ್ಣ, ಕೇಳು.

ಮಾರಿಗೌತಣವಾಯ್ತು ನಾಳಿನ / ಭಾರತವು ಚತುರಂಗ ಬಲದಲಿ/ಕೌರವನ ಋಣ ಹಿಂಗೆ ರಣದಲಿ ಸುಭಟಕೋಟಿಯನು// ತೀರಿಸಿಯೆ ಪತಿಯವಸರಕ್ಕೆ ಶ/ ರೀರವನು ನೂಕುವೆನು ನಿನ್ನಯ / ವೀರರೈವರ ನೋಯಿಸೆನು ರಾಜೀವ ಸಖನಾಣೆ.//

ಜೀವಿ.ಹೆಗಡೆ.

ಕರೋನಾ ನೀತಿಪಾಠ

ಕೀಳ್ಯಾವ್ದು ಮೇಲ್ಯಾವುದೋ ಕರೋನಾಗೆ

ಕೀಳ್ಯಾವ್ದು ಮೇಲ್ಯಾವುದೋ ...

ಬಡತನ ಸಿರಿತನ ಲೆಕ್ಕವೇ ಇಲ್ಲವೋ

ಕೀಳ್ಯಾವ್ದು ಮೇಲ್ಯಾವುದೋ ...ಓ..ಹುಚ್ಚಪ್ಪ

ಕೀಳ್ಯಾವ್ದು ಮೇಲ್ಯಾವುದೋ ಕರೋನಾಗೆ

ಕೀಳ್ಯಾವ್ದು ಮೇಲ್ಯಾವುದೋ ...

ವಿಶ್ವಕ್ಕೆ ಮಣ್ಣು ಮುಕ್ಕಿಸಿದ ಕರೋನಾಗೆ

ಕೀಳ್ಯಾವ್ದು ಮೇಲ್ಯಾವುದೋ ...

ತೈಯ್ಯಕ್ಕು ಥಾ ಗಿಡತಕ್ ತೈಯ್ಯಕ್ಕು ಥಾ ಗಿಡತೈ

ತೈಯ್ಯಕ್ಕು ಥಾ ಗಿಡತಕ್ ತೈಯ್ಯಕ್ಕು ಥಾ ಗಿಡತೈ

ಧಿತ್ತಿರಿ..ಧಿತ್ತಿರಿ..ಧಿತ್ತಿರಿ..ಧಿತ್ತಿರಿ..ಧಿತ್ತಿರಿ..ಧಿತ್ತಿರಿ..ಧಿತ್ತಿರಿ..

ಧಿತ್ತಿರಿ..ಧಿತ್ತಿರಿ..ಧಿತ್ತಿರಿ..

ಲಾಗ ಹಾಕಿದರೂ ಹೆಮ್ಮಾರಿ ಹೋಗದು

ಹಣೆಯ ಚೆಚ್ಚಿಕೊಂಡ್ರು ಕರೋನ ಸಾಯದು

ತೈಯಕ್ಕು ಥಾ ಗಿಡತಕ್ ತೈಯಕ್ಕು ಥಾ ಗಿಡತೈ

ಲಾಗ ಹಾಕಿದರೂ ಹೆಮ್ಮಾರಿ ಹೋಗದು

ಹಣೆಯ ಚೆಚ್ಚಿಕೊಂಡ್ರು ಕರೋನ ಸಾಯದು

ಹಣೆಯ ಚೆಚ್ಚಿಕೊಂಡ್ರು ಕರೋನ ಸಾಯದು

ಚಿಕ್ಕಣ್ಣ ದೊಡ್ಡಣ್ಣ ಲೆಕ್ಕವೇ ಇಡದು

ಧಿತ್ತಿರಿ..ಧಿತ್ತಿರಿ..ಧಿತ್ತಿರಿ..ಧಿತ್ತಿರಿ..ಧಿತ್ತಿರಿ..

ಧಿತ್ತಿರಿ..ಧಿತ್ತಿರಿ..ಧಿತ್ತಿರಿ..

ಚಿಕ್ಕಣ್ಣ ದೊಡ್ಡಣ್ಣ ಲೆಕ್ಕವೇ ಇಡದು

ಸಂಯಮ ತೋರದೆ ಹಿಡಿತಕೆ ಸಿಗದು

ಕೀಳ್ಯಾವ್ದು ಮೇಲ್ಯಾವುದೋ ಕರೋನಾಗೆ...Repeat 1

ದುಡ್ಡಿದ್ದವರಿಗೆ ಹೆಂಗೊ ಜೀವನ

ಹೇ..ಹೇ..ಹೇ..ಹೇ..ಹೇ..ಹೇ..ಹೇ

ದುಡಿವರಿಗೆ ಕಣ್ಣೀರೇ ಕಥನ

ಹೇ..ಹೇ..ಹೇ..ಹೇ..ಹೇ..ಹೇ..ಹೇ

ದುಡ್ಡಿದ್ದವರಿಗೆ ಹೆಂಗೊ ಜೀವನ

ದುಡಿವರಿಗೆ ಕಣ್ಣೀರೇ ಕಥನ

ವೈದ್ಯರೇ ನಮ್ಮ ಪ್ರತ್ಯಕ್ಷ ದೇವ

ಧಿತ್ತಿರಿ...ಧಿತ್ತಿರಿ..ಧಿತ್ತಿರಿ...ಧಿತ್ತಿರಿ

ವೈದ್ಯರೇ ನಮ್ಮ ಪ್ರತ್ಯಕ್ಷ ದೇವ

ದಾದಿಯೇ ನಮ್ಮ ನಲ್ಮೆಯ ಅಮ್ಮ
ಕೀಳ್ಯಾವ್ದು ಮೇಲ್ಯಾವುದೋ...Repeat1

ಕರೋನ ಕಲಿಸಿದ ಪಾಠವ ಕಲಿತು
ಸ್ವಚ್ಛತೆಗೆ ನಾವು ಕೊಡೋಣ ಒತ್ತು
ಕರೋನ ಕಲಿಸಿದ ಪಾಠವ ಕಲಿತು
ಸ್ವಚ್ಛತೆಗೆ ನಾವು ಕೊಡೋಣ ಒತ್ತು
ಮೇಲುಕೀಳೆಂಬ ಭೇದವ ಬಿಟ್ಟು
ಜಕ್ಕಣಕ್ಕ..ಣಕ್ಕಣಕ..ಜಕ್ಕಣಕ್ಕ..ಣಕ್ಕಣಕ..
ಮೇಲುಕೀಳೆಂಬ ಭೇದವ ಬಿಟ್ಟು
ಸಮಬಾಳ್ವೆಗೆ ನಾವ್ ಹಿಡಿಯೋಣ ಪಟ್ಟು..
ಮಾಸ್ಕನ್ನು ಧರಿಸಿ ..ದೂರವ ಕಾಪಾಡಿ
ಮಾಸ್ಕನ್ನು ಧರಿಸಿ ..ದೂರವ ಕಾಪಾಡಿ
ಆರೋಗ್ಯ ಸೌಭಾಗ್ಯವೋ ಓ ಮನುಜ
ಆರೋಗ್ಯವೆ ಸೌಭಾಗ್ಯವೋ
ಎಲ್ಲಾರು ಒಟ್ಟಾಗಿ ಹೋರಾಡಿ ಗೆಲ್ಲೋಣ
ಕರೋನಾವ ಓಡಿಸೋಣವೋ
ಕರೋನಾವ ಓಡಿಸೋಣವೋ
ಹೆಮ್ಮಾರಿಯ ಓಡಿಸೋಣವೋ:-
ಹೊಯ್...
ಕೆ.ಆರ್.ವೆಂಕಟೇಶ್ (ಮನೋಹಂಸ)

ಕವನ - ೧

ಕೆರೆಗಳ ಕೊರಗು

ಕೆರೆಗಳ ಆತ್ಮನುಡಿಯಿತು...
ಮೌನದಿಂದ ನಾವೂ ಇದ್ದೆವು

ಹಳ್ಳಿ, ಶಹರ, ಪ್ರಾಣಿ ಪಕ್ಷಿ ಎಲ್ಲರನ್ನೂ
ನಾವೂ ಸಲಹುತಿಹೆವು ನಾವೇ ಕೆರೆಗಳು
ನಿಂತೆಡೆ ನಿಂತು ಎಲ್ಲರ ಬದುಕಿನ ನಂಟು
ನಮ್ಮ ಅಸ್ತಿತ್ವವನ್ನು ಅರಿತವರು ಅನೇಕ
ದಡದಲ್ಲಿ ನಿಂತಿವೆ ಊರು ನೂರು ಸಾವಿರ

ಹೂಳು ತೆಗೆದು ಆಳಮಾಡಿತ್ತಿರುವರು
ಕಾರ್ಮೋಡ ಪ್ರೀತಿಯಲಿ ನೀರ ತುಂಬಿಹುದು
ಕೆಲವು ದುರುಳ ಮನಗಳು ಬಯಲು ಕಂಡು
ತಿಂದು ಹಾಕುವ ಹಂಬಲ, ಆಗಸದತ್ತ ಕಟ್ಟಲು ಕಟ್ಟಡ
ಏಕೆ ಕೆರೆ? ಬೇಕು ಮನೆ ಎಂದು ನುಂಗಿ ಬಿಟ್ಟರು
ನಂಬಿಹ ಜೀವಿಗಳತ್ತ ಅಟ್ಟಿ ಸಿಮೆಂಟ ಕಂಬ ನೆಟ್ಟರು

ಕುಡಿವ ನೀರಿಗೆ ವಿಷವ ಕಾರ್ಖಾನೆಯು ಉಗುಳಿತು
ಜಲ ಸಂಕುಲಗಳೆಲ್ಲ ಒಳಗೆ ಸಮಾಧಿಯಾಯಿತು
ಹೊಲಕೆ ಹರಿವ ನೀರು ಕೊಳಚೆಯಾಗಿ ಹೋಯಿತು
ನೆಲಕೆ ವಿಷವ ಬೆರೆಸಿ ರಕ್ತಪಾತವಾಗಿ ಬದುಕು ನರಕವಾಯಿತು
ನಡುವೆ ನಗುವ ಕಮಲ,ಪುಷ್ಪ ಎಲ್ಲವೂ ಬಾಡಿ ಹೋಯಿತು
ಕೆರೆ ನಾನು ಇದ್ದೆ ಬಾಳ ಸ್ತಂಭವಾಗಿ ಎಲ್ಲವೂ ಬರಿದಾಗಿ ಹೋಯಿತು

ನನ್ನ ಸ್ಥಳದಿ ಮನೆಯ ಕಟ್ಟಿ ನಕ್ಕು ನಲಿಯುತಿಹರು
ಆಗಸ ನೀರು ಸುರಿಸಿ, ನೀರು ತನ್ನ ದಿಕ್ಕಿನಲ್ಲಿ ತಾನು ಚಲಿಸಿ
ಮನೆಗೆ ನೀರು ನುಗ್ಗಿತೆಂದು ಬೊಬ್ಬೆ ಹೊಡೆವ ಮಂಕು ಮನುಜನೆ
ಕೆರೆಯಲಿ ಮನೆಯ ಕಟ್ಟಿ ನೀರನ್ನೆಲ್ಲ ನುಂಗಿ ಈಗ ಅಳುತ ನಿಂತನೆ
ನಾನು ಜೀವಜಲ ಅದನ್ನೇ ಮರೆತು ದರ್ಪ ನೀ ಮೆರೆದವನೆ
ಕೆರೆಯ ಬದುಕಿಸು ನೀನು ಜೀವಿಸು ಇಲ್ಲವೆ ನಿನ್ನ ಅಂತ್ಯ ಎಚ್ಚರ ಎಚ್ಚರ

ಕೆರೆಗಳಿಗಾಗಿ ಕರೆ..ಕೈಜೋಡಿಸು..ಓಗೊಡು ಮನುಜನೆ
ಬಾಳಿ ಬದುಕಿಸುವ..ಕೆರೆಗಳನ್ನ ಕಾಪಾಡುವ ಬಾ ಬಾಂಧವನೆ

- ಸಂಮ್ಮೋದ ವಾಡಪ್ಪಿ

ಕವನ - ೨

ಬಾಳು ಜಗದಲಿ

ಬಾನಿನ ಹಕ್ಕಿ
ಗೂಡಲಿ ಕುಳಿತು
ದೃಷ್ಟಿಯ ತೇಲಿಸಿತು
ಮಧುರ ರಾಗವ
ಕೇಳಲು ತಾನೂ
ಗಾನವ ಹೊಮ್ಮಿಸಿತು

ಭಾಸ್ಕರ ಕೆಂಪಗೆ
ನಗುಮೊಗ ಬೀರಿ
ಮೋಡದ ಅಂಚಿನಲಿ
ಮೂಡಲು ತಾನೂ
ಪುಷ್ಪವು ಹೊರಳಿತ್ತು

ಪಚ್ಚೆಯ ಬನವು
ಉಸಿರಿಗೆ ನಂಬುಗೆ
ಭವದ ಸಾಗರದಿ
ತೇಲಿಸೋ ಹುಟ್ಟನು
ತಾ ಜಗ ಕರುಣಿಸಿತು

ಭರವಸೆ ಬಾಳು
ಹಸಿರಿನ ಸೆರಗು
ಪ್ರೀತಿಯ ಸಿಂಚನ
ಜಗವೇ ಎರೆದಿತ್ತೂ
ಮನ ಭಂಗನೆ ಜಿಗಿದಿತ್ತು

ಅತ್ತಲು ದಾಟಿ
ಇತ್ತಲು ನೋಡುತ
ಚಂದ್ರನ ಕರೆದಿತ್ತು
ಮಿನುಗುವ ತಾರಾ
ಬಳಗವೂ ಬಂದಿತ್ತು

ಭೂಮಿ ಬಾನು
ನಾನು ನೀನು
ಜೀವನ ಪಾವನ
ಇದುವೇ ಪಯಣ
ಎಲ್ಲವೂ ಕೃಪೆಯಿಂದ

ನಗುತಲಿ ಬಾಳು
ನೀಡುತ ಬೆಳಗು
ಸಾಗುತ ನಿಲ್ಲದೆ
ಕ್ಲೇಷವ ಸರಿಸಿ
ದೈವಕೆ ತಲೆಬಾಗು

- ಸಂಮ್ಮೋದ ವಾಡಪ್ಪಿ

ಯಾರಿವರು?

ನನಗೀಗ ವಯಸ್ಸಾಗ್ತಿದೆ. ಅಯ್ಯೋ, ವಯಸ್ಸೇನು ಬಿಡಿ, ಹುಟ್ಟಿದಾಕ್ಷಣದಿಂದಲೇ ಶುರು ಆಗ್ಬಿಡುತ್ತೆ ಬೆಳೆಯೋಕೆ. ಆದರೆ ಆಗ ಆಗುವ ವಯಸ್ಸು ಏರು ವಯಸ್ಸು. ಈಗ ಆಗ್ತಿರೋದು ಇಳಿ ವಯಸ್ಸು. ಏರುವುದು ನಿಂತು ಇಳಿಯುವುದು ಯಾವಾಗ ಶುರುವಾಯ್ತೋ ಗೊತ್ತೇ ಆಗ್ಲಿಲ್ಲ ಅಂತೀನಿ! ಈಗಲೂ ಕೆಲವೊಮ್ಮೆ ವಯಸ್ಸು ಏರುತ್ತಾ ಇದೆಯೇನೋ ಎನ್ನುವ ಭಾವ! ಆದರೆ... ಸತ್ಯ? ಅದು ಹೇಳುತ್ತೆ.... 'ಏರುವುದು ನಿಂತು ಬಹಳ ಕಾಲವಾಗಿದೆ ಅಮ್ಮಣ್ಣೀ! ಇಳೀತಾ ಇರುವುದನ್ನು ಗಮನಿಸು. ಇಳಿಯುವುದರಲ್ಲೂ ಆನಂದವಿದೆ, ಸೊಬಗಿದೆ. ಅದನ್ನು ಸರಿಯಾದ ರೀತಿಯಲ್ಲಿ ಅನುಭವಿಸು' ಅಂತ.

ಹೌದಲ್ವೆ! ಈಗ ನಾನು ಎಚ್ಚೆತ್ತುಕೊಳ್ಳಲೇ ಬೇಕು. ಬದುಕಿನಲ್ಲಿ ಇನ್ನೂ ಮಾಡದ, ಮಾಡಬೇಕಾದ, ಮಾಡುತ್ತಿದ್ದು ಇನ್ನೂ ಮುಗಿಸದ, ಮಾಡಬಹುದಾದ ಅನೇಕ ಕೆಲಸಗಳಿವೆ. ಅವನ್ನೆಲ್ಲಾ ಒಂದೊಂದಾಗಿ ನಿಧಾನವಾಗಿಯಾದರೂ ಮಾಡಲೇಬೇಕು. ಹೀಗೆಂದು ನಿಶ್ಚಯಿಸಿ……ಈಗ ಏನು ಮಾಡಲಿ?… ಎಂದು ಯೋಚಿಸತೊಡಗಿದೆ.

ಮನಸ್ಸು ಬಾಲ್ಯಕ್ಕೆ ಹಾರಿತು. ಚಿಂತನೆ ಶುರುವಾಯಿತು. ಯೋಚಿಸಿದೆ, ಅಲ್ಲಾ, ನಾನು ಹುಟ್ಟಿದಾಗಿನಿಂದ ಇಂದಿನವರೆಗೆ ನನ್ನ ಬದುಕಿನಲ್ಲಿ ಅದೆಷ್ಟು ಆತ್ಮಬಂಧುಗಳು, ಬಾಂಧವರು, ಗೆಳೆಯ-ಗೆಳತಿಯರು ಹಾಸು ಹೊಕ್ಕಾಗಿ ಹೋಗಿದ್ದಾರೆ! ಇವರಿಂದಲೇ ಅಲ್ಲವೇ ನನ್ನೀ ಬದುಕು ಇಂದಿಗೂ ಸಾಗುತ್ತಿರುವುದು? ಇವರೇ ಅಲ್ಲವೇ ನನ್ನ ಬದುಕನ್ನು ಸಾಧ್ಯವಾದಷ್ಟೂ ಅರ್ಥಪೂರ್ಣವಾಗಿಸಿದವರು? ಇವರಿಗೆಲ್ಲಾ ನಾನು ಎಂದೂ ಕೃತಜ್ಞತೆಯನ್ನೇ ಹೇಳಲಿಲ್ಲವಲ್ಲಾ….. ಎಂದು ಮರುಗತೊಡಗಿದೆ.

ಅಲ್ಲಾ, atleast, ಈಗಲಾದರೂ ಮನಸ್ಸಿಗೆ ಈ ಕೃತಜ್ಞತೆ ಹೇಳುವ, ಪ್ರತ್ಯುಪಕಾರ ಮಾಡುವ, ನನ್ನ ಪ್ರೀತಿಯನ್ನು ಅವರಿಗೆ ನೇರಾ ನೇರ ತಿಳಿಸುವ ವಿಚಾರ ಹೊಳೀತಿದೆಯಲ್ಲ! ಸಧ್ಯ, ಇದನ್ನು ಮಾಡದೆ ಹಾಗೇ ಗೊಟಕ್ ಅಂದ್ರೆ ನನ್ನಷ್ಟು ಕೃತಘ್ನಳು ಇನ್ಯಾರಿದ್ದಾರು ಹೇಳಿ?

ಸರಿ, ಎಲ್ಲರ ಹೆಸರಿನ ಪಟ್ಟಿಯನ್ನೊಮ್ಮೆ ಮಾಡೋಣ ಅಂತ ಕುಳಿತೆ. ಅಯ್ಯೋ! ಹನುಮಂತನ ಬಾಲದಂತೆ ಬೆಳೆಯುತ್ತಾ ಹೋಯ್ತು ಪಟ್ಟಿ! ಕೆಲವರ ಹೆಸರೂ ನೆನಪಾಗುತ್ತಿಲ್ಲವೆ? ಛೆ.. ಛೆ… ಇದೆಂಥ ನಿರ್ಲಕ್ಷ್ಯ ಮನೋಭಾವ ನಂದು! ಕೆಲವರು ಎಂದೋ ಒಮ್ಮೊಮ್ಮೆ ನಾನಿದೀನಿ ಅಂತ ನೆನಪಿಸೋ ಹಾಗೆ ನನ್ನ ನೆನಪಿಗೆ ಬಂದು ಸುದ್ದಿ ಮಾಡ್ತಾರೆ, ಮತ್ತೆ ಮರೆಯಾಗ್ತಾರೆ. ಕೆಲವರಂತೂ ನಿರಂತರವಾಗಿ ನನ್ನ ಪ್ರಜ್ಞೆಯೊಂದಿಗೇ ಇರುತ್ತಾರೆ. ಮತ್ತೆ ಕೆಲವರಿದ್ದಾರೆ, ನನ್ನನ್ನು ಹಿಡಿದೂ ಹಿಡಿದೂ ಮಾತನಾಡುವಂತೆ ಮಾಡ್ತಾರೆ. ಈ ಎಲ್ಲರೂ ನನಗೆ ಅತ್ಯಂತ ಬೇಕಾದವರೇ. ಎಲ್ಲರನ್ನೂ ನಿಜಕ್ಕೂ ಇಷ್ಟು ವರ್ಷಗಳು ಸುಮ್ಮನೆ ನನ್ನ ಪ್ರಯೋಜನಕ್ಕೆ ದುಡಿಸಿಕೊಂಡೆ. ಪ್ರೀತಿ ತೋರಲೇ ಇಲ್ಲ.

ಕಳೆದೆರಡು ವರ್ಷಗಳಲ್ಲಿ ನನ್ನ ಅತ್ಯಂತ ಪ್ರೀತಿ ಪಾತ್ರರಾದ ಇಬ್ಬರು ಆತ್ಮ ಬಂಧುಗಳು ಇಲ್ಲವಾದರು. ಅವರು ನನ್ನನ್ನು ಅದೆಷ್ಟು ಪ್ರೀತಿಸುತ್ತಿದ್ದರೋ ಏನೋ? ತಾವು ಸತ್ತರೂ, ತಮ್ಮ ಸ್ಥಾನದಲ್ಲಿ ನನ್ನ ಸಹಾಯಕ್ಕಾಗಿ ಬೇರಿಬ್ಬರನ್ನು ಬಿಟ್ಟು ಹೋದರು. ಹೋದ ಇಬ್ಬರಿಗೆ ಕಂಬನಿದುಂಬಿ ವಿದಾಯ ಹೇಳುತ್ತಾ, ಬಂದ ಈ ಇಬ್ಬರನ್ನು ಅತ್ಯಂತ ಕೃತಜ್ಞತೆಯಿಂದ ಸದಾಕಾಲ ಸ್ಮರಿಸಿ ಮಾತನಾಡಿಸಿ ನನ್ನ ಪ್ರೀತಿ ತೋರುತ್ತಿದ್ದೇನೆ.

ನಿಮಗೀಗ ಕುತೂಹಲವಾಗಿರಬಹುದು, ಯಾರಿದು? ಇಷ್ಟೊಂದು ಪ್ರೀತಿ ಪಾತ್ರರು ಈಕೆಗೆ? ಅದೇಕೆ ಈಗ ನೆನಪಾಗುತ್ತಿದ್ದಾರೆ? ಎಂದು. ನಿಜ ಹೇಳಲಾ? ನಂದೂ ಇದೇ ಪ್ರಶ್ನೆ! ಬಹುಶಃ ಬಾಲ್ಯದಲ್ಲಿ, ಯೌವನದಲ್ಲಿ, ಏರಿದ ವಯಸ್ಸಿನ ಜವಾಬ್ದಾರಿ ಸ್ಥಾನದಲ್ಲಿ ಎಲ್ಲರನ್ನೂ taken for granted ಅನ್ನುವ ಹಾಗೆ ಭಾವಿಸಿದೆ. ಈಗ ನೆನೆಸಿಕೊಂಡರೆ ಅವರೆಲ್ಲ ಮಾಡಿದ ಸಹಾಯ ಅದೆಷ್ಟು ಹಿರಿದಾದದ್ದು ಅಂತ ಗೊತ್ತಾಗ್ತಿದೆ. ಒಂದೆರಡು ಬಾರಿಯಂತೂ ಪ್ರಾಣ ಹೋಗುವ ಪ್ರಸಂಗವೇ ಬಂದಿತ್ತು ರೀ. ಅದೃಷ್ಟವಶಾತ್ ಆಗ ನನ್ನೊಂದಿಗೇ ಇದ್ದು ಅವರು ನನ್ನನ್ನು ಕಾಪಾಡಿದ್ದರು.

ಈ ಲಾಕ್ ಡೌನ್ ಅವಧಿಯಲ್ಲಿ ನನಗೆ ಬಿಡುವೋ ಬಿಡುವು! ಹಾಗಾಗಿ, ದಿನದ ಹೆಚ್ಚಿನ ಸಮಯವನ್ನು ಈ ಎಲ್ಲ ಅತ್ಯಂತ ಆತ್ಮೀಯ ಬಾಂಧವರನ್ನು ಪ್ರೀತಿಯಿಂದ ಮಾತನಾಡಿಸಲು, ಸಾಧ್ಯವಾದಷ್ಟು ಅವರ ಬೇಡಿಕೆಗಳನ್ನು ಪೂರೈಸಲು, ಅವರೊಂದಿಗೆ ಇನ್ನಷ್ಟು ಮತ್ತಷ್ಟು ಆತ್ಮೀಯಳಾಗಲು ಪ್ರಯತ್ನಿಸುತ್ತಿದ್ದೇನೆ. ಇಂದಿನವರೆಗೂ ಹೇಳದ ಧನ್ಯವಾದಗಳನ್ನು ಈಗ ನಿಮ್ಮೆಲ್ಲರ ಸಮಕ್ಷಮದಲ್ಲಿ ಈ ಬರಹದ ಮೂಲಕ ಅವರಿಗೆ ತಿಳಿಸುತ್ತಿದ್ದೇನೆ.

ಓ ನನ್ನೆಲ್ಲ ಆತ್ಮೀಯ ಬಾಂಧವರೇ,

ನೀವಿಲ್ಲದೆ……

ನನಗಿಲ್ಲಿ ಬದುಕಿಲ್ಲ

ನಾನಿಲ್ಲದಂದು.....

ನಿಮಗಿಲ್ಲಿ ನೆಲೆಯಿಲ್ಲ

ಒಲವಿನಿಂದೊಡಗೂಡಿ

ಸಾಗಲು ನಾವೆಲ್ಲ

ಈ ನೆಲೆಯು ಈ ಬದುಕು

ಸವಿಯಬಹುದು ಬೆಲ್ಲ

ಗೊತ್ತಾಗ್ಲಿಲ್ವಾ ನನ್ನೀ ಬಾಂಧವರು ಯಾರೆಂದು?

ಅವರೇ ರೀ, ನನ್ನ ದೇಹದ ಅಂಗಾಂಗಗಳು.

ನಮಸ್ಕಾರ.

- ಶೀಲಾ ಅರಕಲಗೂಡು

ಮುಂಬಯಿ ಹೊತ್ತಿ ಉರಿಯುತ್ತಿದ್ದಾಗ

ಮನುಷ್ಯನಿಗೆ ಬಗೆಬಗೆಯ ಪಾಠ ಕಲಿಸಿ ಬದುಕನ್ನು ರೂಪಿಸುವುದರಲ್ಲಿ ಅನುಭವಗಳ ಪಾತ್ರ ಬಹಳ ದೊಡ್ಡದು. ಕೆಲವು ಅನುಭವಗಳು ಮತ್ತೆ ಮತ್ತೆ ಮೆಲುಕು ಹಾಕುವಂತಿದ್ದರೆ ಇನ್ನು ಕೆಲವನ್ನು ಮರೆಯಲು ಹರ ಸಾಹಸ ಮಾಡುತ್ತೇವೆ. ಕೆಲವು ಅನುಭವಗಳನ್ನು ಹಾದು ಬರುವಾಗ ಕಷ್ಟ ಎನಿಸಿದ್ದರೂ ನಂತರ ಅವನ್ನು ನೆನೆಸಿಕೊಂಡು ಮುದಗೊಳ್ಳುವುದೂ ಉಂಟು. ಈ ನನ್ನ ಅನುಭವವನ್ನು ಯಾವ ಗುಂಪಿಗೆ ಸೇರಿಸಬಹುದು ನೀವೇ ನಿರ್ಧರಿಸಿ.

೧೯೭೮ ರಲ್ಲಿ ಒಮ್ಮೆ ನಮ್ಮ ಸೋದರ ಮಾವನ ಮನೆಗೆ ಮೊತ್ತ ಮೊದಲ ಬಾರಿಗೆ ಮುಂಬಯಿಗೆ ಹೋಗಿದ್ದಾಗ ಅಲ್ಲಿಯ ಹುಚ್ಚು ಹಿಡಿಸುವ ಜನಜಂಗುಳಿ, ತಲೆ ಜುಮ್ಮೆನಿಸುವ ಬುಲೆಟ್ ಟ್ರೈನಿನ ವೇಗದ ಜೀವನದ ರೀತಿ ನೋಡಿ ಬೆದರಿ ಹರಿಹರಕ್ಕೆ ವಾಪಸ್ಸು ಕಳಿಸಿ ಎಂದು ಹಠ ಮಾಡಿದಾಗ, ನಮ್ಮ ಸೋದರ ಮಾವ, *ನಿನ್ನ ಮಗಳು ರತ್ನ ಶುದ್ಧ ಹಳ್ಳಿ ಗುಗ್ಗು ಕಣೆ* ಎಂದು ಅವರಕ್ಕನಿಗೆ ಯಾನೆ ನಮ್ಮಮ್ಮನಿಗೆ ದೂರಿದ್ದರು.

ಆದರೆ ಅಲ್ಲಿಂದ ಐದು ವರ್ಷಕ್ಕೆ ವಿಧಿ ನನಗೆ ಮುಂಬಯಿಯ ಗಂಡನನ್ನೇ ಕೊಟ್ಟಾಗ ಒಂದೆರಡು ತಿಂಗಳಲ್ಲೇ ಅಲ್ಲಿಯ ಜೀವನಕ್ಕೆ ಸಲೀಸಾಗಿ ಹೊಂದಿಕೊಂಡುದನ್ನು ಕಂಡು ಅದೇ ಸೋದರಮಾವ ತನ್ನಕ್ಕನಿಗೆ *ಏನೇ ನಿನ್ನ ಮಗಳು ಇಷ್ಟೊಂದು ಸ್ಮಾರ್ಟ್* ಎಂದು ಶಹಬ್ಬಾಸ್ ಗಿರಿಯನ್ನೂ ಕೊಟ್ಟಿದ್ದರು.

ಆ ಮಾಯಾನಗರಿ ಬಹಳ ಬೇಗನೆ ನನ್ನಂತಹ *ಹಳ್ಳಿಗುಗ್ಗು* ವನ್ನೂ ತನ್ನ ತೆಕ್ಕೆಗೆ ತೆಗೆದುಕೊಂಡುಬಿಟ್ಟಿತ್ತು. ಅಲ್ಲಿಯ ಅನುಭವಗಳೋ ವೈವಿಧ್ಯಮಯ.

೧೯೯೨ ರಲ್ಲಿ ಅಯೋಧ್ಯೆಯಲ್ಲಿದ್ದ ಬಾಬರಿ ಮಸೀದಿ ಧ್ವಂಸವಾಗಿ ಅದರ ಪರಿಣಾಮ ೧೯೯೩ ರ ಆದಿಯಲ್ಲಿ ಮುಂಬಯಿನಲ್ಲಿ ಭೀಕರವಾಗಿ ಕಾಣಿಸಿಕೊಳ್ಳತೊಡಗಿತು. ಆ ಸಮಯದಲ್ಲಿ ಮನೆಯಲ್ಲಿ ನಾನು ಮತ್ತು ನನ್ನ ಇಬ್ಬರು ಚಿಕ್ಕಮಕ್ಕಳು ಅಷ್ಟೇ. ನನ್ನ ಪತಿ ಶ್ರೀನಿವಾಸಮೂರ್ತಿ ಆಫೀಸಿನ ಕೆಲಸದ ಮೇಲೆ ಹೈದರಾಬಾದಿಗೆ ಹೋಗಿ ಆಗಲೇ ಮೂರು ವಾರಕ್ಕೂ ಜಾಸ್ತಿಯಾಗಿತ್ತು.

ಪರಸ್ಪರ ಅಪನಂಬಿಕೆ ದ್ವೇಷಗಳ ದಳ್ಳುರಿಯಲ್ಲಿ ಮುಂಬಯಿ ಅಕ್ಷರಶಃ ಹೊತ್ತಿ ಉರಿಯುತ್ತಿತ್ತು. ಆಗಾಗ್ಗೆ ಕೇಳುತ್ತಿದ್ದ ಗುಂಡಿನ ಸದ್ದು, ಅಲ್ಲಲ್ಲಿ ಹೊತ್ತಿಸುತ್ತಿದ್ದ ಬೆಂಕಿ, ಕೊಲೆ, ಸುಲಿಗೆ, ಲೂಟಿಗಳಿಂದಾಗಿ ಮತ್ತು ಕಿವಿಗೆ ಬೀಳುತ್ತಿದ್ದ ಭಯಂಕರ ಸುದ್ದಿಗಳನ್ನು ಅರಗಿಸಿಕೊಳ್ಳಲಾಗದೆ ಸದಾಕಾಲ ಹೃದಯ ಭಯದಿಂದ ಥರಗುಡುತ್ತಿತ್ತು. ಆದರೆ ಮಕ್ಕಳ ಹೂವಿನಂತಹ ಮನಸ್ಸಿಗೆ ಅದರ ವಿಕೃತ ಝಳ ತಾಕಬಾರದೆಂದು ನನ್ನ ಮಮತೆಯ ರೆಕ್ಕೆಯೊಳಗೆ ಮುಚ್ಚಿಟ್ಟು ಆದಷ್ಟೂ ರಕ್ಷಿಸಲು ಯತ್ನಿಸುತ್ತಿದ್ದೆ. ಒಂದೊಂದು ದಿನ ಕಳೆದಾಗಲೂ ಸಧ್ಯ ಇವತ್ತು ಬದುಕಿ ಉಳಿದುಕೊಂಡಿದ್ದೇವೆ ಎಂಬ, ಅವತ್ತಿನ ಆಪತ್ತಿನಿಂದ ಬಚಾವಾಗಿರುವ ಭಾವ. ಯಾವ ಕ್ಷಣಕ್ಕೆ, ಯಾವ ತರಹದ ದಾಳಿ, ಯಾವ ಕಡೆಯಿಂದ, ಹೇಗೆ ಬರುತ್ತದೋ ಎಂಬ ಭೀತಿಯಲ್ಲೇ ದಿನ ದೂಡುತ್ತಿದ್ದೆವು.

ನಾವಿದ್ದುದು ಮಾತುಂಗಾ ಪಶ್ಚಿಮದ ಲೇಡಿ ಜೇಮಶೇಟಜಿ ರಸ್ತೆಗೆ ಹೊಂದಿಕೊಂಡಿದ್ದ ಟಿ.ಎಚ್. ಕಟಾರಿಯಾ ಮಾರ್ಗದ OCS ಕ್ವಾರ್ಟರ್ಸ್‌ನಲ್ಲಿ. ೭೫- ೮೦ ಮನೆಗಳು. ಮುಂಬಯಿಯ ಪ್ರಸಿದ್ಧ '*ಕರ್ನಾಟಕ ಸಂಘ* ನಮ್ಮ ಕಾಲನಿಯ ಎದುರುಗಡೆಯೇ ಇತ್ತು. ನಮ್ಮದು ೩ ಕೋಣೆಗಳ ದೊಡ್ಡ ಫ್ಲಾಟ್.

ಮುಂಬಯಿಯಲ್ಲಿ ಗಲಭೆ ಶುರುವಾಗುವ ಸೂಚನೆ ಕಂಡಾಗ ಮೊದಲಿಗೆ ೧೪ಳ ಸೆಕ್ಷನ್ ಜಾರಿ ಮಾಡಿದರೂ ಹಿಂಸೆ ದೊಂಬಿ ಭೀಕರವಾದಾಗ ಕರ್ಫ್ಯೂ ಹೇರಿದರು. ಗಲಭೆ ಸ್ವಲ್ಪ ನಿಯಂತ್ರಣಕ್ಕೆ ಬಂದಾಗ ಕರ್ಫ್ಯೂ ಸಡಲಿಸಿದರೂ ಹತೋಟಿಗೆ ಸಿಗದೆ ಮತ್ತೆ ಮತ್ತೆ ಕರ್ಫ್ಯೂ ಜಾರಿಯಾಗುತ್ತಿತ್ತು.

ಹೀಗೆ ಒಮ್ಮೆ ಎರಡು ಮೂರು ಗಂಟೆಗಳ ಕಾಲ ಕರ್ಫ್ಯೂ ಸಡಲಿಸಿದ್ದಾರೆಂದು ತಿಳಿದುಬಂದಿತು. ಆ ಸಮಯದಲ್ಲಿ ಜೀವನಾವಶ್ಯಕ ವಸ್ತುಗಳ ಅಂಗಡಿಗಳನ್ನು ತೆರೆಯಲೂ ಅನುಮತಿ ಇರುತ್ತಿತ್ತು. ಬೆಳಗಿನ ತಿಂಡಿ ಆಗಿತ್ತು. ಇನ್ನೂ ಅಡಿಗೆ ಮಾಡಿರಲಿಲ್ಲ. ಪರವಾಗಿಲ್ಲ ಎಂದುಕೊಂಡು, ತಕ್ಷಣ ತುರ್ತಾಗಿ ಬೇಕಾದ ಸಾಮಾನುಗಳ ಪಟ್ಟಿ ಮಾಡಿಕೊಂಡು, ನಾನು ಬರುವವರೆಗೂ ಬಾಗಿಲು ತೆರೆದು ಹೊರಗೆ ಬರಬಾರದೆಂದು ಮಕ್ಕಳಿಗೆ ಕಟ್ಟಪ್ಪಣೆ ಮಾಡಿ, ನಮ್ಮ ಕಾಲೊನಿಯಿಂದ ಹೊರಬಂದು ಬಲಕ್ಕೆ ತಿರುಗಿ ಮತ್ತೆ ಬಲಕ್ಕೆ ಮುಖ್ಯರಸ್ತೆಯಲ್ಲಿ - ಒಟ್ಟು ನೂರೈವತ್ತು ಮೀಟರ್ ಅಷ್ಟೇ ದೂರವಿದ್ದ *ಅಪ್ನಾ ಭಂಡಾರ್* ಗೆ ಧಾವಿಸಿದೆ. ನಾನೇ ಮೊದಲಿನ ಗಿರಾಕಿ. ಸಾಮಾನಿನ ಪಟ್ಟಿ ಕೊಡುವಷ್ಟರಲ್ಲಿ, ಲಾಂಗು, ಕತ್ತಿ ಚಾಕು, ಚೂರಿ, ಒಡೆದ ಬಾಟಲ್ ಕಲ್ಲು ದೊಣ್ಣೆಗಳನ್ನು ಹಿಡಿದಿದ್ದ ದೊಡ್ಡ ಗುಂಪೊಂದು *ಮಾರೋ. ಮಾರ್ ಡಾಲೋ* ಎಂದು ಅಬ್ಬರಿಸುತ್ತಾ ನಮ್ಮೆಡೆಗೆ ನುಗ್ಗಿಬಂತು. ಆ ಕ್ಷಣಕ್ಕೆ ಅಂಗಡಿಯವ ಮಿಂಚಿನ ವೇಗದಲ್ಲಿ ನನ್ನ ತೋಳನ್ನು ಹಿಡಿದು ಒಳಗೆಳೆದುಕೊಂಡು, ಅಷ್ಟೇ ಮಿಂಚಿನ ವೇಗದಲ್ಲಿ ಷಟರ್ ಕೆಳಗೆಳೆದು ಮುಚ್ಚಿಬಿಟ್ಟ.

ಕಣ್ಣು ಕತ್ತಲೆಗಟ್ಟಿ, ಕಾಲುಗಳು ಥರಥರನೆ ನಡುಗತೊಡಗಿದವು. ಬಲಿ ಕೈ ತಪ್ಪಿದುದಕ್ಕೆ ರೋಷಗೊಂಡ ಗುಂಪು ದೊಡ್ಡ ದೊಡ್ಡ ಕಲ್ಲು ದೊಣ್ಣೆಗಳಿಂದ ಕುಟ್ಟುತ್ತಾ ಷಟರ್ ಅನ್ನು ಮುರಿಯುವ ಪ್ರಯತ್ನ ಮಾಡತೊಡಗಿದಾಗಲಂತೂ ಹೃದಯ ಬಾಯಿಗೆ ಬಂದು ಕಣ್ಣು ಗುಡ್ಡೆಗಳು ಹೊರಗೆ ಜಿಗಿಯುವಂತಹ ರುದ್ರ ಭೀತಿ.

ನನ್ನ ಮಕ್ಕಳಿನ್ನೂ ತುಂಬಾ ಚಿಕ್ಕವರು. ಇಬ್ಬರೇ ಮನೆಯಲ್ಲಿದ್ದಾರೆ. ನಾನಿಲ್ಲಿಂದ ಜೀವಂತ ವಾಪಸ್ಸಾಗ್ತೀನಾ?! ನನಗೇನಾದ್ರೂ ಆದ್ರೆ ಮಕ್ಕಳ ಗತಿಯೇನು? ಎನ್ನುತ್ತಾ ಅಳತೊಡಗಿದೆ.

ಅಂಗಡಿಯವನ ಮುಖವೂ ರಾಹು ಬಡಿದಂತೆ. ಕೈ
ಮುಗಿಯುತ್ತಾ, "ಅಳಬೇಡಿ ಬೆಹನ್ ಜೀ. ಪ್ಲೀಸ್ ಅಳಬೇಡಿ. ಅವರಿಗೆ ಷಟರ್ ಒಡೆಯೋಕೆ ಆಗೊಲ್ಲ. ಆದ್ರೆ ಹೊರಗಿನಿಂದ ಪೆಟ್ರೋಲ್ ಸೀಮೆ ಎಣ್ಣೆ ಏನಾದರೂ ಸುರಿದು ಬೆಂಕಿ ಹಚ್ಚಿಬಿಟ್ರೆ ಬಿಲದೊಳಗಿನ ಇಲಿಯಂತೆ ನಾವಿಲ್ಲಿ ಜೀವಂತ ಬೆಂದು ಹೋಗ್ತೀವಿ. ಹಾಗಾಗದಂತೆ ದೇವರನ್ನು ಬೇಡಿಕೊಳ್ಳೋಣ ಬೆಹನ್. ಬೇಡಿಕೊಳ್ಳೋಣ" ಎಂದು ಅವನೂ ಕಂಗೆಟ್ಟು ಹಲುಬತೊಡಗಿದ.(ರಾಧಾ ಚಾಲ್ ಎಂಬಲ್ಲಿ ನುಗ್ಗಿಬಂದ ಗುಂಪಿಗೆ ಹೆದರಿ ಮನೆಗೆ ಓಡಿ ಹೋಗಿ ಬಾಗಿಲು ಹಾಕಿಕೊಂಡವರ ಮನೆಯ ಬಾಗಿಲಿನ ಸಂಧಿಯಿಂದ ಪೆಟ್ರೋಲ್ ಸುರಿದು,ಬೆಂಕಿ ಹಚ್ಚಿ, ಒಳಗಿನವರನ್ನು ಜೀವಂತ ಸುಟ್ಟ ಘೋರ ಬರ್ಬರ ಕೃತ್ಯ ಕೆಲವೇ ದಿನಗಳ ಹಿಂದೆ ನಡೆದಿತ್ತು).

ಅಂತಹ ಭೀಕರ ಸನ್ನಿವೇಶದಲ್ಲಿ ನಿಶ್ಚಲ ಮನಸ್ಸಿನಿಂದ ಪ್ರಾರ್ಥನೆ ಮಾಡಲು ಸಾಧ್ಯವಿತ್ತೇ??
ಒಡೆದು ಹೋಗುವಂತೆ ಹೊಡೆದುಕೊಳ್ಳುತ್ತಿದ್ದ ಎದೆ. ಅದೇ ಸ್ಥಿತಿಯಲ್ಲೇ ಕೈ ಮುಗಿದು ಕಣ್ಮುಚ್ಚಿ ಆರ್ತರಾಗಿ ಬೇಡಿಕೊಳ್ಳತೊಡಗಿದೆವು. ರೊಚ್ಚಿನಿಂದ ಷಟರ್ ಒಡೆಯುವ ಪ್ರಯತ್ನ ಮಾಡುತ್ತಲೇ ಇದ್ದರು.

ಕ್ಷಣವೊಂದು ಕಲ್ಪಗಳೆನಿಸುವಷ್ಟು ದೀರ್ಘವಾಗಿ ಅಂತ್ಯವೇ ಇಲ್ಲ ಎನ್ನುವಂತಹ ಭಯಂಕರ ಸನ್ನಿವೇಶ. ಜೀವಂತ ವಾಪಸ್ಸಾಗಿ ಮಕ್ಕಳನ್ನು ಮತ್ತೆ ನೋಡುತ್ತೇನೆಂಬ ವಿಶ್ವಾಸ ಕಮರಿ ಹೋಗುತ್ತಿತ್ತು. ಹಾಗಾದರೆ ಅಪ್ಪನೂ ದೂರದಲ್ಲಿರುವ

ಎಳೆಯ ಮಕ್ಕಳ ಗತಿ ಏನು? ಎಂತಹ ಯಾತನಾಮಯ ಸಾವು ನಮಗೆ ಕಾದುಕೊಂಡಿದೆಯೋ ಎಂದು ವ್ಯಕ್ತ ಪಡಿಸದೆಯೇ ಇಬ್ಬರೂ ಥರ ಥರ ನಡುಗುತ್ತಿದ್ದೆವು. ಯಾಂತ್ರಿಕವಾಗಿ ಬಾಯಿ "ಕಾಪಾಡು ಕಾಪಾಡು" ಎಂದು ಬೇಡಿಕೊಳ್ಳುತ್ತಿತ್ತು.

ಷಟರ್ ಒಡೆಯುವ ಉಗ್ರ ಗಲಭೆಕೋರರ ಎಲ್ಲಾ ಪ್ರಯತ್ನವೂ ವಿಫಲವಾದಾಗ ಕೆಟ್ಟದಾಗಿ ಬೈಯುತ್ತಾ ಗುಂಪು ಚದುರಿ ದೂರ ಹೋಗಿದೆ. ಇನ್ನು ಅಪಾಯ ಇರಲಾರದು ಎನಿಸುವ ಹೊತ್ತಿಗೆ ಮನೆ ಬಿಟ್ಟು ನಾಲ್ಕು ಗಂಟೆ ದಾಟಿತ್ತು. ಆ ಕ್ರೂರಿಗಳ ಬಳಿ ಪೆಟ್ರೋಲ್ ಸೀಮೆ ಎಣ್ಣೆ ಏನೂ ಇರಲಿಲ್ಲ ಎಂಬುದು ಅಷ್ಟು ಹೊತ್ತಿಗೆ ಖಚಿತವಾಗಿ ಸ್ವಲ್ಪ ಧೈರ್ಯ ಬಂದಿತು. ಬಹಳ ದೂರದಲ್ಲಿ ಕೇಳುತ್ತಿದ್ದ ಗಲಭೆ ಹತ್ತಿಕ್ಕಲು ಹೊರಟಿರಬಹುದಾದ ಪೋಲೀಸ್ ವ್ಯಾನಿನ ಸೈರನ್. ಯಾರಾದರೂ ಬಂದು ರಕ್ಷಿಸಿಯಾರು ಎಂಬ ಯಾವ ಭರವಸೆಯನ್ನೂ ಆಗ ತಾಳುವಂತಿರಲಿಲ್ಲ. ಮುಚ್ಚಿದ್ದ ಅಂಗಡಿಗಳಿಗೂ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದ ಘಟನೆಗಳೂ ಬೇಕಾದಷ್ಟು ನಡೆದಿದ್ದನ್ನು ಕೇಳಿದ್ದರಿಂದ, ಅಂಗಡಿಯಲ್ಲಿ ಸುರಕ್ಷಿತವಾಗಿರಬಹುದು ಎಂದು ನಂಬಲು ಯಾವ ಆಧಾರವೂ ಇರಲಿಲ್ಲ. ಹೇಗಾದರೂ ಜೀವ ಉಳಿಸಿಕೊಂಡು ಮನೆಗೆ ಧಾವಿಸಬೇಕು. ಮಕ್ಕಳು ಎಷ್ಟು ಹೆದರಿರುತ್ತಾರೋ,?

ಅಂಗಡಿಯವ ಎಚ್ಚರಿಕೆಯಿಂದ ಹಿಂದಿನ ಸಣ್ಣ ಬಾಗಿಲು ತೆರೆದು "ಮನೆ ಎಲ್ಲಿ" ಎಂದು ಕೇಳಿದ. ಇಲ್ಲೇ OCS ಕಾಲೊನಿ" ಎಂದು ಹೇಳಿ "ನಿಮ್ಮ ಮನೆ ಎಲ್ಲಿ" ಎಂದು ಕೇಳಿದೆ. "ನಮ್ಮದೂ ಹತ್ತಿರದಲ್ಲೆ" ಎಂದವನೇ "ಸರಿ. ಬೆಹನ್ ಜೀ ಬೇಗ ಮನೆ ಸೇರ್ಕೊಳಿ" ಎಂದು ತಾನೂ ಅಂಗಡಿಗೆ ಬೀಗ ಹಾಕಿ ತನ್ನ ಮನೆ ಕಡೆ ಧಾವಿಸಿದ.

ಅವನಿಗೆ ಮೌನವಾಗಿ ಕೈಮುಗಿದು ಮುಖ್ಯ ರಸ್ತೆಯಲ್ಲಿ ವಾಪಸ್ಸಾಗುವ ಧೈರ್ಯವಾಗದೆ ಸಂದಿಗೊಂದಿಯಲ್ಲಿ ನುಸುಳುತ್ತಾ, ಎರಡು ಕಾಲೊನಿಗಳ ಕಂಪೌಂಡ್ ಹಾರಿ ಒಂದಿಷ್ಟು ಕೈ ಕಾಲು ತರಚಿಸಿಕೊಂಡು ನಮ್ಮ ಪ್ಲಾಟ್ ಬಳಿ ಬಂದಾಗ ಹೆಚ್ಚೂ ಕಡಿಮೆ ಇಡೀ ಕಾಲನಿಯ ಜನ ಗ್ರೌಂಡ್ ಫ್ಲೋರಿನಲ್ಲಿದ್ದ ನಮ್ಮ ಮನೆಯ ಮುಂದೆ ಸೇರಿದ್ದರು.

ಅಮ್ಮ ಎಷ್ಟೊತ್ತಾದರೂ ಬಾರದುದನ್ನು ನೋಡಿ ನನ್ನ ಮಕ್ಕಳು ಬೆದರಿ ಹೊರಗೆ ಬಂದು ಅಮ್ಮನನ್ನು ಕಾಣದೆ, "ಅಮ್ಮಾ ಬೇಕು. ಅಮ್ಮಾ ಬೇಕು. ನಮ್ಮಮ್ಮ ಬೇಕು" ಎಂದು ಕಂಗಾಲಾಗಿ ಅಳುತ್ತಿದ್ದಾರೆ. ಚಾಕ್ಲೆಟ್ ಬಿಸ್ಕತ್ತು ಕೊಟ್ಟು ಸ್ವಲ್ಪ ಸಂತೈಸುವ ಯಾರ ಪ್ರಯತ್ನವೂ ಸಫಲವಾಗದೆ ಇನ್ನೂ ಹೆಚ್ಚು ಹೆಚ್ಚು ಹೃದಯ ವಿದ್ರಾವಕವಾಗಿ ರೋಧಿಸುತ್ತಿದ್ದಾರೆ.

ಮಕ್ಕಳ ಆಕ್ರಂದನ ಕೇಳಿದ್ದೇ ಬಾಣದಂತೆ ಗುಂಪನ್ನು ಸೀಳಿಕೊಂಡು ನುಗ್ಗಿ ಅಳುತ್ತಾ ಎದೆಗಪ್ಪಿಕೊಂಡೆ. ಅಷ್ಟು ಹೊತ್ತು ಅನುಭವಿಸಿದ ಭಯ ದಿಗಿಲು, ಜೀವಂತ ಉಳಿದು ಮಕ್ಕಳನ್ನು ಕಾಣುತ್ತಿರುವ ಸಂತೋಷಕ್ಕೆ ನಿರ್ಲಜ್ಜೆಯಿಂದ ನನ್ನ ಕಣ್ಣುಗಳಲ್ಲಿ ಗಂಗಾಪ್ರವಾಹ.

ನನ್ನನ್ನು ನೋಡಿ ಸ್ತಂಭಿತರಾದ ಕಾಲನಿಯ ಜನಗಳ ಕಣ್ಣಲ್ಲಿ ನಂಬಲಾಗದ ಆನಂದಾಶ್ಚರ್ಯ.

"ಮಿಸೆಸ್ ಮೂರ್ತಿ, ಯು ಆರ್ ಅಲೈವ್!!?? ಥ್ಯಾಂಕ್ ಗಾಡ್".

" ಮಿಸೆಸ್ ಮೂರ್ತಿ ಆಪ್ ಜಿಂದಾ ಹೈ!!? ಭಗವಾನ್ ಕೊ ಲಾಖ್ ಲಾಖ್ ಶುಕ್ರಿಯಾ"

ನನ್ನನ್ನು ಯಾರೋ ಕೊಂದು ಹಾಕಿದ್ದಾರೆಂಬ ನಿಶ್ಚಯಕ್ಕೆ ಬಂದು ಮುಂದೇನು ಮಾಡಬೇಕು ಎಂದು ದಿಕ್ಕು ತೋಚದೆ ಭಯಪಟ್ಟುಕೊಂಡಿದ್ದವರೆದುರಿಗೆ ಪವಾಡವೇನೋ ಎಂಬಂತೆ ನಾನು ಜೀವಂತ ನಿಂತಿದ್ದೆ. ಭಾವೋದ್ವೇಗದಿಂದ ನನ್ನನ್ನು ಅಲ್ಲಿನ ಗೆಳತಿಯರು ಅಪ್ಪಿಕೊಂಡಾಗ ಹಲವರ ಕಣ್ಣಲ್ಲಿ ಆನಂದಾಶ್ರು.

ಇಲ್ಲ ಸಲ್ಲದ ಸುದ್ದಿಗಳಿಂದ ಪರಿಸ್ಥಿತಿ ಇನ್ನೂ ವಿಕೋಪಕ್ಕೆ ಹೋದೀತೆಂದು ಎಲ್ಲಾ ತರಹದ ಸಂಪರ್ಕಗಳನ್ನೂ ಸ್ಥಗಿತಗೊಳಿಸಿದ್ದರು. ನಮ್ಮ ಮನೆಯಲ್ಲಿ ಟೆಲಿಫೋನ್ ಇರಲಿಲ್ಲ. ಪತ್ರಗಳೂ ಬಟವಾಡೆಯಾಗುತ್ತಿರಲಿಲ್ಲ. ಹಾಗಾಗಿ ಆಗ ದಾವಣಗೆರೆಯಲ್ಲಿದ್ದ ನನ್ನ ಅಮ್ಮ ಅಪ್ಪನಿಗಾಗಲೀ, ಅಕ್ಕ ತಂಗಿಯರಿಗಾಗಲೀ, ಬೆಂಗಳೂರಿನ ಅತ್ತೆಮಾವ, ಕಡೆಗೆ ನನ್ನ ಪತಿ ಯಾರೊಬ್ಬರಿಗೂ ನಾವಿಲ್ಲಿ ಏನೇನು ಅನುಭವಿಸುತ್ತಿದ್ದೇವೆಂಬ ಕನಿಷ್ಠ ಕಲ್ಪನೆಯೂ ಇರಲಿಲ್ಲ. "ಹೇಗಿದ್ದೀಯ" ಎಂಬ ಒಂದು ಕಕ್ಕುಲಾತಿಯ ಮಾತಿಗಾಗಿ ಹೃದಯ ಹಲುಬಿ ಹಲುಬಿ ಹಂಬಲಿಸಿ ಚಾತಕಪಕ್ಷಿಯಂತೆ ಕಾಯುತ್ತಾ ರೋಧಿಸುತ್ತಿತ್ತು.

ಈಗಲೂ ಆ ಅನುಭವಗಳ ನೆನಪು ನನ್ನ ನರನಾಡಿಗಳಲ್ಲಿ ನಡುಕ ಹುಟ್ಟಿಸುವುದು ಸುಳ್ಳಲ್ಲ.

-ರತ್ನ.

ವೃಕ್ಷದ ದುಃಖ ದುಮ್ಮಾನ

ನಸುಕಿನ ಚುಮು ಚುಮು ಬೆಳಕಿನಲ್ಲಿ, ಮನೆಯ ಮುಂದೆ ಗುಜು, ಗುಜು ಗಲಾಟೆ . ಎಲ್ಲರಲ್ಲೂ ತಮ್ಮ ಬೆಲೆಬಾಳುವ ಕಾರನ್ನು ಎತ್ತ ಸುರಕ್ಷಿತ ಸ್ಥಳಕ್ಕೆ ಇಡಬೇಕೆಂಬ ಆತಂಕ , ಪರದಾಟ , ಧ್ಯಾನಕ್ಕೆಂದು ಕುಳಿತ ನನಗೆ ಮನ ಸ್ಥಿರ ಗೊಳ್ಳದೆ ಹೊರ ಬಂದರೆ ! ನನ್ನ ಮನೆಯ ಮುಂದಿರುವ ವಿಶಾಲ ವೃಕ್ಷದ ಒಂದು ದೊಡ್ಡ ಖಾಂಡ ಅರ್ಧ ಮುರಿದು ಜೋತಾಡುತ್ತಿದೆ.

ಹೌದು , ಹಿಂದಿನ ದಿನ ರಾತ್ರಿ ಪ್ರಕೃತಿ ಕೋಪಗೊಂಡಿತ್ತೋ , ಉಲ್ಲಾಸವಿತ್ತೋ ಅರಿಯೆ , ಬೇಸಿಗೆಯ ತಾಪಅದನ್ನು ಕ್ಷುದ್ರ ಗೊಳಿಸಿದ್ದಿರಬೇಕು , ಅದರ ನಿವಾರಣೆಗೆಂದು ರುದ್ರ ನರ್ತನದೊಂದಿಗೆ ಅಮೃತ ಧಾರೆತನ್ನ ಮೇಲೆ ಸುರಿಸಿ ಕೊಂಡಿತ್ತು, ಜೊತೆಗೆ ಜಗತ್ತಿಗೆಲ್ಲಾ ತಂಪೆರೆದಿತ್ತು. ಭೀಕರ ಗುಡುಗು , ಸಿಡಿಲಿನ ಆರ್ಭಟದಿಂದ ರಭಸದ ಗಾಳಿಯಿಂದ , ಕೋಲಮಿಂಚಿನ ಸಂಚಲನದಿಂದ ತಪ್ತಗೊಂಡ ಮನಸ್ಸಿಗೆ ಭಾರಿ ಮಳೆಹೊಡೆತದಿಂದ ತಂಪೆರೆದಿತ್ತು. ಈ ಭೀಕರ ನರ್ತನಕ್ಕೆ , ಸಂತಸ ಪಟ್ಟವರೆಷ್ಟೋ ? ನೋವುಂಡವರೆಷ್ಟೋ ? ತನ್ನದನ್ನು ಕಳೆದುಕೊಂಡವರೆಷ್ಟೋ?

ಹಾಂ!, ಹಾಗೆ ಆಗಿತ್ತು .... ನನ್ನ ನೆರೆ ಮನೆಯ ಸಂಗಾತಿ, ಭವ್ಯ ವೃಕ್ಷಕ್ಕೆ .

ಹೌದು , ಈ ಮನೆಗೆ ಬಂದಾಗಿನಿಂದ ನನಗರಿಯದಂತೆ ಅದು ನನ್ನ ಸಂಗಾತಿ. ಬೆಳಗು ಬೈಗುಗಳಲ್ಲಿ ಆ ವೃಕ್ಷದಲ್ಲಿ ನೆಲೆಸಿರುವ ಗಿಳಿ , ಕಾಗೆ, ಕೋಗಿಲೆ ಪಕ್ಷಿಗಳ ಆನಂದದ ಜೀವನ ನೋಡಿ ನನ್ನ ಮನಸ್ಸು ಮುದ ಗೊಂಡಿದೆ . ಪುಟಾಣಿ ಅಳಿಲುಗಳ ಸಂಸಾರ ಅತ್ತಿಂದಿತ್ತ ನಲಿದಾಡುತ್ತ , ವೃಕ್ಷದ ಉದ್ದಗಲಕ್ಕೂ ಸಡಗರದಿಂದ ಓಡಾಡುವ ಸೋಜಿಗವನ್ನು ಮನತಣಿಯೆ ಆನಂದಿಸಿದ್ದೇನೆ. ಅದರ ಜಾತಿ ನಾನರಿಯೆ , ಒಂದು ದೊಡ್ಡ ಪಕ್ಷಿ ಒಮ್ಮೆಲೇ ಆ ಮರದ ತುಂಬೆಲ್ಲಾಅಡ್ಡಾಡಿದಾಗ ಈ ಇತರ ಸದಸ್ಯರು ಭಯಗೊಂಡು ಸದ್ದುಗದ್ದಲವಿಲ್ಲದೆ ಬಚ್ಚಿಟ್ಟು ಕೊಂಡಿದ್ದನ್ನು ಗಮನಿಸಿದ್ದೇನೆ.

ಇಷ್ಟೆಲ್ಲಾ, ಸಕಲಕ್ಕೆಲ್ಲಾ, ಆಗರವಾದ ಈ ವೃಕ್ಷದ ಒಂದು ಬೃಹತ್ ಖಾಂಡ ಈ ಪ್ರಕೃತಿಯ ರುದ್ರ ನರ್ತನಕ್ಕೆ ಬಲಿಯಾಗಿತ್ತು.ಖಾಂಡ ಮುರಿದು ಜೋತಾಡುವಾಗ, ವೃಕ್ಷದ ನೋವು ನನ್ನ ಅನುಭವಕ್ಕೆ ಬರುತ್ತಿರುವಾಗಲೇ , ನಮ್ಮ ಸಮುಚ್ಚಯದ ಮೇಲಿವಿಚಾರಕ ಅಧ್ಯಕ್ಷಿಣಿ ಅದನ್ನು ಕಡಿದು ಬಿಸುಡಲು ಜನರನ್ನು ಫೋನಿನಲ್ಲಿ ಸಂಪರ್ಕಿಸುತ್ತ, ಅವರಿಗೆ ಕೊಡುವ ಹಣದ ಚೌಕಾಸಿಯಲ್ಲಿ ಕೂಗಿಕೊಳ್ಳುತ್ತ ತನ್ನ ಮನೆಯ ಬಾಲ್ಕನಿಯಲ್ಲಿ ಶತಪಥ ಹಾಕುತ್ತಿದ್ದಾರೆ. ಇಷ್ಟು ದಿನ ವೃಕ್ಷದ ನೆರಳನ್ನು , ತಂಪನ್ನು ಅನುಭವಿಸುತ್ತಾ, ಸುಡು ಬಿಸಿಲಿನಿಂದ ಪಾರಾದ ಉಪಕಾರವನ್ನು ಸ್ಮರಿಸದೆ,ಈ ತರಹ ಗಿಡಮರಗಳಿದ್ದರೆ , ಬಿಲ್ಡಿಂಗ್ಗೆ ಅಪಾಯ , ನಮ್ಮ ಬೆಲೆ ಬಾಳುವ ಕಾರಿಗೆ ಅಪಾಯ, ಕೊನೆಗೆ ಹೊರಗಡೆ ಬಂದರೆ ನಮಗೆ ಅಪಾಯವೆಂದು ಲೆಕ್ಕ ಹಾಕುತ್ತ ಅದಕ್ಕೆ ಹಿಡಿ ಶಾಪ ಹಾಕುವ ಇತರ ಮನೆಯವರು.

ದುಃಖವಾಯ್ತು ಮನಕ್ಕೆ , ಮನುಷ್ಯ ಯಾರದೇ ಒಳ್ಳೆಯ ಗುಣ, ಉಪಕಾರ ಸ್ಮರಿಸುವದಿಲ್ಲವೇಕೆ? ಅವನೇಕೆ ಎಲ್ಲರೊಂದಿಗೆ ಬೇರೆಯದೇ , ಅವರ ಪಾಡಿಗೆ ಅವರನ್ನು ಬಿಡದೆ ಕಾಡುವದು? ಆ ವೃಕ್ಷದಲ್ಲಿ ಆಶ್ರಯದಾತರಾದ ಕೋಗಿಲೆ ಇತರ ಪಕ್ಷಿ,ಅಳಿಲುಗಳು ತಮ್ಮ ಪಾಡಿಗೆ ಉಳಿದ ಭಾಗದಲ್ಲಿ ನಿರಾತಂಕವಾಗಿ ತಮ್ಮ ದಿನಚರಿ ಪ್ರಾರಂಭಿಸಿದಂತೆ , ನಾವೇಕೆ ಬದುಕಲಾರೆವು?

ವೃತ್ತಿಪರರು ತುಂಬಾ ಹಣ ಕೇಳಿದರೆಂದು, ನಮ್ಮ ಅಧ್ಯಕ್ಷರು ಯಾವುದೇ ಸರಿಯಾದ ಸಲಕರಣೆ ಇಲ್ಲದ ನಾಲ್ಕೈದು ಗಾರೆಕೆಲಸದ ಯುವಕರಿಗೆ ಜೋತಾಡುವ ಟೊಂಗೆಯನ್ನು ಕಡಿಯಲು ಅನುಮತಿ ನೀಡಿದಾಗ, ಆ ಯುವಕರು ಹಗ್ಗ ಹಾಕಿ ಮನ ಬಂದಂತೆ ಎಳೆದಾಡುವಾಗ ವೃಕ್ಷ ಕಣ್ಣೀರು ಹಾಕಿದ್ದನ್ನು ಕಂಡೆ.

"ಮನುಷ್ಯರೇ ನಿಮ್ಮ ಕೈ ಕಾಲುಗಳಿಗೆ ಏನಾದರೂ ಆದರೆ ಹೀಗೆ ಎತ್ತೆಂದರೆತ್ತ ಜಗ್ಗಾಡುತ್ತಿರ?"

"ಇಲ್ಲ ಇಲ್ಲಾ, ಸರಿಯಾದ ಪರಿಣಿತರಿಂದ ನೋವಾಗದಂತೆ ಶೀಘ್ರದಲ್ಲಿ ಅದನ್ನು ಬೇರ್ಪಡಿಸುತ್ತೇವೆ"

"ಈ ಯುವಕರು ಪ್ರತಿನಿತ್ಯ ತಮ್ಮ ಧಣಿವಾರಿಸಿಕೊಂಡು , ನನ್ನ ನೆರಳಲ್ಲಿ ಉಂಡು ಮಲಗಿದ ಇವರೇ ನಿರ್ಧಯತೆಯಿಂದ

ಸತತ ನಾಲ್ಕು ತಾಸು ಎಳೆದಾಡುತಿದ್ದಾರೆ ಅವರಿಗೂ , ನಿನಗೂ ಕರುಣೆ ಇಲ್ಲವೇ ?"

"ಯಾಕಿಲ್ಲ? ಇದೆ ಆದರೆ ಇವರ ಈ ಹಣದ ಮೇಲಾಟದ ಲೆಕ್ಕಾಚಾರದಲ್ಲಿ ನಾನು ಅಸಹಾಯಕಳಾಗಿದ್ದೇನೆ "

"ಹಾಂ !! ಅಸಹಾಯಕಳೆ? ನಿನ್ನದೇ ಕೈ ಕಾಲು ಆಗಿದ್ದರೆ , ನೀನು ಏನು ನಿರ್ಧಾರ ತೆಗೆದು ಕೊಳ್ಳುತಿದ್ದೆ ?"

ನನ್ನ ಕ್ರೂರತನಕ್ಕೆ ನಾನು ಮೌನಿ ಅದೆ.ನಾನು ಈ ಪಾಪಕರ್ಮಕ್ಕೆ ಸಾಕ್ಷಿಯಾದದಕ್ಕೆ ರೌರವ ನರಕ ಪ್ರಾಪ್ತಿ ಯಾಗುವುದೆಂದು ಭಯ ಪಟ್ಟೆ ಮತ್ತೂ ಅದರಲ್ಲೂನಾನು ಸ್ವಾರ್ಥಿಯಾದೆ.

ವಿಕಾರವಾಗಿ ಜಗ್ಗಾಡಿದ ಆ ಮರದ ನುಜ್ಜು ಗುಜ್ಜಾದ ಆ ಟೊಂಗೆಯನ್ನು ದಿನವೂ ವೀಕ್ಷಿಸಿ ಅಪರಾಧಿ ಮನೋಭಾವದಲ್ಲಿ ನೊಂದೆ.

ವಸಂತಾಗಮದೊಂದಿಗೆ , ವರ್ಷಧಾರೆಯ ಸಿಂಚನದಿಂದ ನುಜ್ಜು ಗುಜ್ಜಾದ ಮೇಲ್ಮೈಯಲ್ಲೂ ಹೊಸ ಚಿಗುರು ಒಡೆದು , ವಿಕಾರವನ್ನು ಮರೆಮಾಚಿಕೊಂಡು ಸುಂದರವಾಗಿ ನಳ ನಳಿಸುವ ವೃಕ್ಷ ನೋಡಿ ,ಸಂತಸ ಪಟ್ಟಿದ್ದೇನೆ .ಜೊತೆ ಜೊತೆಗೆ ನೊಂದಿದ್ದೇನೆ , ಇದರಲ್ಲಿ ನನ್ನ ಪಾತ್ರವೇನೆಂದು ?

ರೇಣುಕಾ ದೇಸಾಯಿ

ಬದಲಾವಣೆ

ಕರೋನ ಬಂತು ಕರೋನ ಬಂತು
ಜೀವನದಲ್ಲಿ ಬದಲಾವಣೆ ತಂತು
ವಾಯು ವಿಹಾರ ಹೋಟೆಲ್ ಉಪಹಾರ
ಎಲ್ಲಕು ಅಡೆ-ತಡೆ ಉಂಟಾಯ್ತು

ಹಸ್ತ ಲಾಘವ ಮಾಡುತ್ತಿದ್ದ ಮಂದಿ
ಹಲವು ಬಾರಿ ಯೋಚಿಸುವಂತಾಯ್ತು
ಕರಗಳ ಜೋಡಿಸಿ ಕೈಗಳ ಮುಗಿಯುವ
ಭಾರತದ ಪದ್ಧತಿ ಮರಳಿ ಬಂದಾಯ್ತು

ಆಲಿಂಗನ ಬಾಹು ಬಂಧನ
ಬೇಡವಾಗಿ ಅದು ದೂರವಾಯ್ತು
ಗೃಹ ಬಂಧನ ದಿಗ್ಬಂಧನ
ಜೊತೆಯಲಿ ಬಂತು ಸ್ವಾವಲಂಬನ

ವಾಯು ಸಂಚಾರ ವಾಯುವಿಹಾರ
ಎಲ್ಲಕು ಸಂಚಕಾರ ಬಂದೋಯ್ತು
ಆಚಾರ ವಿಚಾರ ಪೂಜೆ ಪುನಸ್ಕಾರ
ಎಲ್ಲಕು ನಿರ್ಬಂಧ ಹೇರಾಯ್ತು

ದೇವಾಲಯಕೆ ಹೋಗುವ ಭಕ್ತರಿಗೆ
ದೇವರ ದರ್ಶನ ದುರ್ಲಭವಾಯ್ತು

ಹೂವು ಹಣ್ಣು ಪೂಜೆಗೆ ಇಲ್ಲ
ತೀರ್ಥ ಪ್ರಸಾದ ಭಕ್ತರಿಗಿಲ್ಲ

ಮನೆ ಕೆಲಸದಾಕೆ ಬರುವಂತಿಲ್ಲ
ಮನೆ ಕೆಲಸ ಎಂದೂ ನಿಲ್ಲುವಂತಿಲ್ಲ
ಗಂಡ ಹೆಂಡತಿ ಮನೆ ಮಂದಿಯೆಲ್ಲ
ಮನೆ ಕೆಲಸ ಮಾಡಬೇಕಾಯ್ತಲ್ಲ

ಕಲ್ಯಾಣ ಮಂಟಪ ಕೇಳೋರಿಲ್ಲ
ಸಿನಿಮಾ ಮಾಲ್ಗಳು ತೆರೆದೇ ಇಲ್ಲ
ಇವು ಇಲ್ಲದಿದ್ದರೇನಂತೆ ಬಿಡಿ
ಸದ್ಯಕೆ ಪ್ರಾಣ ಉಳಿಯಲಿ ಬಿಡಿ

ಹೊರಗಡೆ ಎಲ್ಲೂ ಹೋಗದಿರಿ
ಮಾಸ್ಕನು ಧರಿಸಲು ಮರೆಯದಿರಿ
ಬೇರೆಯವರಿಂದ ಅಂತರವಿರಲಿ
ಕೈ ಬಾಯಿಯನು ತೊಳೆಯುತ್ತಿರಿ

-ಎಂಜಿವಿ

ಕುಡಿಯದೆ ಇರಬೇಡಿ

ಕುಡಿಯದೆ ಇರಬೇಡಿ
ಕಾಫಿಯ ಕುಡಿಯದೆ ಇರಬೇಡಿ
ಎಂದಿಗು ಬಿಡಬೇಡಿ
ಕಾಫಿಯನೆಂದಿಗು ಬಿಡಬೇಡಿ

ಕಾಫಿಯ ಆಸ್ವಾದ
ವರ್ಣಿಸಲಸದಳವು
ಕಾಫಿಯ ಆ ಘಮ ಘಮ
ಮನೋಲ್ಲಾಸವಾಗಿಹುದು

ಕಾಫಿಯ ಬಿಡುವುದು
ಒಳಿತೇ ಅಲ್ಲ
ಕಾಫಿಯ ಕುಡಿವುದು
ಕೆಡುಕೇನು ಅಲ್ಲ

ವೈವಿಧ್ಯಮಯ ಕಾಫಿ
ಆನಂದಮಯ
ಕಾಫಿಯ ಸಾಮೀಪ್ಯ
ಅಮೃತ ಮಯ

ಕಾಫಿಪ್ರಿಯರಿಗೆ

ಕಾಫಿಯೆ ಪ್ರಾಣ
ಅದು ಇಲ್ಲದಿದ್ದರೆ
ಅವರಿಗೆ ನಿತ್ರಾಣ

ಅತಿಯಾದ ಕಾಫಿ
ಒಳ್ಳೇಯದಲ್ಲ
ಎಂದು ಹೇಳುವ ಮಂದಿ
ಕೆಲವರಿಹರಲ್ಲ

ಯಾವುದೇ ಆಗಲಿ
ಇತಿ ಮಿತಿ ಇರಲಿ
ಎಂಬ ಸಂದೇಶ
ಗಮನದಲ್ಲಿರಲಿ

-ಎಂಜಿವಿ

ಆನ್‌ಲೈನ್ ಪಾಠ

ವಿಶ್ವನ ಮನೆಗೆ ನಾ ಹೋದಾಗ ಅವನ ಮುಖದಲ್ಲಿ ಷಾಕ್ ಕಾಣಿಸಿತು. ಕರೋನ ಕಾಲದಲ್ಲಿ ಸ್ವಂತ ಮನೆಗೇ ಎಷ್ಟೋ ಮಂದಿ ಹೋಗುವುದಿಲ್ಲ. ವಿಶ್ವ ನನ್ನನ್ನು ಬಾಗಿಲಲ್ಲೇ ನಿಲ್ಲಿಸಿ 'ಥರ್ಮಲ್ ಸೀನಿಂಗ್' ಗನ್ನು ಹಣೆಗೆ ಹಿಡಿದು ಮನೆ ದೇವರನ್ನ ನೆನಸ್ಕೋ ಎಂದ. ಪುಣ್ಯಕ್ಕೆ ಟೆಂಪರೇಚರ್ ನಾರ್ಮಲ್ ಇತ್ತು.

"ನನ್ನ ಮೇಲೆ ಅನುಮಾನಾನಾ ವಿಶ್ವ ?" ಎಂದೆ.

"ನಿನ್ನ ಮೇಲಲ್ಲ, ಕರೋನಾಗೆ ಕೇರ್ ಮಾಡದ ಸುತ್ತಾಡ್ತಿರೋ ಜನರ ಮೇಲೆ. Passport ಇರೋವರು ಮಾಡಿದ ತಪ್ಪಿಗೆ 9ನೇ ಕ್ಲಾಸ್‌ವರೆಗಿನ ಮಕ್ಕಳು 'ಕರೋನಾ ಪಾಸ್' ಆಗಿದ್ದಾರೆ. ಸಮ್ಮರ್ ಹಾಲಿಡೇಸ್‌ನಲ್ಲಿ ಆಟ ಆಡಬೇಕಾದ ಮಕ್ಕಳು ಮನೆ ಮೂಲೇಲಿ ಮುದುಡಿ ಕುಳಿತಿವೆ" ಎಂದ.

"ಮಕ್ಕಳಿಗೆಲ್ಲಾ ಆನ್‌ಲೈನ್‌ನಲ್ಲಿ ಪಾಟ ಶುರು ಆಗಿದೆಯಲ್ಲ ವಿಶ್ವ ?" ಎಂದೆ.

"ಮೊನ್ನೆ ನಾನು ಸ್ಕೂಲ್ ಕಿಟಕೀಲಿ ನಿಂತ್ಕಂಡು ಮೇಷ್ಟ್ರು ಮಾಡ್ತಿದ್ದ ಪಾಟ ಕೇಳ್ದೆ. ಆ ಮೇಷ್ಟು ಮಕ್ಕಳಿಗೆ ಏನು ಹೇಳಿ ಕೊಡ್ತಾ ಇದ್ರು ಗೊತ್ತಾ? 'ಗಂಗಾನದ ಹಿಮಾಲಯದಲ್ಲಿ ಹುಟ್ಟಿ ಮುಂಬಯಿ ಕಡೆ ಹರಿದು ಮಂಗಳೂರು ಹತ್ರ ಸಮುದ್ರ ಸೇರುತ್ತೆ ಅಂತ ಹೇಳ್ತಾ ಇದ್ರು" ಎಂದ. ನನಗೆ ಗಾಬರಿ ಆಯಿತು.

"ಅರೇ ! ಗಂಗಾನದಿ ಆ ರೀತಿ ಹರಿಯೋಕೆ ಹೆಂಗೆ ಸಾಧ್ಯ ? ಅದೇನಿದ್ರೂ ಹಿಮಾಲಯದಲ್ಲಿ ಹುಟ್ಟಿ ಬಂಗಾಳಕೊಲ್ಲಿ ಸೇರಬೇಕಲ್ಲ ? ನದೀ ಪಾತ್ರ ಬದಲಿಸಬಾರದು" ಎಂದು ಒತ್ತಿ ಹೇಳಿದೆ.

"ಹೋಗ್ತಿದೆ ! ನದಿ ದಿಕ್ಕು ಬದಲಿಸಿದೆ. ಮೇಷ್ಟ್ರು ಆ ರೀತಿ ವ್ಯವಸ್ಥೆ ಮಾಡಿದ್ದಾರೆ" ಎಂದ ವಿಶ್ವ. "ಆನ್‌ಲೈನ್ ಕ್ಲಾಸ್ ಅಂದ್ರೆ ಅಪ್ಪ ಅಮ್ಮಾನೂ ಮಕ್ಕಳ ಜೊತೆ ಕೂತು ಪಾಟ ಕೇಳ್ತಾರಲ್ಲ? ತಪ್ಪು ಹೇಳಿದ್ರೆ

"ಆನ್‌ಲೈನ್ ಕ್ಲಾಸ್ ಅಂದ್ರೆ ಅಪ್ಪ ಅಮಾನೂ ಮಕ್ಕಳ ಜೊತೆ ಕೂತು ಪಾಟ ಕೇಳ್ತಾರಲ್ಲ? ತಪ್ಪು ಹೇಳಿ ಪೇರೆಂಟ್ಸ್ ಸುಮ್ಮನಿದ್ದಾರಾ?"

“ಪೇರೆಂಟ್ಸ್ ಗಂಗಾನದಿ ಪಾಟ ಕೇಳಿ ತಿರುಗಿ ಬಿದ್ದು, ಪ್ರಿನ್ಸಿಪಾಲ್‌ನ ಕೇಳಿದ್ರು 'ಏನ್ರಿ, ನಿಮ್ಮ ಹಿಸ್ಟರಿ, ಜಾಗ್ರ ಮೇಷ್ಟು ಈ ಥರ ಹೇಳ್ತಾ ಇದ್ದಾರೆ ಅಂತ”.

“ನನಗೆ ಅನ್ನುತ್ತೆ ಮೇಷ್ಟ್ರು ಕನ್‌ಫ್ಯೂಸ್ ಮಾಡ್ಕೊಂಡಿದ್ದೇಕು, ಅರಬ್ಬಿ ಸಮುದ್ರ ಮ್ಯಾಪಿನಲ್ಲಿ ಎಡಕ್ಕಿದೆ. ಬಂಗಾಳಕೊ ಬಲಕ್ಕಿದೆ. ಇದು ಅವರಿಗೆ ಗೊತ್ತಿರಲಿಲ್ಲ ಅನ್ನುತ್ತೆ” ಎಂದೆ.

"ಎಲ್ಲಾ ಗೊತ್ತಿತ್ತು, ಮ್ಯಾಪು ಗೊತ್ತಿಲ್ಲದೆ ಮೇಷ್ಟ್ರು ಆಗ್ತಾರಾ ? ಹಿಸ್ಟರಿ ಮೇಷ್ಟ್ರನ್ನೇ ಕೇಳಿದಾಗ ಏನಂದ್ರು ಗೊತ್ತಾ? ನನಗೆ ಆರು ತಿಂಗಳಿಂದ ಸಂಬಳ ಕೊಟ್ಟಿಲ್ಲ. ಲಾಕ್‌ಡೌನ್ ಪೀರಿಯಡ್‌ನಲ್ಲಿ ಸ್ಕೂಲ್‌ನವರು ನನ್ನ ಕೇರೇ ಮಾಡ್ತಿಲ್ಲ ಆನ್‌ಲೈನ್ನಲ್ಲಿ ಅವರಿಗೆ ಫೀಸ್ ಪೂರ್ತಿ ವಸೂಲಿ ಆಗ್ತಿಲ್ಲವಂತೆ. ನನಗೆ ಬಾಕಿ ಸಂಬಳ ಪೇ ಮಾಡೋವರೆಗೂ ಗಂಗಾನದಿ ಮಂಗಳೂರು ಕಡೇನೇ ಹರಿಯುತ್ತೆ ಅಂದ್ರು.”

“ಅಯ್ಯೋ ದೇವರೇ ! ಇಂಥ ಮೇಷ್ಟ್ರುಗಳನ್ನ ಕಳ್ಕೊಂಡ್ರೆ ಕಲಿಯೋ ಮಕ್ಕಳ ಗತಿ ಏನು? ಕಾವೇರಿ ನದಿಗೂ ಸಾವೇರಿ ರಾಗಕ್ಕೂ ವ್ಯತ್ಯಾಸ ತಿಳಿಯೊಲ್ಲ.”

“ಎಲ್ಲಾ ಕಡೆ ಕ್ವಾಲಿಟಿ ಇಳೀತಿದೆ. ಕಲಬೆರಕೆ ಹೆಚ್ಚಿದೆ. ಕಾನ್ವೆಂಟ್ ಮೇಡಮ್ಮುಗಳು ನೋಡೋಕೆ ಚೆನ್ನಾಗಿದ್ದಾರೆ ಅಂತ ಕೆಲಸಕ್ಕೆ ತಗೊಂಡು ಬಿಡ್ತಾರೆ. ಅವರು ಮಾಡಿದ್ದೇ ಪಾಟ, ಕೆ.ವಿ. ಪುಟ್ಟಪ್ಪನವರು ಕುವೆಂಪುಗೆ ಏನಾಗಬೇಕು ಅಂತ ಎಷ್ಟೋ ಜನಕ್ಕೆ ಗೊತ್ತಿರೊಲ್ಲ"

ನನಗೂ ಕನ್‌ಫ್ಯೂಸ್ ಆಯಿತು.

ಆನ್‌ಲೈನ್ ಕ್ಲಾಸ್ ಅಂದ್ರೆ ಅಪ್ಪ ಅಮ್ಮಾನೂ ಮಕ್ಕಳ ಜೊತೆ ಕೂತು ಪಾಟ ಕೇಳ್ತಾರಲ್ಲ? ತಪ್ಪು ಹೇಳಿದ್ರೆ ಪೇರೆಂಟ್ಸ್ ಸುಮ್ಮನಿದ್ದಾರಾ?”

“ಪೇರೆಂಟ್ಸ್ ಗಂಗಾನದಿ ಪಾಟ ಕೇಳಿ ತಿರುಗಿ ಬಿದ್ದು, ಪ್ರಿನ್ಸಿಪಾಲ್‌ನ ಕೇಳಿದ್ರು 'ಏನ್ರಿ, ನಿಮ್ಮ ಹಿಸ್ಟರಿ, ಜಾಗ್ರಫಿ ಮೇಷ್ಟು ಈ ಥರ ಹೇಳ್ತಾ ಇದ್ದಾರೆ ಅಂತ”.

“ನನಗೆ ಅನ್ನುತ್ತೆ ಮೇಷ್ಟ್ರು ಕನ್‌ಫ್ಯೂಸ್ ಮಾಡ್ಕೊಂಡಿದ್ದೇಕು, ಅರಬ್ಬಿ ಸಮುದ್ರ ಮ್ಯಾಪಿನಲ್ಲಿ ಎಡಕ್ಕಿದೆ, ಬಂಗಾಳಕೊಲ್ಲಿ ಬಲಕ್ಕಿದೆ. ಇದು ಅವರಿಗೆ ಗೊತ್ತಿರಲಿಲ್ಲ ಅನ್ನುತ್ತೆ” ಎಂದೆ.

“ಎಲ್ಲಾ ಗೊತ್ತಿತ್ತು. ಮ್ಯಾಪ ಗೊತ್ತಿಲ್ಲದೆ ಮೇಷ್ಟ್ರು ಆಗ್ತಾರಾ ? ಹಿಸ್ಟರಿ ಮೇಷ್ಟ್ರನ್ನೇ ಕೇಳಿದಾಗ ಏನಂದ್ರು ಗೊತ್ತಾ?” ನನಗೆ ಆರು ತಿಂಗಳಿಂದ ಸಂಬಳ ಕೊಟ್ಟಿಲ್ಲ, ಲಾಕ್‌ಡೌನ್ ಪೀರಿಯಡ್‌ನಲ್ಲಿ ಸ್ಕೂಲ್‌ನವರು ನನ್ನ ಕೇರೇ ಮಾಡ್ತಿಲ್ಲ. ಆನ್‌ಲೈನ್ನಲ್ಲಿ ಅವರಿಗೆ ಫೀಸ್ ಪೂರ್ತಿ ವಸೂಲಿ ಆಗಿಲ್ಲವಂತೆ. ನನಗೆ ಬಾಕಿ ಸಂಬಳ ಪೇ ಮಾಡೋವರೆಗೂ ಗಂಗಾನದಿ ಮಂಗಳೂರು ಕಡೇನೇ ಹರಿಯುತ್ತೆ ಅಂದ್ರು.”

“ಅಯ್ಯೋ ದೇವರೇ ! ಇಂಥ ಮೇಷ್ಟ್ರುಗಳನ್ನ ಕಳ್ಕೊಂಡ್ರೆ ಕಲಿಯೋ ಮಕ್ಕಳ ಗತಿ ಏನು? ಕಾವೇರಿ ನದಿಗೂ ಸಾವೇರಿ ರಾಗಕ್ಕೂ ವ್ಯತ್ಯಾಸ ತಿಳಿಯೊಲ್ಲ.”

“ಎಲ್ಲಾ ಕಡೆ ಕ್ವಾಲಿಟಿ ಇಳೀತಿದೆ. ಕಲಬೆರಕೆ ಹೆಚ್ಚಿದೆ. ಕಾನ್ವೆಂಟ್ ಮೇಡಮ್ಮುಗಳು ನೋಡೋಕೆ ಚೆನ್ನಾಗಿದ್ದಾರೆ ಅಂತ ಕೆಲಸಕ್ಕೆ ತಗೊಂಡು ಬಿಡ್ತಾರೆ. ಅವರು ಮಾಡಿದ್ದೇ ಪಾಟ, ಕೆ.ವಿ. ಪುಟ್ಟಪ್ಪನವರು ಕುವೆಂಪುಗೆ ಏನಾಗಬೇಕು ಅಂತ ಎಷ್ಟೋ ಜನಕ್ಕೆ ಗೊತ್ತಿರೊಲ್ಲ”.

ನನಗೂ ಕನ್‌ಫ್ಯೂಸ್ ಆಯಿತು.

“ಅವರಿಬ್ಬರೂ ಬೇರೆ ಬೇರೇನಾ ?” ಅಂದೆ. ವಿಶ್ವ ನಕ್ಕು ಮುಂದುವರಿಸಿದ. “ಕಳೆದ ವರ್ಷ ಒಬ್ಬ ಕಾನ್ವೆಂಟ್ ಮೇಡಂ 3ನೇ ಕ್ಲಾಸ್ ಮಕ್ಕಳಿಗೆ ಬಡ್ಕೊಳ್ಳಿ ಅಂತ ನವರಸಗಳ ಪಟ್ಟಿ ಬರೆಸ್ತಾ

ಇದ್ದಳು,”

“ನವರಸಗಳು ಎಲ್ಲರಿಗೂ ಗೊತ್ತು. ಶೃಂಗಾರ, ಹಾಸ್ಯ, ಕರುಣ, ರೌದ್ರ, ಭಯ, ಬೀಭತ್ಸ, ಅದ್ಭುತ, ಶಾಂತ ತಾನೇ?”

“ನೀನೇನೋ ಒಂಬತ್ತು ರಸ ಶಾಂತವಾಗಿ ಹೇಳಿದ್ದೆ. ಆದ್ರೆ ನಮ್ಮ ಕಾನ್ವೆಂಟ್ ಮೇಡಂಗೆ ಬೋರ್ಡ್ ಮೇಲೆ ಬರೆಯೋವಾಗ ಒಂದು ರಸ ಕಮ್ಮಿ ಬಂದ್ದಿತ್ತು.

“ಎಲ್ಲಿಂದಾದ್ರೂ ರಸ ಹುಡುಕಿ ಬರೀಬೇಕಿತ್ತು.”

“ಅದೂ ಮಾಡ್ಲಿಲ್ವೇ ? ಬೋರ್ಡ್ ಮೇಲಿನ ಬರವಣಿಗೆ 8ನೇ ರಸಕ್ಕೇ ನಿಂತ್ಹೋಯ್ತು. ಬರೊಳ್ಳಿ ಒಂಭತ್ತನೇ ರಸ, ಅಂದ್ಬಿಟ್ಟು ನಿಂಬೆರಸ ಬರೆಸಿದರು.”

“ಹಾಂ ! ನಿಂಬೆರಸ ಚಿತ್ರಾನ್ನಕ್ಕೆ ಅಲ್ಲವಾ ?

“ಏನ್ಮಾಡೋದು ? ಬದುಕೇ ಚಿತ್ರಾನ್ನ ಆಗ್ತಿದೆ. ನಮ್ಮ ಕಾಲದಲ್ಲಿ ಇದ್ದ ಮೇಷ್ಟು, ಮೇಡಮ್ಮುಗಳೇ ಬೇರೆ ಥರ. ಈಗಿರೋವರೇ ಬೇರೆ ಥರ. ನಮ್ಮ ಮಕ್ಕಳಿಗೆ ಅವರು ಹೆಂಗೆ ಪಾಟ ಮಾಡ್ತಿದ್ದಾರೆ ಅನ್ನೋದು ಆನ್‌ಲೈನಲ್ಲಿ ನೋಡಿದ್ದೇಲೇ ಗೊತ್ತಾಗಿದ್ದು” ಎಂದು ವಿಶ್ವ ನೊಂದು ನುರಿ

“ಮಕ್ಕಳ ಸ್ಕೂಲ್ ಮನೇಲಲ್ವೇ' ಅಂತ ಟಿ.ಪಿ. ಕೈಲಾಸಂ ಹೇಳಿದ್ದು ಈಗ ನಿಜ ಆಗ್ತಿದೆ ವಿಶ್ವ” ಎಂದೆ. “ಮಕ್ಕಳ ಸ್ಕೂಲ್ ಮನೇಲೇ ಆಗಿದೆ. ನಿಜ. ಅವರ ಜೊತೆ ಪೇರೆಂಟ್ಸ್ ಮನೇಲೇ ಬಿದ್ದಿರಬೇಕಲ್ಲ? ಅವರು ಕೆಲಸಕ್ಕೆ ಹೋಗೋದು ಯಾವಾಗ ? ಕೆಲಸಕ್ಕೆ ಹೋಗಲಿಲ್ಲ ಅಂದ್ರೆ ಸ್ಕೂಲ್ ಫೀಸ್ ಕಟ್ಟೋದು ಹೇಗೆ ?” ಎಂದು ವಿಶ್ವ ಹಣೆ ಚೆಚ್ಚಿಕೊಂಡ.

ಎಮ್.ಎಸ್.ನರಸಿಂಹ ಮೂರ್ತಿ

ಶತಮಾನದ ಹೊಸ್ತಿಲಲ್ಲಿ…
ರಾಯಚೂರಿನ ಕರ್ನಾಟಕ ಸಂಘ

1928 ರಲ್ಲಿ ಅಂದರೆ ಇಂದಿಗೆ ಸರಿ ಸುಮಾರು ತೊಂಭತ್ತೆರಡು ವರ್ಷಗಳ ಹಿಂದೆ ಅಸ್ತಿತ್ವಕ್ಕೆ ಬಂದ ರಾಯಚೂರಿನ ಕರ್ನಾಟಕ ಸಂಘವು ರಾಜ್ಯದ ಪುರಾತನ ಕನ್ನಡ ಸಂಘಗಳ ಪೈಕಿ ಅತ್ಯಂತ ಹಳೆಯದಾದ ಮತ್ತು ರೋಚಕ ಇತಿಹಾಸವನ್ನು ಹೊಂದಿರುವ ಒಂದು ಅಪರೂಪದ ಸಂಘವಾಗಿದೆ. ಈ ಸಂಘವು ದೇಶಕ್ಕೆ ಸ್ವಾತಂತ್ರ ಸಿಗುವ ಮುಂಚೆನಿಂದಲೂ ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯ ಬೆಳವಣಿಗೆಗೆ ಕಟಿಬದ್ಧವಾಗಿ ನಿಂತು ತನ್ನ ಘನತೆಯನ್ನು ಮೆರೆದಿದೆ. ಸ್ವಾತಂತ್ರ್ಯ ಹೋರಾಟ ಮತ್ತು ಕರ್ನಾಟಕ ಏಕೀಕರಣ ಚಳುವಳಿಗಳ ಸಂದರ್ಭದಲ್ಲಿ ರಾಯಚೂರಿನ ಕರ್ನಾಟಕ ಸಂಘವು ಒಂದು ಸ್ಪೂರ್ತಿದಾಯಕ ನೆಲೆಯಾಗಿ ಕೆಲಸ ಮಾಡಿದೆ.

ಸ್ವಾತಂತ್ರ್ಯ ಪೂರ್ವದಲ್ಲಿ ಹೈದ್ರಾಬಾದ್ ನಿಜಾಮರ ಆಳ್ವಿಕೆಗೆ ಒಳಪಟ್ಟಿದ್ದ " ರಾಯಚೂರು ಉರ್ದು ಪ್ರಭಾವದಲ್ಲಿ ತೀವ್ರವಾಗಿ ಬಳಲಿದ ಪ್ರದೇಶ. ಅಷ್ಟು ಮಾತ್ರವಲ್ಲ ಗಡಿ ನಾಡಾದ್ದರಿಂದ ತೆಲುಗು ಭಾಷೆಯ ಪ್ರಾಬಲ್ಯವೂ ಇಲ್ಲಿ ಬೆಳೆಯುತ್ತಲೇ ಬಂದಿದೆ. ಒಂದೆಡೆ ಉರ್ದು, ಮತ್ತೊಂದೆಡೆ ತೆಲುಗು ಹೀಗೆ ಎರಡೂ ಅನ್ಯ ಭಾಷೆಗಳ ಒತ್ತಡಕ್ಕೆ ಸಿಲುಕಿದ ರಾಯಚೂರಿನಲ್ಲಿ ಕನ್ನಡ ಅತಂತ್ರವಾಗಿ ಶೋಚನೀಯ ಸ್ಥಿತಿ ತಲುಪಿತ್ತು. ಇಂತಹ ಒತ್ತಡದ ಪರಿಸರದಲ್ಲಿ ಕನ್ನಡದ ಉಳಿವಿಗಾಗಿ ರಾಯಚೂರು ಕರ್ನಾಟಕ ಸಂಘವು ನಿರ್ವಹಿಸಿದ ಪಾತ್ರವು ತುಂಬಾ ಮಹತ್ವದ್ದಾಗಿದೆ.

ಸ್ವಾತಂತ್ರ್ಯದ ಚಳುವಳಿಗೆ ಹೊಸ ಕಿಚ್ಚನ್ನು ಹಚ್ಚಿದ ಕೀರ್ತಿ ಸಂಘಕ್ಕೆ ಸಲ್ಲುತ್ತದೆ. ಬ್ರಿಟಿಷ್ ಇಂಡಿಯಾದ ವಿರುದ್ಧ ಜನಾಭಿಪ್ರಾಯ ರೂಪಿಸುವ ಕಾರ್ಯ ವಾಚನಾಲಯದ ಮುಖಾಂತರ ನೆರವೇರಿಸುವಂತಾದದ್ದು ಸಂಘದ ಸಾಧನೆ. ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದ ವೀರಣ್ಣ ಮಾಸ್ತರ್, ಜಗನ್ನಾಥ ರಾವ್ ಫಡ್ನವೀಸ್, ಡಿ. ಮಾಣಿಕರಾವ್, ರಾ.ಗು.ಜೋಶಿ ಮುಂತಾದ ತರುಣರನೇಕರು ಕೂಡಿ ಕಟ್ಟಿದ ಸಂಸ್ಥೆ ವಿಧ್ಯುಕ್ತವಾಗಿ ಆರಂಭವಾದದ್ದು 1928 ರ ಶ್ರೀ ರಾಮನವಮಿ ದಿನದಂದು. ಮೊದಲು 'ಕರ್ನಾಟಕ ತರುಣ ಸಂಘ' ಎಂದಿದ್ದ ಹೆಸರು ನಂತರ ಕರ್ನಾಟಕ ಸಂಘವಾಗಿ ಮಾರ್ಪಟ್ಟಿತು.

ಸಂಘವು ಹಲವು ಹತ್ತು ದಿಕ್ಕುಗಳಲ್ಲಿ ತನ್ನ ಚಟುವಟಿಕೆಗಳನ್ನು ವಿಸ್ತರಿಸುತ್ತಾ, ಸಾಂಸ್ಕೃತಿಕ, ಸಾಮಾಜಿಕ, ಸಾಹಿತ್ಯಿಕ ಮತ್ತು ಶೈಕ್ಷಣಿಕವಾಗಿ ಜನರ ಬದುಕಿನ ಜೊತೆಗೆ ನೇರವಾಗಿ ಸ್ಪಂದಿಸುತ್ತಾ ಸಾಗಿದೆ. 1930 ರ ಹೊತ್ತಿಗೆ ನಾಡ ಹಬ್ಬ ಗಣೇಶೋತ್ಸವ ಮುಂತಾದ ಕಾರ್ಯಕ್ರಮಗಳ ಮೂಲಕ ಜನಜಾಗೃತಿಯ ಕೆಲಸ ಕೈಗೊಂಡ ಸಂಘದ ಮೇಲೆ ಆಗಿನ ನಿಜಾಮ ಸರಕಾರದ ಕಣ್ಣು ಬಿದ್ದಿತ್ತು. ನಾಡಹಬ್ಬದ ಕಾರ್ಯಕ್ರಮದ ಭಾಷಣಗಳಿಗೆ
ಸರಕಾರದ ಪರವಾನಿಗೆಯನ್ನು ಬೇಡಬೇಕಾದ ಅವಸ್ಥೆ ಇತ್ತು. ಮೈಸೂರು ಸಂಸ್ಥಾನದಲ್ಲಿ ಆ ಕಾಲಕ್ಕೆ ಹಿರಿಯ ಅಧಿಕಾರಿಗಳಾಗಿ ಸೇವೆ ಸಲ್ಲಿಸುತ್ತಿದ್ದ ಮಾಸ್ತಿ ಅವರು ನಾಡ ಹಬ್ಬಕ್ಕೆಂದು ಸಂಘಕ್ಕೆ ಬಂದಿದ್ದವರು ಭಾಷಣ ಮಾಡದೆಯೇ ಹಿಂತಿರುಗಬೇಕಾದ ಪ್ರಸಂಗ ಇತಿಹಾಸದಲ್ಲಿ ದಾಖಲಾಗಿದೆ. ಇಂತಹ ಒಂದು ಉಸಿರು ಗಟ್ಟಿಸುವ ಮತ್ತು ಇಕ್ಕಟ್ಟಿನ ವಾತಾವರಣದ ಮಧ್ಯೆಯೂ ರಾಯಚೂರಿನ ಕರ್ನಾಟಕ ಸಂಘವು ದಿಟ್ಟತನದಿಂದ ತನ್ನ ಅಸ್ತಿತ್ವವನ್ನು ಕಾಪಾಡಿಕೊಂಡು ಬಂದಿದೆ.

ದಿಗ್ಗಜರೆನಿಸಿಕೊಂಡ ಕನ್ನಡದ ಅನೇಕ ಸತ್ಪುರುಷರು ಇಲ್ಲಿ ತಮ್ಮ ಪಾದಧೂಳಿಯಿಂದ ಸಂಘವನ್ನು ಪಾವನಗೊಳಿಸಿದ್ದಾರೆ. ಮುದವೀಡು ಕೃಷ್ಣರಾಯರು, ಗರೂಡ ಸದಾಶಿವರಾಯರು, ಆಲೂರು ವೆಂಕಟರಾಯರು, ಗಲಗಲಿ ಕೂರ್ಮಾಚಾರ್, ಬಿ.ಎಂ. ಶ್ರೀಕಂಠಯ್ಯ, ಡಿ.ವಿ.ಜಿ., ದ.ರಾ. ಬೇಂದ್ರೆ, ಜಿ.ಪಿ. ರಾಜರತ್ನಂ ಮುಂತಾದ ಮಹಾನ್ ಚೇತನಗಳು ತಮ್ಮ ವಿದ್ವತ್ಪೂರ್ಣ ಉಪನ್ಯಾಸಗಳಿಂದ ಸಂಘದಲ್ಲಿ ಹೊಸ ಚೈತನ್ಯ ಮೂಡಿಸಿದ್ದಾರೆ. ಎರಡು ಬಾರಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಆಯೋಜಿಸಿದ ಕೀರ್ತಿ ಕರ್ನಾಟಕ ಸಂಘಕ್ಕೆ ಸಲ್ಲುತ್ತದೆ. 1934 ರಲ್ಲಿ ಪಂಜೆ ಮಂಗೇಶರಾಯರ ಅಧ್ಯಕ್ಷತೆಯಲ್ಲಿ ನಡೆದ 20 ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಮತ್ತು1955ರಲ್ಲಿ ಆದ್ಯ ರಂಗಾಚಾರ್ಯರ ಅಧ್ಯಕ್ಷತೆಯಲ್ಲಿ ನಡೆದ 38 ನೇ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಸಂಘ ಅತ್ಯಂತ ಯಶಸ್ವಿಯಾಗಿ ನಿರ್ವಹಿಸಿತು.

ಹೈದರಾಬಾದ್ ಸಂಸ್ಥಾನದ ಪ್ರಧಾನ ಮಂತ್ರಿಗಳಾದ ಸರ್ ಮಿರ್ಜಾ ಮಹ್ಮದ್ ಇಸ್ಮಾಯಿಲ್ ಅವರು ಸಂಘದ ಅಡಿಗಲ್ಲು ಸಮಾರಂಭವನ್ನು 1946 ರಲ್ಲಿ ನೆರವೇರಿಸಿದ್ದಾರೆ. ವಿಶಾಲವಾದ ಬಯಲು ಜಾಗವನ್ನು ಹೊಂದಿರುವ ರಾಯಚೂರು ಕರ್ನಾಟಕ ಸಂಘವು 1953 ರ ಹೊತ್ತಿಗೆ ಹೊಸ ಕಟ್ಟಡ ನಿರ್ಮಿಸಿಕೊಂಡು ನಿರಂತರ ಕನ್ನಡ ಸೇವೆಗೆ ಕಂಕಣ ಕಟ್ಟಿ ನಿಂತಿತು.
ಸಂಘ ಕನ್ನಡದಲ್ಲಿ ಹಲವಾರು ಪುಸ್ತಕಗಳನ್ನು ಪ್ರಕಟಿಸಲು ಆರಂಭಿಸಿದ್ದು ಅದರ ಉತ್ತಮ ಅಭಿರುಚಿಗೆ ಇನ್ನೊಂದು ನಿದರ್ಶನವಾಗಿದೆ. ಪಂಡಿತ ತಾರಾನಾಥರ ಮುನ್ನುಡಿಯಿರುವ `ನಿಜಾಂ ಕರ್ನಾಟಕ' ಎಂಬ ಪುಸ್ತಕ (1931) ಸಂಘದ ಮೊದಲನೇ ಪ್ರಕಟಣೆ. ನಂತರ ಅದು ಅನೇಕ ಕೃತಿಗಳನ್ನು ಹೊರ ತಂದಿತು. ಆ ಪೈಕಿ ಡಾ| ರಂ.ಶ್ರೀ ಮುಗಳಿ ಅವರ `ರನ್ನನ ಕೃತಿರತ್ನ'ವೂ ಒಂದು. ಷಡಕ್ಷರದೇವ ಕೃತ 'ಶಬರ ಶಂಕರ ವಿಳಾಸ' ವನ್ನು ಸಂಗ್ರಹಿಸಿ ಪ್ರಕಟಿಸಿದವರು ತ.ಶ್ರೀಕಂಠಯ್ಯನವರು. 1964 ರಲ್ಲಿ ಅಚ್ಚಾಗಿದ್ದ ಈ ಕೃತಿ ಕರ್ನಾಟಕ ವಿಶ್ವವಿದ್ಯಾಲಯದ ಬಿ.ಎ. ಅಂತಿಮ ವರ್ಷಕ್ಕೆ ಪಠ್ಯ ಪುಸ್ತಕವೆಂದು ಆಯ್ಕೆಯಾದಾಗ 1971 ರಲ್ಲಿ ಮರು ಮುದ್ರಣ ಕಂಡಿತು. ಧ್ರುವನಾರಾಯಣ ಮತ್ತು ಬಿ.ಎನ್.ಅಂಗಡಿ ಅವರು ಸಂಪಾದಿಸಿದ 'ಸ್ವಾತಂತ್ರ್ಯಾಂದೋಲನ ರಾಯಚೂರು ಜಿಲ್ಲೆ' ರಾ.ಗು.ಜೋಶಿ ಸಂಪಾದಕತ್ವದ 'ಅರುಣ ಕಿರಣ' ಎಂಬ ಕೈ ಬರಹದ ಪತ್ರಿಕೆ, 'ವಿಜಯಾ' ಮಾಸಿಕ, ಬಸವ ಸ್ಮರಣೆ, ಪುರಂದರ ಸ್ಮರಣೆ ಮುಂತಾದ ಕೃತಿಗಳನ್ನು ಸಂಘ ಪ್ರಕಟಿಸಿದೆ.

ಅಖಿಲ ಕರ್ನಾಟಕ ಆಯುರ್ವೇದ ಸಮ್ಮೇಳನ, ಮಕ್ಕಳ ಸಮ್ಮೇಳನ, ಬಾಲಕರ ಬಿಡಾರ, ನಿಜಾಂ ಕರ್ನಾಟಕ ಕನ್ನಡ ಸಾಹಿತ್ಯ ಸಮ್ಮೇಳನ, ಜಾನಪದ ಕಲಾ ಮಹೋತ್ಸವ ಹೀಗೆ ಕಾಲ ಕಾಲಕ್ಕೆ ಸಮಾರಂಭಗಳ ಸಂಭ್ರಮದಲ್ಲಿ ಗಿಜಿಗುಟ್ಟುತ್ತಲೇ ಕಳೆದ ಕರ್ನಾಟಕ ಸಂಘ ಗಡಿನಾಡಲ್ಲಿ ಕನ್ನಡ ಭಾಷೆ ಮತ್ತು ಸಂಸ್ಕೃತಿಯನ್ನು ಎತ್ತಿ ಹಿಡಿಯುತ್ತ ಬಂದಿದೆ. ಡಾ|| ಭಗೀರಥರಾವ ದೇಶಪಾಂಡೆ, ಡಾ||ಎಸ್.ರಾಮಕೃಷ್ಣ ರಾಯಚೂರವಾಣಿಯ ಎನ್.ಕೆ.ಕುಲಕರ್ಣಿ, ಸಾಹಿತಿ ಕೃಷ್ಣ ಕೊಲ್ಹಾರ ಕುಲಕರ್ಣಿ, ಎಂ.ಅನಂತಮೂರ್ತಿ ಕೆ ತಿಮ್ಮಯ್ಯ ಮತ್ತು ಹಾಲಿ ಅಧ್ಯಕ್ಷ ನರಸಣ್ಣ ಮುಂತಾದ ಮಹನೀಯರು ತಮ್ಮ ತಮ್ಮ ಅವಧಿಯಲ್ಲಿ ವೈವಿಧ್ಯಮಯ ಕಾರ್ಯಕ್ರಮಗಳನ್ನು ರೂಪಿಸುತ್ತ ಬಂದಿದ್ದಾರೆ.
ರಾಯಚೂರಿನ ಹೆಮ್ಮೆಯ ಈ ಸಂಘ ಇನ್ನೇನು ಶತಮಾನ ಪೂರೈಸುವತ್ತ ದಾಪುಗಾಲು ಇಡುತ್ತಲಿದೆ. ಅದುವೇ ನಾಡಿನ ಎಲ್ಲ ಕನ್ನಡಿಗರು ಸಂಭ್ರಮಿಸುವಂಥ ಸುಸಮಯ.

-ಶ್ರೀನಿವಾಸ ಗಟ್ಟು
ರಾಯಚೂರು.

ವರ ಕವಿ ಕಾಳಿದಾಸನ ಮಹಾಕಾವ್ಯ, ರಘುವಂಶದಲ್ಲಿ ಕಾಣುವ ಇಂದುಮತೀ ಸ್ವಯಂವರದ ಚಿತ್ರಣ

ಕಾಳಿದಾಸನ ಕಾವ್ಯಗಳಲ್ಲಿ ಕಾಣುವ ಹಲವಾರು ಸನ್ನಿವೇಶಗಳ ಚಿತ್ರಣಗಳು ಓದುಗರಿಗೆ / ಕೇಳುಗರಿಗೆ ತಾವೇ ಅದರಲ್ಲಿ ಭಾಗಿಯಾಗಿರುವಂತೆ ಭಾಸವಾಗುವ ಪ್ರಾತಿಭಾ ಸೃಷ್ಟಿಗಳು. ಇದೇ ವೇದಿಕೆಯಲ್ಲಿ, 'ಕುಮಾರ ಸಂಭವ' ದಲ್ಲಿ ಪಾರ್ವತಿ ತನ್ನ ತಪೋಭೂಮಿಯಲ್ಲಿ ಪರಮೇಶ್ವರನನ್ನು ಕಾಣುವ ಮನೋಜ್ಞ ಚಿತ್ರಣವನ್ನು ಹಿಂದೆ ನೋಡಿದ್ದೇವೆ.

ಈಗ, 'ರಘುವಂಶ' ಮಹಾಕಾವ್ಯದಲ್ಲಿ ಕಾಣುವ ಇಂದುಮತೀ ಸ್ವಯಂವರದ ಚಿತ್ರಣ ನೋಡೋಣ.
ಒಬ್ಬ ಕನ್ಯೆ ಸ್ವಯಂ ಅಂದರೆ ತಾನೇ ತನ್ನ ವರನನ್ನು - ಭಾವೀಪತಿಯನ್ನು ಆರಿಸಿಕೊಳ್ಳುವ ವ್ಯವಸ್ಥೆಯೇ ಸ್ವಯಂವರ. ವೇದಕಾಲದಲ್ಲಿ ಇಂತಹ ಆಯ್ಕೆಯ ಸ್ವಾತಂತ್ರ್ಯ ಎಲ್ಲಾ ತರುಣಿಯರಿಗೂ ಇದ್ದ ಮಾಹಿತಿ ಸಿಗುತ್ತದೆ. ಆದರೆ, ನಮ್ಮ ಕಾವ್ಯೇತಿಹಾಸಿಕಗಳಲ್ಲಿ
ಕಾಣುವುದು ರಾಜಕುಮಾರಿಯರ ಸ್ವಯಂವರಗಳು ಮಾತ್ರ. ಅದರಲ್ಲಿಯೂ
ಬಹಳಷ್ಟು ಸಂದರ್ಭಗಳಲ್ಲಿ, ಮದುಮಗಳ ಆಯ್ಕೆಯ ಸ್ವಾತಂತ್ರ್ಯಕ್ಕಿಂತಲೂ ಅವಳ ತಂದೆಯ ಇಚ್ಛೆಯೇ ಪ್ರಮುಖವಾಗಿ ಅದನ್ನು ರಾಜಕೀಯ ದಾಳವಾಗಿಸಿದ ವಿಡಂಬನೆಗಳನ್ನು ನೋಡಬಹುದು.

ಈಗ ನಾವು ನೋಡುತ್ತಿರುವ ರಘುವಂಶ ಮಹಾಕಾವ್ಯದಲ್ಲಿ ಕಾಣುವ ಇಂದುಮತೀ ಸ್ವಯಂವರದಲ್ಲಿ ಅವಳಿಗೆ ಸಂಪೂರ್ಣವಾಗಿ ಆಯ್ಕೆಯ ಸ್ವಾತಂತ್ರ್ಯವಿದ್ದದ್ದು ಕಾಣುತ್ತದೆ. ಮನೋಜ್ಞ ವರ್ಣನೆಗಳಿಂದ ಈ ಪ್ರಸಂಗವನ್ನು ಒಂದು ರಮ್ಯ ಚಿತ್ರಕಾವ್ಯವಾಗಿಸಿದ್ದಾನೆ ಕಾಳಿದಾಸ.

ಇಂದುಮತಿ ಪ್ರಖ್ಯಾತವಾದ ವಿದರ್ಭ ರಾಜ್ಯದ ರಾಜಕುಮಾರಿ. ಅವಳ ತಂದೆ ತಾಯಿಯರು ಬಾಲ್ಯದಲ್ಲಿಯೇ ಕಾಲವಶರಾದರು. ಅಣ್ಣ ಭೋಜರಾಜ ತನ್ನ ಮುದ್ದಿನ ತಂಗಿಗೆ ಅನುರೂಪನಾದ ವರನನ್ನು ಆಯ್ಕೆ ಮಾಡಿಕೊಳ್ಳಲು ಸ್ವಯಂವರ ಏರ್ಪಾಡು ಮಾಡುತ್ತಾನೆ. ಅಪೂರ್ವ ಸುಂದರಿ ಎಂದು ಖ್ಯಾತಳಾಗಿದ್ದ ಇಂದುಮತಿಯನ್ನು ವಿವಾಹವಾಗುವ ಇಚ್ಛೆಯಿಂದ ರಾಜ - ಮಹಾರಾಜರು - ರಾಜಕುಮಾರರು ಬಂದು ಸೇರಿದ್ದಾರೆ.

ವಿಶಾಲವಾದ ಸ್ವಯಂವರ ಮಂಟಪ ಭವ್ಯವಾಗಿ ಶೃಂಗಾರಗೊಂಡಿದೆ. ಅಗುರು ಚಂದನಗಳ ಸುಗಂಧ ಹರಡಿದೆ .. ಶಂಖನಾದಗಳು ಮೊಳಗುತ್ತಿವೆ. ಸಾಲಾಗಿ ದೊಡ್ಡ ದೊಡ್ಡ ಆಸನಗಳಲ್ಲಿ ಕುಳಿತಿರುವ ವಿವಾಹಾಕಾಂಕ್ಷಿಗಳು ಕಾತುರದಿಂದ ರಾಜಕುಮಾರಿಯ ಆಗಮನವನ್ನು ನಿರೀಕ್ಷಿಸುತ್ತಿದ್ದಾರೆ. ವಧುವಿನ ಅಲಂಕಾರದಲ್ಲಿ ಶೋಭಿಸುತ್ತಿದ್ದ ಇಂದುಮತಿ ಮೇನೆಯಲ್ಲಿ ಕುಳಿತು ತನ್ನ ಆಪ್ತ ಸಖಿ ಸುನಂದೆಯೊಡನೆ ಬಂದಿದ್ದಾಳೆ. ಅವಳ ಅಲೌಕಿಕ ಅಪ್ರತಿಮ ಚೆಲುವನ್ನು ಕಂಡ ರಾಜರ ಚಿತ್ತ - ಆತ್ಮವೇ ಅವಳತ್ತ ಹಾರಿ ಹೋಗಿ ಅವರು ನೆಪಮಾತ್ರಕ್ಕೆ ಆಸನದಲ್ಲಿ ಕುಳಿತಿದ್ದರು ಎಂದು ತೋರುತ್ತಿದೆ.

ಅವರು ಕುಳಿತಿದ್ದ ಆಸನಗಳ ಮಧ್ಯೆ ಇದ್ದ ಮಾರ್ಗದಲ್ಲಿ ವರಮಾಲೆಯನ್ನು ಕೈಯಲ್ಲಿ ಹಿಡಿದ ಇಂದುಮತಿಯನ್ನು ಸುನಂದ ಕರೆತರುತ್ತಾಳೆ. ಸುನಂದೆಯನ್ನು ಕಾಳಿದಾಸ `ಪುಂವತ್ ಪ್ರಗಲ್ಭಾ' - ಪುರುಷರಂತೆ ಪ್ರಗಲ್ಭೆ ಅಂದರೆ, ಜಾಣತನ/ ತಿಳುವಳಿಕೆ

ಉಳ್ಳವಳು ಎನ್ನುತ್ತಾನೆ. ಒಬ್ಬೊಬ್ಬ ರಾಜನ ಬಳಿ ಬಂದು ನಿಂತಾಗ ಸುನಂದ ಆ ರಾಜನ ಪೂರ್ವಾಪರಗಳನ್ನೂ ಸಾಮರ್ಥ್ಯಗಳನ್ನೂ ಹೇಳುತ್ತಾಳೆ. ಮೆಚ್ಚುವಲ್ಲಿ ಅಥವಾ ನಿರಾಕರಿಸುವಲ್ಲಿ ಇಂದುಮತಿಗೆ ಸಹಾಯಕವಾಗುವಂತೆ ವರಿಸಲು ಬಂದಿರುವ ರಾಜನ ಅಥವಾ ರಾಜಕುಮಾರನ ಅವಗುಣಗಳನ್ನೂ ಜಾಣ್ಮೆಯಿಂದ ತಿಳಿಸುತ್ತಾಳೆ.

ಯಾವುದೇ ಒಬ್ಬ ವರನ ಸೌಂದರ್ಯ, ಸಾಮರ್ಥ್ಯ ಹಾಗೂ ರಾಜ್ಯ - ಸಂಪತ್ತುಗಳೆಲ್ಲವೂ ಸಮರ್ಪಕವಾಗಿದ್ದರೂ ಒಬ್ಬ ಕನ್ಯೆ ಅವನನ್ನು ಮೆಚ್ಚಬೇಕೆಂದೇನೂ ಇಲ್ಲ ಎಂದು ಕಾಳಿದಾಸ ಹೇಳುತ್ತಾನೆ. ಮೊದಲಿಗೆ, ಮಗಧ ರಾಜನನ್ನು

ನಿರಾಕರಿಸುವ ಚಿತ್ರಣದಲ್ಲಿ ಇಂದುಮತಿಯ ಜಾಣ್ಮೆ ಎದ್ದು ಕಾಣುವಂತಹುದು.

ಏವಂ ತಯೋಕ್ತೇ ತಮವೇಕ್ಷ್ಯ ಕಿಂಚಿದ್ವಿಸ್ರಂಸಿದೂರ್ವಾಂಕಮಧೂಕಮಾಲಾ |
ಋಜುಪ್ರಣಾಮ ಕ್ರಿಯಯೈವ ತನ್ವೀ ಪ್ರತ್ಯಾದಿದೇಶೈನಮಭಾಷಮಾಣಾ ||
"ಮಗಧ ರಾಜನ ಬಗ್ಗೆ ಸುನಂದಾ ಹೇಳಿದ್ದೆಲ್ಲವನ್ನೂ ಕೇಳಿದ ಮೇಲೆ, ಅವನನ್ನೊಮ್ಮೆ ನೋಡಿ, ಮೌನವಾಗಿ ತಲೆ ಬಾಗಿಸಿ (ನಮಸ್ಕರಿಸಿ) ತನ್ನ ನಿರಾಕರಣೆಯನ್ನು ಸೂಚಿಸುತ್ತಾಳೆ. ಆಗವಳು ಹಿಡಿದಿದ್ದ ವರಮಾಲೆಯೂ ಕೊಂಚ ಅಲುಗಿತಂತೆ! "

ಮುಂದೆ ಕಂಡ ಅಂಗರಾಜನನ್ನು ಮೆಚ್ಚದ ಇಂದುಮತಿ, ತನ್ನ ಕಣ್ಣುಗಳನ್ನು ಅವನಿಂದ ಬೇರೆಡೆ ತಿರುಗಿಸಿ, ಸುನಂದೆಗೆ ಮುಂದೆ ನಡಿ ಎನ್ನುತ್ತಾಳೆ. ಇಲ್ಲಿ ಕಾಳಿದಾಸ ಹೇಳುವ ಮಾತುಗಳು ಪ್ರಸಿದ್ಧವಾದುದು.

ಅಥಾಂಗರಾಜಾದವತಾರ್ಯ ಚಕ್ಷುರ್ಯಾಹೀತಿ ಜನ್ಯಾಮವದತ್ಕುಮಾರೀ \
ನಾಸೌ ನ ಕಾಮ್ಯೋ ನ ಚ ವೇದ ಸಮ್ಯಗ್ ದ್ರಷ್ಟುಂ ನ ಸಾ ಭಿನ್ನರುಚಿರ್ಹಿ ಲೋಕಃ\\
"ಇವನು ಮೆಚ್ಚಲು ತಕ್ಕಂಥವನಲ್ಲ ಎಂದೇನೂ ಅಲ್ಲ. ಹಾಗೆಯೇ ಅವಳಿಗೆ ಸರಿಯಾಗಿ ತಿಳಿಯುವ ಸಾಮರ್ಥ್ಯವಿಲ್ಲ ಎಂದೇನೂ ಅಲ್ಲ. ಹಾಗಾದರೆ, ಇವನನ್ನು ತಿರಸ್ಕರಿಸಿ ಮುಂದೆ ನಡೆದುದಕ್ಕೆ ಕಾರಣ ಏನು ಅಂದರೆ, ಜನರ ಅಭಿರುಚಿ ಭಿನ್ನವಾಗಿರುತ್ತದೆ." ಲೋಕೋ ಭಿನ್ನರುಚಿ ಎಂದು ನಾವೀಗ ಸಾಮಾನ್ಯವಾಗಿ ಹೇಳುವ ಮಾತಿನ ಮೂಲ ಇಲ್ಲಿದೆ.

ಹೀಗೆ, ಇಂದುಮತಿ ಒಬ್ಬೊಬ್ಬ ರಾಜನ ಮುಂದೆ ನಿಲ್ಲುವುದು ಹಾಗೂ ಮೆಚ್ಚದೆ ಮುಂದೆ ಹೋಗುವುದು ಬಹುಕಾಲ ನಡೆಯುತ್ತದೆ.

ಸೂರ್ಯಬಂದಾಗ ಅರಳುವ ತಾವರೆಯನ್ನು ಚಂದ್ರ ಅರಳಿಸಲಾಗದಂತೆ, ವರಿಸಲು ಬಂದಿರುವ ರಾಜನನ್ನು ವರ್ಣಿಸುವ ಸುನಂದೆಯ
ಮಾತು ಇಂದುಮತಿಯನ್ನು ತಾಗುವುದೇ ಇಲ್ಲ.
ಆಗ ಕಾಳಿದಾಸ ಹೇಳುವ ಮಾತಿನಿಂದ ಅಲ್ಲಿನ ನೋಟ ನಮ್ಮ ಕಣ್ಣ ಮುಂದೆ ಬಂದುಬಿಡುತ್ತದೆ.
ಇಲ್ಲಿ, ಕಾಳಿದಾಸನ ಅನುಪಮ ಉಪಮಾ ಚಾತುರ್ಯದ ಅನುಭೂತಿಯಾಗುತ್ತದೆ.

ಸಂಚಾರಿಣೀ ದೀಪಶಿಖೇವ ರಾತ್ರೌ ಯಮ್ ಯಮ್ ವ್ಯತೀಯಾಯ ಪತಿಂವರಾ ಸಾ|
ನರೇಂದ್ರ ಮಾರ್ಗಾಟ್ಟ ಇವ ಪ್ರಪೇದೇ ವಿವರ್ಣಭಾವಮ್ ಸ ಸ ಭೂಮಿಪಾಲಃ ||
- ೩ -
ನಾವು ಈಗ ಕಾಣುವಂತೆ, ದೊಡ್ಡ ದೊಡ್ಡ ಮಹಲುಗಳಿರುವ ಒಂದು ಪ್ರಮುಖ ಮಾರ್ಗದಲ್ಲಿ ಬೀದಿ ದೀಪಗಳಿಲ್ಲದ ರಾತ್ರಿಯಲ್ಲಿ ಕೈಯಲ್ಲಿ
ಹಣತೆಯೊಂದನ್ನು ಹಿಡಿದು ಸಾಗುವುದನ್ನು ಕಲ್ಪಸಿಕೊಳ್ಳಬೇಕಾಗುತ್ತದೆ. ಒಂದೊಂದು ಮಹಲಿನ ಬಳಿ ಬಂದಾಗ ಅದು ಮಾತ್ರ ಬೆಳಗಿ, ಹಣತೆಯ
ಬೆಳಕು ಮುಂದೆ ಹೋದಾಗ ಅಲ್ಲಿ ಕತ್ತಲು ಆವರಿಸುವಂತೆಯೇ ಸ್ವಯಂವರ ಮಂಟಪದಲ್ಲಿದ್ದ
ನಿರಾಕರಣಗೊಂಡ ರಾಜರ ಪಾಡಾಯಿತು ಎಂದು ತಿಳಿಯುತ್ತದೆ. ಅದನ್ನೇ ಕಾಳಿದಾಸ, ರಾತ್ರಿಯಲ್ಲಿ ಚಲಿಸುತ್ತಿರುವ (ಸಂಚಚಾರಿಣೀ ದೀಪಶಿಖಾ) ದೀಪದಂತೆ, ಯಾವ ಯಾವ ರಾಜನನ್ನು ವರಿಸದೆ ಇಂದುಮತಿ ಮುಂದೆ ಹೋದಳೋ ಆಯಾ ರಾಜರು ಕಳಾಹೀನರಾದರು ಎನ್ನುತ್ತಾನೆ. ಈ ಉಪಮೆಯಿಂದಾಗಿ, ಕಾಳಿದಾಸನಿಗೆ `ದೀಪಶಿಖಾ ಕಾಳಿದಾಸ' ಎನ್ನುವ ಉಪಾಧಿ ದೊರೆತಿದೆ.

ಸೂರ್ಯವಂಶದ ಚಕ್ರವರ್ತಿ ರಘು ವಿನ ಮಗ ಅಜನ ಮುಂದೆ ಇಂದುಮತಿ ಬರುವಾಗ ಅವನ ಬಲಭುಜ ಅದುರಿ ಶುಭ ಸೂಚನೆ ದೊರಕುತ್ತದೆ. ರಘುವಂಶದ ರಾಜರನ್ನು ವರ್ಣಿಸುವುದೇ ಗುರಿಯಾಗಿದ್ದ ಕಾಳಿದಾಸ ಅಜನ ಸೌಂದರ್ಯ, ವೀರ್ಯ, ಸಾಹಸಗಳ ಸುದೀರ್ಘ ವರ್ಣನೆಯನ್ನು ಸುನಂದೆಯಿಂದ ಮಾಡಿಸುತ್ತಾನೆ. ತಾನು ಹೇಳುವುದೆಲ್ಲವೂ ಮುಗಿದ ಮೇಲೆ "ನಿನಗೆ ಅನುರೂಪನಾದ ಇವನನ್ನು ವರಿಸು .. ರತ್ನವು ಚಿನ್ನವನ್ನು ಸೇರಿ ಶೋಭಿಸಲಿ" ಎಂದು ಸುನಂದೆ ನೇರವಾಗಿಯೇ ಹೇಳುತ್ತಾಳೆ.

ಅಷ್ಟರಲ್ಲಾಗಲೇ ಅಜನಿಗೆ ಮನಸೋತ ಇಂದುಮತಿಗೆ ಮಾತನಾಡಲಾಗುವುದಿಲ್ಲ. ರೋಮಾಂಚನಗೊಂಡ ಅವಳು ಲಜ್ಜಾನ್ವಿತಳಾಗಿ ಪ್ರೇಮದಿಂದ ನೋಡಿದ ನೋಟವೇ ವರಮಾಲೆಯಂತೆ ಅಜನನ್ನು ಅಲಂಕರಿಸಿತು ಎಂದು ಸಂತಸದಿಂದ ಹೇಳುತ್ತಾನೆ ಕಾಳಿದಾಸ.

ಆಗ ಇಂದುಮತಿ, ಅಜನ ಕೊರಳಿಗೆ ವರಮಾಲೆಯನ್ನು ಹಾಕಲು ಸುನಂದೆಗೆ ಹೇಳುತ್ತಾಳೆ. ಇದು ಅಲ್ಲಿ ಆಚರಣೆಯಲ್ಲಿದ್ದ ಪದ್ಧತಿಯಂತೆ ತೋರುತ್ತದೆ.

ಅಲ್ಲಿಗೆ ಸ್ವಯಂವರ
ಸಂಪೂರ್ಣವಾಗುತ್ತದೆ. ಸಂಭ್ರಮದಿಂದ ವಿವಾಹ ಜರುಗಿ, ಅಜ - ಇಂದುಮತಿಯರ ಸುಖ ದಾಂಪತ್ಯ, ಮಗ ದಶರಥನ ಜನನ - ಹೀಗೆ ಕಥಾನಕ ಮುಂದುವರೆಯುತ್ತದೆ.

ರಘುವಂಶ ಕಾವ್ಯ ರಚನೆಯ ಪ್ರಾರಂಭದಲ್ಲಿಯೇ, "ನನ್ನ ಕಾವ್ಯರಚನಾ ಶಕ್ತಿ ಅಲ್ಪವಾದರೂ, ರಘುಕುಲದ ರಾಜರ ಮಹಾ ಗುಣಗಳು ಬಂದು ನನ್ನ ಕಿವಿಯಲ್ಲಿ ಬರೆಯುವಂತೆ ಪ್ರಚೋದನೆ ಮಾಡಿದ್ದರಿಂದಾಗಿ ಬರೆಯುತ್ತಿದ್ದೇನೆ" ಎಂದು ಕಾಳಿದಾಸ ಹೇಳುತ್ತಾನೆ.

ರಘೂಣಾಮನ್ವಯಂ ವಕ್ಷ್ಯೇ ತನುವಾಗ್ವಿಭವೋ-ಪಿ ಸನ್|
ತದ್ ಗುಣೈಃ ಕರ್ಣಮಾಗತ್ಯ ಚಾಪಲಾಯ ಪ್ರಚೋದಿತಃ||

ಹಾಗಾಗಿ ಸ್ವಯಂವರದಲ್ಲಿ ಇಂದುಮತಿ ವರಿಸಿದ ಅಜ, ಅವನ ತಂದೆ ರಘು ಹಾಗೂ ತಾತನಾದ ದಿಲೀಪ ಮಹಾರಾಜನ ಮಹೋನ್ನತ ಗುಣಗಳ ಕಥನವೂ ಇಲ್ಲಿದೆ. ಇಂದುಮತಿಯನ್ನು ನೋಡಿ ರಾಜರು ತೋರಿದ ಶೃಂಗಾರ ಚೇಷ್ಟೆಗಳು, ಒಬ್ಬೊಬ್ಬ ರಾಜರ ಶೌರ್ಯ ಸಂಪತ್ತುಗಳನ್ನು ವರ್ಣಿಸುವುದರೊಂದಿಗೆ, ಆ ರಾಜ್ಯಗಳಲ್ಲಿ ಕಾಣುವ ವಿಶೇಷಗಳು, ನದಿ - ಪರ್ವತಗಳು, ರಮ್ಯವಾದ ವನ ಸಂಪತ್ತು, ವಿಹಾರ ಸ್ಥಾನಗಳು - ಹೀಗೆ ಇಲ್ಲಿರುವ ಅನೇಕ ವಿಚಾರಗಳನ್ನು ಮುಂದೆ ಹೇಳುವ ಆಶಯವಿದೆ.

ಡಾ.ಜಯಂತಿ ಮನೋಹರ್

ಸ್ಪಿಟೀ ಕಣಿವೆ. ಪ್ರವಾಸ ಕಥನ - ಭಾಗ 2

ನಮ್ಮ ಮುಂದಿನ ಪಯಣ ಸಾಂಗ್ಲಾ ದಿಂದ' ಕಲ್ಪ'ದ ಕಡೆಗೆ.
4-5 ಘಂಟೆ ಗಳ ಪರ್ವತ ಕಣಿವೆಯ ಅಂಕು ಡೊಂಕಾದ ಕಡಿದಾದ ರಸ್ತೆಯ ಪ್ರಯಾಣದ ನಂತರ ಊಟ ಮುಗಿಸಿ Suicide Point ನತ್ತ ನಮ್ಮ ಪಯಣ.ಎದೆ ಝಲ್ ಎನ್ನುವ ಸ್ಥಳ. ಸಾವಿರಾರು ಅಡಿಗಳೆತ್ತರದ ಪರ್ವತ ಬಲಕ್ಕಾದರೆ,ಸಾವಿರಾರು ಅಡಿಗಳ ಪ್ರಪಾತ ಎಡಕ್ಕೆ.ಯಾರಿಟ್ಟರೋ ಈ ಹೆಸರನ್ನು. ಮಧ್ಯೆ ಹತ್ತಾರು ಅಡಿಗಳ ರಸ್ತೆ?ಒಂದೇ ವಾಹನ ಓಡಾಡುತ್ತಿದ್ದರೂ ಚಾಲಕನ ಧೈರ್ಯ ಚಾಕಚಕ್ಯತೆಯನ್ನು ನಂಬಿ ಮುಂದುವರೆಯುತ್ತಿರುತ್ತೇವೆ.ಮುಂದಿನಿಂದ ಯಾವುದಾದರೂ ವಾಹನ ಬಂದರೆ ಒಬ್ಬರಿಗೊಬ್ಬರು ದಾರಿ ಬಿಡುವ ರೀತಿ ಯಂತೂ ಭಯಾನಕ ಮತ್ತು ಆಶ್ಚರ್ಯ. ಎಡದಲ್ಲಿ ಕಣಿವೆಯಾದರಂತೂ ಅರ್ಧ ಚಕ್ರ ಒಳಗೆ ಅರ್ಧ ಚಕ್ರ ಹೊರಗಿರಿಸಿ ನಿಲ್ಲಿಸುವ ರೀತಿ ಯಂತೂ ವಾಹನದಲ್ಲಿ ಕುಳಿತು ನೋಡಿದರೆ ಒಂದರೆ ಕ್ಷಣ ಉಸಿರು ನಿಂತೇ ಹೋಯ್ತೇನೋ ಅನ್ನಿಸಿತ್ತದೆ. Suicide point ನ ಹತ್ತಿರ ನೋಡಿದರೆ ಪಾತಾಳ ಕಾಣದ ಜಾಗ.ವಾಹನ ದಿಂದ ಇಳಿದು ಬಗ್ಗಿ ನೋಡಿ ಫೋಟೋಗಳನ್ನು ತೆಗೆದು ಕನಸಿನಲ್ಲೂ ಇಂತಹದೊಂದು ಭಯಾನಕವೂ, ಕಾಣದ ಸುಂದರವೂ ಆದ ಜಾಗಕ್ಕೆ ಬರುತ್ತೇವೆಂದು ನೆನಸಿರಲಿಲ್ಲ.

ಮುಂದಿನ ನಮ್ಮ ಭೇಟಿ ರೋಗಿಹಳ್ಳೀಗೆ.ಅಲ್ಲಿಯ ವಿಶಿಷ್ಟವಾದ ಕಿನೋರ್ ಮನೆಗಳನ್ನು ನೋಡಲು.ಬಹು ದೂರ ಸಾಗಿದ ನಂತರ ಸಿಕ್ಕಿತು. ಸುಂದರವಾದ ಕಿನೋರ್ ಮನೆಗಳು.ಅದೃಷ್ಟವೋ ದುರಾದೃಷ್ಟವೋ ವಾಹನ ಎಷ್ಟೇ ಚಲಿಸಿದರೂ ಸರಿಯಾದ ದಾರಿ ಸಿಗದೇ ಗಾಡಿಯನ್ನು ವಾಪಸ್ ತಿರುಗಿಸಲೂ ಆಗದೆ, ಚಾಲಕನು ಸುಮಾರು 20 ನಿಮಿಷಗಳ ಕಾಲ ರಿವರ್ಸ್ ಡ್ರೈವ್

ಮಾಡುತ್ತಿದ್ದಾಗ ಎಲ್ಲರ ಜೀವವೂ ಕೈಯಲ್ಲಿ.ಸೂಜಿ ಬಿದ್ದರೂ ಕೇಳುವಷ್ಟು ನಿಶ್ಯಬ್ಧ ವಾಹನದಲ್ಲಿ.20 ನಿಮಿಷಗಳ ಆ ದಾರಿಯಲ್ಲಿ ಒಂದು ಸಣ್ಣ ಜಾಗದಲ್ಲಿ ನಮ್ಮನ್ನೆಲ್ಲಾ ಇಳಿಸಿ ಗಾಡಿಯನ್ನು ತಿರುಗಿಸಿದ ನಂತರವೇ ಎಲ್ಲರಿಗೂ ಜೀವ ಬಂದಂತಾಯ್ತು.ನಂತರ ಖುಷಿಯಿಂದ ಕಲ್ಪ ಗ್ರಾಮವೆಲ್ಲಾ ಸುತ್ತಾಡಿ ಒಂದು ಬ್ರಹ್ಮ, ವಿಷ್ಣು, ನಾರಾಯಣ ದೇವಸ್ಥಾನ ಮತ್ತು ಒಂದು ಬುದ್ಧ ದೇವಾಲಯ ನೋಡಿ ಅಲ್ಲಿಯ ವಿಶೇಷ, ಪಾನೀ ಪೂರಿ, ಸಮೋಸ ತಿಂದು ಟೀ ಕುಡಿದು ಹೋಟೆಲ್ಗೆ ವಾಪಾಸಾದೆವು.

ಮಾರನೆಯ ದಿನ ನಮ್ಮ ಪ್ರಯಾಣ ಕಾಜಾದ ಕಡೆಗೆ

ಅದೇ ಅಂಕು ಡೊಂಕಾದ ದಾರಿ ,ಹಸಿರು, ನೀರು ,ಕಣ್ಸೆಳೆಯುವ ಸುಂದರ ಪ್ರಕೃತಿಯಲ್ಲಿ ತನುತಣಿಯದ ಪಯಣ ನಮ್ಮನ್ನು ನಾಕಾ ಲೇಕ್ ಮುಟ್ಟಿಸಿತು.ಅಷ್ಟೆತ್ತರದಲ್ಲಿಯ ಅಗಣಿತ ಸೌಂದರ್ಯ, ಛಳಿ ಛಳಿ ಯಲ್ಲೊಂದು ಬಿಸಿ ಬಿಸಿ ಚಹಾ. ಅಲ್ಲೊಂದು ಹೆಲಿ ಪ್ಯಾಡ್ ನೋಡಿ ಕಾಜಾ ತಲುಪಲು ಮುಂದುವರೆಯಿತು ನಮ್ಮ ಪಯಣ.ಅಲ್ಲಿಂದ ಮುಂದಿನ ದಾರಿ ಬರಿದಾದ ಬೆಟ್ಟ ಮಣ್ಣು ಕಲ್ಲು ಅಷ್ಟೇ.ಅಯ್ಯೋ ನಮ್ಮ ವಾಹನ ನಿಂತಿತು.ನಮ್ಮ ಕಾರಿನ ಒಂದು ಚಕ್ರ ಎರಡೇ ನಟ್ ಗಳಲ್ಲಿ ಓಡುತ್ತಿದೆ.ಆದರೂ ಚಾಲಕನು ಧೈರ್ಯದಿಂದ ಒಂದೆರಡು ಮೈಲಿ ಬಂದ. ನಮ್ಮ ಜೀವ ಬಾಯಿಗೇ ಬಂದಂತಾಯ್ತು. ಈ ವಯಸ್ಸಿನಲ್ಲಿ ಈ ಕಣಿವೆಯಲ್ಲಿ ಈ ಪ್ರಯಾಣ ಬೇಕಿತ್ತಾ ಎನ್ನುವಂತಾಯ್ತು.ದೇವರೇ ಪ್ರತ್ಯಕ್ಷವಾದಂತೆ ರಕ್ಷಣಾ ದಳದವರೊಬ್ಬರು ಸಮೀಪದ ಹಳ್ಳಿಯೊಂದರ ತನಕ ತಲುಪಿಸಿದರು. ನಮ್ಮ ಚಾಲಕನು ಗಾಡಿಯನ್ನು ನಿಧಾನವಾಗಿ ತಂದು ರಿಪೇರಿ ಮಾಡಿಸಿದ ಆದರೆ ಸರಿಯಾದ ಅಳತೆಯ ನಟ್ ಸಿಗದೆ ಇನ್ನೊಂದು ಚಕ್ರದ ನಟ್ನಲ್ಲೇ ನಮ್ಮ ಉಳಿದ ಪ್ರವಾಸ ಮುಗಿಸಿದೆವು. ಹೊರಡುವ ಹೊತ್ತಿಗೆ 3-4 ಘಂಟೆಗಳೇ ಕಳೆದಿತ್ತು.ರಾತ್ರಿ ಹತ್ತಿರದ 'ತಬು' ನಲ್ಲಿ ತಂಗೋಣವೆಂದರೆ ಒಪ್ಪದ ಚಾಲಕ, ಅರ್ಧ ಮನಸ್ಸಿನಿಂದಲೇ ಒಪ್ಪಿದ ನಾವು ಮಬ್ಬು ಗತ್ತಲಲ್ಲೇ ಹೊರಟೆವು ಕಾಜಾದ ಕಡೆಗೆ.ಮೊದ ಮೊದಲು ಪ್ರಕೃತಿ ಸೌಂದರ್ಯವನ್ನು ಆಸ್ವಾದಿಸಿದೆವು.ನಂತರದ ಸುಮಾರು 2 ಘಂಟೆಯ ಪಯಣ ಅತ್ಯಂತ ಭಯಾನಕ. ಬೆಟ್ಟ ಕಣಿವೆಗಳ ಮಧ್ಯೆ ಅಂಕುಡೊಂಕಾದ ದಾರಿ, ಎದುರಿನಿಂದಾಗಲೀ ಹಿಂದಿನಿಂದಾಗಲೀ ಒಂದೂ ವಾಹನದ ಸುಳಿವು ಇಲ್ಲ. ಮನುಷ್ಯರ ಮಾತಂತೂ ಇಲ್ಲವೇ ಇಲ್ಲ .ಆಗೊಮ್ಮೆ ಈಗೊಮ್ಮೆ ಭೋರೆಂದು ಹರಿಯುತ್ತಿರುವ ನದಿಯ ಶಬ್ದ. ದಾರಿಯಲ್ಲಿ ಒಂದೆಡೆಯಂತೂ ನೀರಿನ ಮೇಲೆ ನಮ್ಮ ಗಾಡಿ ಚಲಿಸುತ್ತಿದ್ದಾಗ ಕಗ್ಗತ್ತಲಲ್ಲಿ ದಾರಿಯೇ ಕಾಣುತ್ತಿರಲಿಲ್ಲ .ನಾವು ಕಾಜಾ ತಲುಪುವ ತನಕ ಎಲ್ಲರೂ ಮೌನದ ಮೊರೆ ಹೊಕ್ಕೆವು ಕಾರಣ ,ರಿಪೇರಿಯಾಗಿದ್ದ ಗಾಡಿ, ಕಗ್ಗತ್ತಲು,ಕೆಟ್ಟದಾದ ರಸ್ತೆ, ನಿರ್ಜನ ಪ್ರದೇಶ, ಇಕ್ಕೆಲಗಳಲ್ಲಿ ಪಾತಾಳ, ಪರ್ವತ ,ಮಧ್ಯೆ ಮಧ್ಯೆ ಭೋರೆಂದು ಹರಿಯುವ ನದಿ ನೀರಿನ ಶಬ್ದ. ಸಾಕಲ್ಲವೇ ನಮ್ಮ ಜಂಘಾಬಲ ಉಡುಗಲು? ಕಾಜಾ 5 -6 ಕಿಮೀ ದೂರ ಇರುವಾಗ ಅಲ್ಲೊಂದು ಇಲ್ಲೊಂದು ದೀಪ ಕಂಡು ಜೀವ ಬಂದಂತಾಯ್ತು .ಕೊರೆಯುವ ಚಳಿಯಲ್ಲಿ ಬಿಸಿ ಬಿಸಿ ಊಟ,ನಮ್ಮ ಪ್ರಯಾಣದ ಆಯಾಸ ಮರೆಯಾಯಿತು.

ಮಾರನೇ ದಿನ ನಮ್ಮ ಪಯಣ ಭಾರತದ ಅತಿ ಎತ್ತರದಲ್ಲಿರುವ ಹಳ್ಳಿ 'ಕಿಬ್ಬರ್'

ನತ್ತ. ಮತ್ತದೇ ಬೆಟ್ಟ . ಒಂದು ಕಡೆ ಮಂಜು ಕವಿದ ಬೆಟ್ಟ ಇನ್ನೊಂದೆಡೆ ಕಲ್ಲು ಮಣ್ಣು ಬೆಟ್ಟ ಅದನ್ನು ಮಂಜಿನ ಮರುಭೂಮಿ ಕೋಲ್ಡ ಡಿಸರ್ಟ ಎನ್ನುತ್ತಾರೆ . ದಾರಿಯಲ್ಲಿ ಅತಿ ಎತ್ತರದಲ್ಲಿರುವ 'key monastery' ನೋಡಲು ಇಳಿದೆವು.ಆ ಬೌದ್ಧಾಲಯವನ್ನು ನೋಡಿ ಮಾನವನ ಕ್ರಿಯಾಶಕ್ತಿ ಸಾಮರ್ಥ್ಯದ ಬಗ್ಗೆ ಆಶ್ಚರ್ಯ.ಸುಂದರವಾದ ಬುದ್ಧನ ಪ್ರತಿಮೆಗಳು,ಬುದ್ಧ ದೇವಾಲಯದ ವಿನ್ಯಾಸವಂತೂ ಅದ್ಭುತ.

ಆ ಗುರುಕುಲದಲ್ಲಿ ವಾಸವಾಗಿದ್ದ ವಿದ್ಯಾರ್ಥಿಗಳನ್ನು ನೋಡಿದರೆ ಮಾತ್ರ ಮನಸ್ಸಿಗೆ ಸ್ವಲ್ಪ ಬೇಸರವಾಯಿತು.5-6 ವರ್ಷದ ಮೇಲ್ಪಟ್ಟ ಮಕ್ಕಳಿಗೆ ಅಲ್ಲಿಗೆ ಬರುವ ಪ್ರವಾಸಿಗರ ದರ್ಶನ ಮಾತ್ರ .ಅದೂ 4-5 ತಿಂಗಳು. ಹೊರಗಿನ ಪ್ರಪಂಚದ ನಾಗರೀಕತೆಯಿಂದ ಅಥವಾ ವಿದ್ಯಾಭ್ಯಾಸ ದಿಂದ ಹೊರಗುಳಿದಿರುವುದು ಶೋಚನೀಯ. ಯಾವದೇವರು ಹೇಳಿದ್ದಾರೆ, ಧರ್ಮದ ಹೆಸರಿನಲ್ಲಿ ಆ ಮಕ್ಕಳಿಗೆ ಯಾಕೆ ಅನ್ಯಾಯ, ಶೋಷಣೆ ಎನ್ನಿಸುತ್ತದೆ. ಅಲ್ಲೇ ಕೆಲವರ ಕೈಯಲ್ಲಿ ದುಬಾರಿ ಮೊಬೈಲ್ ನೋಡಿ ಮತ್ತು ಫುಟ್ಬಾಲ್ ಆಡುವ ವೈಖರಿ ನೋಡಿ ಆಶ್ಚರ್ಯ ಆಯಿತು. ಆ ಕೊರೆಯುವ ಛಳಿಯಲ್ಲಿ ಕೊಟ್ಟ ಟೀ ಅಂತೂ ಅಮೃತಾ.

ಅಲ್ಲಿಂದ ಹೊರಟು ಇನ್ನೂ ಎತ್ತರದ ಅಂದರೆ14500 ಅಡಿ ಎತ್ತರದಲ್ಲಿರುವ ಕಿಬ್ಬರ್ ಹಳ್ಳಿಗೆ. ಮೇಲೆ ಮೇಲೆ ಹೋದಂತೆ ನಡುಗುವ ಛಳಿ.ಸುಮಾರು. 250 ಜನಸಂಖ್ಯೆ ಇರಬಹುದಾದ ಹಳ್ಳಿಯಲ್ಲಿ ಕಟ್ಟಿರುವ ಮನೆಗಳ ಮೇಲೆ ಅಳವಡಿಸಿರುವ ಸೌರಶಕ್ತಿಯ ಉಪಕರಣಗಳು,ಟಿವಿ ಡಿಶ್ಗಳು,ಪ್ರತಿಯೊಂದು ಮನೆಗೂ ವಿದ್ಯುತ್ ಶಕ್ತಿಯ ಪೂರೈಕೆ ನೋಡಿ ದಿಗ್ಭ್ರಮೆಯಾಯಿತು. ಅಲ್ಲಿ ಕನ್ನಡದ ಕೆಲ ಯುವಕ ಯುವತಿಯರು ಬೈಕ್ ನಲ್ಲಿ ಬಂದಿದ್ದರು, ಅವರ ಗಾಡಿ ಗಳಲ್ಲಿ ಸುತ್ತಾಡಿ ಖುಷಿ ಪಟ್ಟೆವು.ಎಂಥಾ ಅದ್ಭುತವಾದ ಸ್ಥಳ! ಆ ಪರ್ವತಗಳ ಮುಂದೆ ನಾವೆಷ್ಟರವರು.ಅಲ್ಲಿಯ ಜನಗಳ ಮುಂದೆ ನಮ್ಮ ಕಷ್ಟ, ತುಮುಲಗಳಿಗೆ ಅರ್ಥವೇ ಇಲ್ಲಾ ಎನ್ನಿಸುತ್ತಿತ್ತು.ಮಾನವನ ಧೈರ್ಯ, ಪ್ರಕೃತಿ ರಹಸ್ಯವನ್ನು ಭೇದಿಸುತ್ತಲೇ ಇರುವ ಛಲಕ್ಕೆ ನನ್ನ ದೊಂದು ನಮನ.

ಅತಿ ಉತ್ಸಾಹದಿಂದ ನಮ್ಮ ಚಾಲಕ ಹಿಕ್ಕಿಂ ಅಂಚೇ ಕಛೇರಿಯ ಕಡೆಗೆ ಹೊರಟ.ಅದು ಪ್ರಪಂಚದ ಅತ್ಯಂತ ಎತ್ತರದಲ್ಲಿರುವ ಏಕಮೇವ ಅಂಚೆ ಕಚೇರಿ. ಅಲ್ಲಿಂದ ನಮ್ಮ ನಮ್ಮ ಮನೆಗಳಿಗೆ ಒಂದೊಂದು ಲಕೋಟೆ ಕಳುಹಿಸಲು ತಯಾರಾಗಿ ಹೊರಟಿದ್ದೆವು.ಎತ್ತರಕ್ಕೆ ಇನ್ನೂ ಎತ್ತರಕ್ಕೆ ಇನ್ನೂ ಎತ್ತರಕ್ಕೆ ಹೋಗುತ್ತಲೇ ಇದ್ದೆವು. ಆ ಎತ್ತರದಲ್ಲಿ ಪ್ರಕೃತಿ ಸೌಂದರ್ಯವನ್ನು ಆಸ್ವಾಧಿಸುತ್ತಾ ಹೋಗೇ ಹೋದೆವು .ಹೋಗುತ್ತಲೇ ಇದ್ದೆವು. ಮುಂದಾಗಲೀ ಹಿಂದಾಗಲೀ ಒಂದೂ ವಾಹನವಿಲ್ಲಾ.ಅಂಚೆ ಕಚೇರಿ ಸಿಗಲಿಲ್ಲಾ.ಸಾಕಷ್ಟು ಮೇಲೆ ಹೋದ ಮೇಲೆ ತಿಳಿಯಿತು ನಾವು ಬೇರೇ ದಾರಿಯಲ್ಲಿ ಬಂದಿದ್ದೆವೆಂದು.ಒಂದು ಕ್ಷಣ ಗಾಬರಿ

ಯಾಯ್ತು.ಆದರೂ ಆ ಪ್ರಕೃತಿಯನ್ನು ಆಸ್ವಾಧಿಸುತ್ತಾ ಇನ್ನೂ ಮುಂದೆ ಹೋದರೆ ದೂರದಲ್ಲಿ ಗಿರಿ ಜನರ ಗುಂಪೊಂದು ಸಿಕ್ಕಿತು. ಬಾರದ ಭಾಷೆಯಲ್ಲಿ ಮಾತಾಡಿ, ನಕ್ಕು ,ಫೋಟೋ ತೆಗೆದುಕೊಂಡೆವು.ಅವರ ತ್ವಚೆ,ಅವರ ಮೈಬಣ್ಣ, ಆ ಇಳಿ ವಯಸ್ಸಿನಲ್ಲಿಯೂ ನಿಸರ್ಗದತ್ತವಾದ ಕಪ್ಪು ಕೂದಲು ನಮಗಿಲ್ಲವೇ ಈ ಅದೃಷ್ಟ ಎಂಬೊಂದು ಈರ್ಷೆ ಇಣುಕಿ ಹೋಯ್ತು. ಸಾಕಷ್ಟು ಮೇಲೆ ಹೋದದ್ದರಿಂದ ಭಯದಿಂದಲೇ ಬಂದ ದಾರಿಯಲ್ಲಿ ವಾಪಸ್ಸ್ ಬರುತ್ತಾ ಇರುವಾಗ ಕಿಬ್ಬರ್ ಹಳ್ಳಿ ಕಂಡ ನಂತರ ನಿರಾಳದ ನಿಟ್ಟುಸಿರು ಬಿಟ್ಟೆವು. ಸಧ್ಯ ಕೊರೆಯುವ ಛಳಿಯಲ್ಲಿ ಹೋಟೆಲ್ ತಲುಪಿ ಬಿಸಿ ಬಿಸಿ ಊಟ ಮಾಡಿ ಹರಟೆ ಹೊಡೆಯುತ್ತಾ ಆಟ ಆಡುತ್ತಾ ಆಹ್ಲಾದಕರ ವಾತಾವರಣದಲ್ಲಿ ದಿನ ಕಳೆದೆವು.

ಮಾರನೇ ದಿನ ನಮ್ಮ ಪಯಣ ಅದೇ ದಾರಿಯಲ್ಲಿ ಪಿನ್ ಕಣಿವೆ, ಕಾಮಿಕ್ ಲಾಂಜ್
ಮತ್ತೆ ಅದೇ ಹಿಕ್ಕಿಂ ಅಂಚೆ ಕಚೇರಿ ಕಡೆಗೆ.ಹವಾಮಾನದ ವ್ಯತ್ಯಾಸದ ಮುನ್ಸೂಚನೆ ಇದ್ದದ್ದರಿಂದ ಸಾಕಷ್ಟು ಬೆಚ್ಚನೆಯ ಉಡುಪಿನೊಂದಿಗೆ ಹೊರಟರೆ ನಡುಗುವ ಚಳಿ.ಆನಂದದ ಅನುಭವ.ಕಾಮಿಕ್ ಲಾಂಜ್ ನತ್ತ ಹೂರಟರೆ ಎಷ್ಟು ಸಾಗಿದರೂ ಕಾಣದ ಸ್ಥಳ,ತಪ್ಪಿದ್ದೆವು ದಾರಿ. ಬೆರಳೆಣಿಕೆಯಷ್ಟು ಜನ ಮಾತ್ರ ಅಲ್ಲಿಗೆ ಹೋಗಲು ಧೈರ್ಯ ತೋರುತ್ತಾರೆನುಸುತ್ತದೆ.ಆ ಎತ್ತರದ ನಿರ್ಜನ ಪ್ರದೇಶದಲ್ಲಿ ಎಷ್ಟು ದೂರ ಹೋದರೂ ಏನೂ ಕಾಣದೆ ಸಾಕಷ್ಟು ದೂರ ಹೋದ ಮೇಲೆ ನಿರಾಶೆಯಿಂದ ತಿರುಗಿ ಬರುತ್ತಿರುವಾಗ ಮತ್ತೊಂದು ವಾಹನ ಸಿಕ್ಕಿ ಸರಿಯಾದ ದಾರಿಯಲ್ಲಿ ಕಾಮಿಕ್ ಲಾಂಜ್ ತಲುಪಿದೆವು.ಬಹುಶಃ ತೇನ್ಸಿಂಗ್ ಕೂಡಾ ಹಿಮಾಲಯದ ತುತ್ತತುದಿಗೇರಿದಾಗಲೂ ಇಷ್ಟು ಖುಷಿ ಪಟ್ಟಿದ್ದನೋ ಇಲ್ಲವೋ ನಾವಂತೂ ಇನ್ನೂ ಹೆಚ್ಚಿನ ಸಂತೋಷದಿಂದ ಸಂಭ್ರಮಿಸಿದೆವು.ಆ ಎತ್ತರದಲ್ಲಿ ಕೊರೆಯುವ ಛಳಿಯಲ್ಲಿ ಮಂಜಿನ ಮಳೆ ಪ್ರಾರಂಭವಾಗುತ್ತಿತ್ತು.ನಮ್ಮ ಕಾರಂತೂ ಇಂಚಿಂಚು ಮುಂದೆ ಹೋಗುತ್ತಿತ್ತು. ಹಿಮಪಾತ ಜೋರಾಗಿದೆ. ಸುಸ್ಥಿತಿಯಲ್ಲಿಲ್ಲದ ವಾಹನ, ಇಳಿಜಾರು ಸುಮಾರು ಒಂದು ಘಂಟೆಯ ನಂತರ ಹಿಮಪಾತ ಕಡಿಮೆ ಆಯಿತು. ಧೈರ್ಯದಿಂದ ಹೊರಗೆ ನೋಡಿದರೆ ಹಿಂದಿನ ದಿನ ನೋಡಿದ ಕಲ್ಲು ಮುಳ್ಳು ಬೆಟ್ಟ ಇಂದು ಸಂಪೂರ್ಣ ಹಿಮಾಚ್ಛಾದಿತ.ಈ ಎರಡೂ ತೆರನಾದ ಅನುಭವ ಕೆಲವು ಪ್ರವಾಸಿಗರಿಗೆ ಸಿಗುವಂಥಹದು ಅಂಥಹ ಅದೃಷ್ಟ ವಂತರಲ್ಲಿ ನಾವೂ ಒಬ್ಬರು. ಹಿಮಪಾತ ನಿಂತ ನಂತರ ಒಂದೆಡೆ ವಾಹನ ನಿಲ್ಲಿಸಿ ಫೋಟೋ ತೆಗೆಯಲು ನಿಂತರೆ ಗುಂಪು ಗುಂಪಾಗಿ ಸಾರಂಗಗಳು ಮೇಲೇಳುತ್ತಲಿತ್ತು .ಹಿಮದೊಡನೆ ಆಟ ಎರಚಾಟ ಫೋಟೋ ಎಲ್ಲವೂ ಅವಿಸ್ಮರಣೀಯ.

ನಮ್ಮ ಹಿಕ್ಕಿಂ ಅಂಚೆ ಕಛೇರಿಯ ಭೇಟಿಯ ಕನಸು ಅಲ್ಲಿಂದ ನಮ್ಮ ಮನೆಗೆ ಕಳುಹಿಸಬೇಕೆಂದಿದ್ದ ಪೋಸ್ಟ ಕಾರ್ಡನ ಆಸೆ ಮಾತ್ರ ಪೂರೈಸಲಿಲ್ಲ.ಕಾಜಾದ ಮಾರುಕಟ್ಟೆ
ನೋಡಿ ತುಂಬಾ ಆಶ್ಚರ್ಯ ವಾಯಿತು. ಮಾಲ್ಗಳು,ಮನೆಗಳು, ಒಳಚರಂಡಿ ವ್ಯವಸ್ಥೆ ,
ಐಐಟಿ, ಜೇಯಿಯಿ,ನೀಟ್ ತರಬೇತಿ ಕೇಂದ್ರ ಎಲ್ಲವೂ ಇದೆ. ಇವರು ನಗರದ ನಾಗರೀಕತೆಯಿಂದ ಖಂಡಿತಾ ದೂರವಿಲ್ಲಾ ಎನಿಸುತ್ತದೆ.

ಮುಂದಿನ ಪಯಣ ತಬೂ ಮೂಲಕ ರಾಮಪುರಕ್ಕೆ.ತಬೂ ನಲ್ಲಿರುವ ಬೌದ್ಧ ದೇವಾಲಯಗಳು ಅದ್ಭುತವಾಗಿದೆ. ಅವರು ಪಟ್ಟಿರುವ ಶ್ರಮ, ಅದನ್ನು ತಲುಪಲು ಇರುವ ದುರ್ಗಮವಾದ ದಾರಿ ನೋಡಿ ಅವಾಕ್ಕಾದೆವು.ಅಲ್ಲಿಂದ ಮಮ್ಮಿ ಒಂದನ್ನು ನೋಡಿಕೊಂಡು ರಾಮಪುರದಲ್ಲಿ ನಮ್ಮ ವಾಸ್ತವ್ಯ. ಮಾರನೆಯ ದಿನ ಅಲ್ಲಿಯ ಅರಮನೆ ನೋಡಿಕೊಂಡು ಕುಲುವಿನತ್ತ ನಮ್ಮ ಪಯಣ. ಮಧ್ಯೆ ಛಬಿ ಎನ್ನುವ ಸ್ಥಳದಲ್ಲಿ ಸುಂದರವಾದ ಝರಿ. ಅತಿ ಸುಂದರವಾದ ತಂಗಲು ಅತೀ ಪ್ರಶಸ್ತವಾದ ಸ್ಥಳ.ಎಲ್ಲೆಲ್ಲೂ ಸೇಬು, ಚೆರ್ರಿ, ಪ್ಲಮ್ಮ ಹಣ್ಣಿನ ಮರಗಳು. ಸುರಂಗ ಮಾರ್ಗ ಹೊಕ್ಕು ಕುಲು ತಲುಪಿದೆವು. ಆಗಲೇ ಹಿಮಾಚಲದ ಚಳಿ ಮಾಯವಾಗಿತ್ತು.

ಮಾರನೆಯ ದಿನ ಮಣಿಕರ್ಣಿಕಕ್ಕೆ ನಮ್ಮ ಪಯಣ. ಕೇವಲ 27 ಕಿಮೀ.ಆದರೆ3-4 ಘಂಟೆಗಳ ಪ್ರಯಾಣ. ಅಲ್ಲಿನ ಸುಪ್ರಸಿದ್ಧ ಗುರುದ್ವಾರ ನೋಡಿಕೊಂಡು ಬಿಸಿನೀರಿನ ಕುಂಡ ನೋಡಲು ಹೊರಟೆವು. ಸಹಸ್ರಾರು ವರ್ಷಗಳಿಂದ ಗ್ಯಾಲನ್ ಗ್ಯಾಲನ್ಗಟ್ಟಲೆ ಕುದಿ ಕುದಿಯುವ ನೀರನ್ನು ಹಗಲು ರಾತ್ರಿ ಉಗುಳುತ್ತಿರುವ ಹಿಂದಿರುವ ಶಕ್ತಿ ಯಾವುದೆಂದು ಮೂಕ ವಿಸ್ಮಿತರಾದೆವು.ಅಲ್ಲಿಯ ದೇವಸ್ಥಾನ ನೋಡಿ ಮಾರನೆಯ ದಿನ ಪರಾಶರ ಸರೋವರದತ್ತ ಹೊರಟೆವು.

ಮತ್ತದೇ ರಾಗ. ನಮ್ಮ ಚಾಲಕನ ಬೇಜವಾಬ್ದಾರಿಯಿಂದ ದಾರಿ ತಪ್ಪಿ 15 ಕಿಮೀ ನಷ್ಟು ತಪ್ಪು ದಾರಿಯಲ್ಲಿ ಹೋಗಿ ವಾಪಸ್ಸ್ ಸರಿ ದಾರಿಯಲ್ಲಿ ಪರಾಶರ ಸರೋವರದತ್ತ ನಮ್ಮ ಪಯಣ. ಅತ್ಯಂತ ಕಡಿದಾದ ಪರ್ವತ ಕಣಿವೆ ದಾರಿಯಲ್ಲಿ ಡೀಸೆಲ್ ಖಾಲಿಯಾಗಬೇಕೆ?. ಹೆಚ್ಚು ಜನಸಂಚಾರವಿಲ್ಲದ ಆ ದಾರಿಯಲ್ಲಿ ಅನಿರೀಕ್ಷಿತವಾಗಿ ಸರ್ಕಾರೀ ವಾಹನವೊಂದು ಬಂತು. ಆ ಚಾಲಕ ನಮ್ಮ ಚಾಲಕನನ್ನು ಕರೆದುಕೊಂಡು ಹೋದರೆ, ಹಿಂದಿನಿಂದ ಬಂದ ಗಾಡಿಯ ಚಾಲಕ ನಮ್ಮನ್ನು ಸರೋವರದತ್ತ ಕರೆದುಕೊಂಡು ಹೋಗಿ ಬಿಟ್ಟು ಯಾವ ಪ್ರತಿ ಫಲಾಪೇಕ್ಷೆಯೂ ಇಲ್ಲದೆ ಹೊರಟೇ ಬಿಟ್ಟ.ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಜನರು ಈ ಜಾಗಕ್ಕೆ ಬರುತ್ತಿಲ್ಲ.ಅತಿ ಸುಂದರವಾದ ಸರೋವರ.ನಮ್ಮ ಚಾಲಕ ಡೀಸೆಲ್ ತಂದು ಕ್ಷೇಮವಾಗಿ ನಮ್ಮನ್ನು ಚಂಡೀಗಡ ತಲುಪಿಸಿದ

ಅಲ್ಲಿಂದ ಬೆಂಗಳೂರಿನ ಕಡೆಗೆ ಹೊರಟ ನಮಗೆ ಪ್ರಕೃತಿ ಸೌಂದರ್ಯದ ಹಿಮಾಚಲ ಪ್ರದೇಶ, ಅತ್ಯಂತ ಆತ್ಮೀಯ ಸ್ನೇಹಿತರ ಒಡನಾಟ,ಮತ್ತು ಶ್ರೀ ಗುರುಪ್ರಸಾದ್ ಮತ್ತು ಶ್ರೀ ವಿಜಯಕುಮಾರ್ ಅವರ ಸಲಹೆ ಗುಂಗುಡುತ್ತಿತ್ತು.ಮತ್ತೊಂದು ಪ್ರವಾಸದ ಕನಸು ಕಾಣುತ್ತಾ ಮನೆ ತಲುಪಿದೆವು.

ಆ ಗುರುಕುಲದಲ್ಲಿ ವಾಸವಾಗಿದ್ದ ವಿದ್ಯಾರ್ಥಿಗಳನ್ನು ನೋಡಿದರೆ ಮಾತ್ರ ಮನಸ್ಸಿಗೆ ಸ್ವಲ್ಪ ಬೇಸರವಾಯಿತು.5-6 ವರ್ಷದ ಮೇಲ್ಪಟ್ಟ ಮಕ್ಕಳಿಗೆ ಅಲ್ಲಿಗೆ ಬರುವ ಪ್ರವಾಸಿಗರ ದರ್ಶನ ಮಾತ್ರ .ಅದೂ 4-5 ತಿಂಗಳು. ಹೊರಗಿನ ಪ್ರಪಂಚದ ನಾಗರೀಕತೆಯಿಂದ ಅಥವಾ ವಿದ್ಯಾಭ್ಯಾಸ ದಿಂದ ಹೂರಗುಳಿದಿರುವುದು ಶೋಚನೀಯ. ಯಾವದೇವರು ಹೇಳಿದ್ದಾರೆ, ಧರ್ಮದ ಹೆಸರಿನಲ್ಲಿ ಆ ಮಕ್ಕಳಿಗೆ ಯಾಕೆ ಅನ್ಯಾಯ, ಶೋಷಣೆ ಎನ್ನಿಸುತ್ತದೆ. ಅಲ್ಲೇ ಕೆಲವರ ಕೈಯಲ್ಲಿ ದುಬಾರಿ ಮೊಬೈಲ್ ನೋಡಿ ಮತ್ತು ಪುಟ್ಬಾಲ್ ಆಡುವ ವೈಖರಿ ನೋಡಿ ಆಶ್ಚರ್ಯ ಆಯಿತು. ಆ ಕೊರೆಯುವ ಛಳಿಯಲ್ಲಿ ಕೊಟ್ಟ ಟೀ ಅಂತೂ ಅಮೃತಾ.

ಅಲ್ಲಿಂದ ಹೊರಟು ಇನ್ನೂ ಎತ್ತರದ ಅಂದರೆ14500 ಅಡಿ ಎತ್ತರದಲ್ಲಿರುವ ಕಿಬ್ಬರ್ ಹಳ್ಳಿಗೆ. ಮೇಲೆ ಮೇಲೆ ಹೋದಂತೆ ನಡುಗುವ ಛಳಿ.ಸುಮಾರು. 250 ಜನಸಂಖ್ಯೆ ಇರಬಹುದಾದ ಹಳ್ಳಿಯಲ್ಲಿ ಕಟ್ಟಿರುವ ಮನೆಗಳ ಮೇಲೆ ಅಳವಡಿಸಿರುವ ಸೌರಶಕ್ತಿಯ ಉಪಕರಣಗಳು,ಟಿವಿ ಡಿಶ್ಗಳು,ಪ್ರತಿಯೊಂದು ಮನೆಗೂ ವಿದ್ಯುತ್ ಶಕ್ತಿಯ ಪೂರೈಕೆ ನೋಡಿ ದಿಗ್ಬ್ರಮೆಯಾಯಿತು. ಅಲ್ಲಿ ಕನ್ನಡದ ಕೆಲ ಯುವಕ ಯುವತಿಯರು ಬೈಕ್ ನಲ್ಲಿ ಬಂದಿದ್ದರು, ಅವರ ಗಾಡಿ ಗಳಲ್ಲಿ ಸುತ್ತಾಡಿ ಖುಷಿ ಪಟ್ಟೆವು.ಎಂಥಾ ಅದ್ಭುತವಾದ ಸ್ಥಳ! ಆ ಪರ್ವತಗಳ ಮುಂದೆ ನಾವೆಷ್ಟರವರು.ಅಲ್ಲಿಯ ಜನಗಳ ಮುಂದೆ ನಮ್ಮ ಕಷ್ಟ, ತುಮುಲಗಳಿಗೆ ಅರ್ಥವೇ ಇಲ್ಲಾ ಎನ್ನಿಸುತ್ತಿತ್ತು.ಮಾನವನ ಧೈರ್ಯ, ಪ್ರಕೃತಿ ರಹಸ್ಯವನ್ನು ಭೇದಿಸುತ್ತಲೇ ಇರುವ ಛಲಕ್ಕೆ ನನ್ನ ದೊಂದು ನಮನ.

ಅತಿ ಉತ್ಸಾಹದಿಂದ ನಮ್ಮ ಚಾಲಕ ಹಿಕ್ಕಿಂ ಅಂಚೇ ಕಛೇರಿಯ ಕಡೆಗೆ ಹೊರಟ.ಅದು ಪ್ರಪಂಚದ ಅತ್ಯಂತ ಎತ್ತರದಲ್ಲಿರುವ ಏಕಮೇವ ಅಂಚೆ ಕಚೇರಿ. ಅಲ್ಲಿಂದ ನಮ್ಮ ನಮ್ಮ ಮನೆಗಳಿಗೆ ಒಂದೊಂದು ಲಕೋಟೆ ಕಳುಹಿಸಲು ತಯಾರಾಗಿ ಹೊರಟಿದ್ದೆವು.ಎತ್ತರಕ್ಕೆ ಇನ್ನೂ ಎತ್ತರಕ್ಕೆ ಇನ್ನೂ ಎತ್ತರಕ್ಕೆ ಹೋಗುತ್ತಲೇ ಇದ್ದೆವು. ಆ ಎತ್ತರದಲ್ಲಿ ಪ್ರಕೃತಿ ಸೌಂದರ್ಯವನ್ನು ಆಸ್ವಾಧಿಸುತ್ತಾ ಹೋಗೇ ಹೋದೆವು .ಹೋಗುತ್ತಲೇ ಇದ್ದೆವು. ಮುಂದಾಗಲೀ ಹಿಂದಾಗಲೀ ಒಂದೂ ವಾಹನವಿಲ್ಲಾ.ಅಂಚೆ ಕಚೇರಿ ಸಿಗಲಿಲ್ಲಾ.ಸಾಕಷ್ಟು ಮೇಲೆ ಹೋದ ಮೇಲೆ ತಿಳಿಯಿತು ನಾವು ಬೇರೇ ದಾರಿಯಲ್ಲಿ ಬಂದಿದ್ದೆವೆಂದು.ಒಂದು ಕ್ಷಣ ಗಾಬರಿ ಯಾಯ್ತು.ಆದರೂ ಆ ಪ್ರಕೃತಿಯನ್ನು ಆಸ್ವಾಧಿಸುತ್ತಾ ಇನ್ನೂ ಮುಂದೆ ಹೋದರೆ ದೂರದಲ್ಲಿ ಗಿರಿ ಜನರ ಗುಂಪೂಂದು ಸಿಕ್ಕಿತು. ಬಾರದ ಭಾಷೆಯಲ್ಲಿ ಮಾತಾಡಿ, ನಕ್ಕು ,ಫೋಟೋ ತೆಗೆದುಕೊಂಡೆವು.ಅವರ ತ್ವಚೆ,ಅವರ ಮೈಬಣ್ಣ, ಆ ಇಳಿ ವಯಸ್ಸಿನಲ್ಲಿಯೂ ನಿಸರ್ಗದತ್ತವಾದ ಕಪ್ಪು ಕೂದಲು ನಮಗಿಲ್ಲವೇ ಈ ಅದೃಷ್ಟ ಎಂಬೊಂದು ಈರ್ಷೆ ಇಣುಕಿ ಹೋಯ್ತು. ಸಾಕಷ್ಟು ಮೇಲೆ ಹೋದದ್ದರಿಂದ ಭಯದಿಂದಲೇ ಬಂದ ದಾರಿಯಲ್ಲಿ ವಾಪಸ್ಸ್ ಬರುತ್ತಾ ಇರುವಾಗ ಕಿಬ್ಬರ್ ಹಳ್ಳಿ ಕಂಡ ನಂತರ ನಿರಾಳದ ನಿಟ್ಟುಸಿರು ಬಿಟ್ಟೆವು. ಸಧ್ಯ ಕೊರೆಯುವ ಛಳಿಯಲ್ಲಿ ಹೋಟೆಲ್ ತಲುಪಿ ಬಿಸಿ ಬಿಸಿ ಊಟ ಮಾಡಿ ಹರಟೆ ಹೊಡೆಯುತ್ತಾ ಆಟ ಆಡುತ್ತಾ ಆಹ್ಲಾದಕರ ವಾತಾವರಣದಲ್ಲಿ ದಿನ ಕಳೆದೆವು.

ಮಾರನೇ ದಿನ ನಮ್ಮ ಪಯಣ ಅದೇ ದಾರಿಯಲ್ಲಿ ಪಿನ್ ಕಣಿವೆ, ಕಾಮಿಕ್ ಲಾಂಜ್
ಮತ್ತೆ ಅದೇ ಹಿಕ್ಕಿಂ ಅಂಚೆ ಕಚೇರಿ ಕಡೆಗೆ.ಹವಾಮಾನದ ವ್ಯತ್ಯಾಸದ ಮುನ್ಸೂಚನೆ ಇದ್ದದ್ದರಿಂದ ಸಾಕಷ್ಟು ಬೆಚ್ಚನೆಯ ಉಡುಪಿನೊಂದಿಗೆ ಹೊರಟರೆ ನಡುಗುವ ಚಳಿ.ಆನಂದದ ಅನುಭವ.ಕಾಮಿಕ್ ಲಾಂಜ್ ನತ್ತ ಹೂರಟರೆ ಎಷ್ಟು ಸಾಗಿದರೂ ಕಾಣದ ಸ್ಥಳ,ತಪ್ಪಿದ್ದೆವು ದಾರಿ. ಬೆರಳೆಣಿಕೆಯಷ್ಟು ಜನ ಮಾತ್ರ ಅಲ್ಲಿಗೆ ಹೋಗಲು ಧೈರ್ಯ ತೋರುತ್ತಾರೆನುಸುತ್ತದೆ.ಆ ಎತ್ತರದ ನಿರ್ಜನ ಪ್ರದೇಶದಲ್ಲಿ ಎಷ್ಟು ದೂರ ಹೋದರೂ ಏನೂ ಕಾಣದೆ ಸಾಕಷ್ಟು ದೂರ ಹೋದ ಮೇಲೆ ನಿರಾಶೆಯಿಂದ ತಿರುಗಿ ಬರುತ್ತಿರುವಾಗ ಮತ್ತೊಂದು ವಾಹನ ಸಿಕ್ಕಿ ಸರಿಯಾದ ದಾರಿಯಲ್ಲಿ ಕಾಮಿಕ್ ಲಾಂಜ್ ತಲುಪಿದೆವು.ಬಹುಶಃ ತೇನ್ಸಿಂಗ್ ಕೂಡಾ ಹಿಮಾಲಯದ ತುತ್ತತುದಿಗೇರಿದಾಗಲೂ ಇಷ್ಟು ಖುಷಿ ಪಟ್ಟಿದ್ದನೋ ಇಲ್ಲವೋ ನಾವಂತೂ ಇನ್ನೂ ಹೆಚ್ಚಿನ ಸಂತೋಷದಿಂದ ಸಂಭ್ರಮಿಸಿದೆವು.ಆ ಎತ್ತರದಲ್ಲಿ ಕೊರೆಯುವ ಛಳಿಯಲ್ಲಿ ಮಂಜಿನ ಮಳೆ ಪ್ರಾರಂಭವಾಗುತ್ತಿತ್ತು.ನಮ್ಮ ಕಾರಂತೂ ಇಂಚಿಂಚು ಮುಂದೆ ಹೋಗುತ್ತಿತ್ತು. ಹಿಮಪಾತ ಜೋರಾಗಿದೆ. ಸುಸ್ಥಿತಿಯಲ್ಲಿಲ್ಲದ ವಾಹನ, ಇಳಿಜಾರು ಸುಮಾರು ಒಂದು ಘಂಟೆಯ ನಂತರ ಹಿಮಪಾತ ಕಡಿಮೆ ಆಯಿತು. ಧೈರ್ಯದಿಂದ ಹೊರಗೆ ನೋಡಿದರೆ ಹಿಂದಿನ ದಿನ ನೋಡಿದ ಕಲ್ಲು ಮುಳ್ಳು ಬೆಟ್ಟ ಇಂದು ಸಂಪೂರ್ಣ ಹಿಮಾಚ್ಛಾದಿತ.ಈ ಎರಡೂ ತೆರನಾದ ಅನುಭವ ಕೆಲವು ಪ್ರವಾಸಿಗರಿಗೆ ಸಿಗುವಂಥಹದು ಅಂಥಹ ಅದೃಷ್ಟ ವಂತರಲ್ಲಿ ನಾವೂ ಒಬ್ಬರು. ಹಿಮಪಾತ ನಿಂತ ನಂತರ ಒಂದೆಡೆ ವಾಹನ ನಿಲ್ಲಿಸಿ ಫೋಟೋ ತೆಗೆಯಲು ನಿಂತರೆ ಗುಂಪು ಗುಂಪಾಗಿ ಸಾರಂಗಗಳು ಮೇಲೇಳುತ್ತಲಿತ್ತು .ಹಿಮದೊಡನೆ ಆಟ ಎರಚಾಟ ಫೋಟೋ ಎಲ್ಲವೂ ಅವಿಸ್ಮರಣೀಯ.

ನಮ್ಮ ಹಿಕ್ಕಿಂ ಅಂಚೆ ಕಛೇರಿಯ ಭೇಟಿಯ ಕನಸು ಅಲ್ಲಿಂದ ನಮ್ಮ ಮನೆಗೆ ಕಳುಹಿಸಬೇಕೆಂದಿದ್ದ ಪೋಸ್ಟ ಕಾರ್ಡನ ಆಸೆ ಮಾತ್ರ ಪೂರೈಸಲಿಲ್ಲ.ಕಾಜಾದ ಮಾರುಕಟ್ಟೆ
ನೋಡಿ ತುಂಬಾ ಆಶ್ಚರ್ಯ ವಾಯಿತು. ಮಾಲ್ಗಳು,ಮನೆಗಳು, ಒಳಚರಂಡಿ ವ್ಯವಸ್ಥೆ ,
ಐಐಟಿ, ಜೇಯಿಯಿ,ನೀಟ್ ತರಬೇತಿ ಕೇಂದ್ರ ಎಲ್ಲವೂ ಇದೆ. ಇವರು ನಗರದ ನಾಗರೀಕತೆಯಿಂದ ಖಂಡಿತಾ ದೂರವಿಲ್ಲಾ ಎನಿಸುತ್ತದೆ.

ಮುಂದಿನ ಪಯಣ ತಬೂ ಮೂಲಕ ರಾಮಪುರಕ್ಕೆ.ತಬೂ ನಲ್ಲಿರುವ ಬೌದ್ಧ ದೇವಾಲಯಗಳು ಅದ್ಭುತವಾಗಿದೆ. ಅವರು ಪಟ್ಟಿರುವ ಶ್ರಮ, ಅದನ್ನು ತಲುಪಲು ಇರುವ ದುರ್ಗಮವಾದ ದಾರಿ ನೋಡಿ ಅವಾಕ್ಕಾದೆವು.ಅಲ್ಲಿಂದ ಮಮ್ಮಿ ಒಂದನ್ನು ನೋಡಿಕೊಂಡು ರಾಮಪುರದಲ್ಲಿ ನಮ್ಮ ವಾಸ್ತವ್ಯ. ಮಾರನೆಯ ದಿನ ಅಲ್ಲಿಯ ಅರಮನೆ ನೋಡಿಕೊಂಡು ಕುಲುವಿನತ್ತ ನಮ್ಮ ಪಯಣ. ಮಧ್ಯೆ ಛಬಿ ಎನ್ನುವ ಸ್ಥಳದಲ್ಲಿ ಸುಂದರವಾದ ಝರಿ. ಅತಿ ಸುಂದರವಾದ ತಂಗಲು ಅತೀ ಪ್ರಶಸ್ತವಾದ ಸ್ಥಳ.ಎಲ್ಲೆಲ್ಲೂ ಸೇಬು, ಚೆರ್ರಿ, ಪ್ಲಮ್ಮ ಹಣ್ಣಿನ ಮರಗಳು. ಸುರಂಗ ಮಾರ್ಗ ಹೊಕ್ಕು ಕುಲು ತಲುಪಿದೆವು. ಆಗಲೇ ಹಿಮಾಚಲದ ಚಳಿ ಮಾಯವಾಗಿತ್ತು.

ಮಾರನೆಯ ದಿನ ಮಣಿಕರ್ಣಿಕಕ್ಕೆ ನಮ್ಮ ಪಯಣ. ಕೇವಲ 27 ಕಿಮೀ.ಆದರೆ3-4 ಘಂಟೆಗಳ ಪ್ರಯಾಣ. ಅಲ್ಲಿನ ಸುಪ್ರಸಿದ್ಧ ಗುರುದ್ವಾರ ನೋಡಿಕೊಂಡು ಬಿಸಿನೀರಿನ ಕುಂಡ ನೋಡಲು ಹೊರಟೆವು. ಸಹಸ್ರಾರು ವರ್ಷಗಳಿಂದ ಗ್ಯಾಲನ್ ಗ್ಯಾಲನ್ಗಟ್ಟಲೆ ಕುದಿ ಕುದಿಯುವ ನೀರನ್ನು ಹಗಲು ರಾತ್ರಿ ಉಗುಳುತ್ತಿರುವ ಹಿಂದಿರುವ ಶಕ್ತಿ ಯಾವುದೆಂದು ಮೂಕ ವಿಸ್ಮಿತರಾದೆವು.ಅಲ್ಲಿಯ ದೇವಸ್ಥಾನ ನೋಡಿ ಮಾರನೆಯ ದಿನ ಪರಾಶರ ಸರೋವರದತ್ತ ಹೊರಟೆವು.

ಮತ್ತದೇ ರಾಗ. ನಮ್ಮ ಚಾಲಕನ ಬೇಜವಾಬ್ದಾರಿಯಿಂದ ದಾರಿ ತಪ್ಪಿ 15 ಕಿಮೀ ನಷ್ಟು ತಪ್ಪು ದಾರಿಯಲ್ಲಿ ಹೋಗಿ ವಾಪಸ್ಸ್ ಸರಿ ದಾರಿಯಲ್ಲಿ ಪರಾಶರ ಸರೋವರದತ್ತ ನಮ್ಮ ಪಯಣ. ಅತ್ಯಂತ ಕಡಿದಾದ ಪರ್ವತ ಕಣಿವೆ ದಾರಿಯಲ್ಲಿ ಡೀಸೆಲ್ ಖಾಲಿಯಾಗಬೇಕೆ?. ಹೆಚ್ಚು ಜನಸಂಚಾರವಿಲ್ಲದ ಆ ದಾರಿಯಲ್ಲಿ ಅನಿರೀಕ್ಷಿತವಾಗಿ ಸರ್ಕಾರೀ ವಾಹನವೊಂದು ಬಂತು. ಆ ಚಾಲಕ ನಮ್ಮ ಚಾಲಕನನ್ನು ಕರೆದುಕೊಂಡು ಹೋದರೆ, ಹಿಂದಿನಿಂದ ಬಂದ ಗಾಡಿಯ ಚಾಲಕ ನಮ್ಮನ್ನು ಸರೋವರದತ್ತ ಕರೆದುಕೊಂಡು ಹೋಗಿ ಬಿಟ್ಟು ಯಾವ ಪ್ರತಿ ಫಲಾಪೇಕ್ಷೆಯೂ ಇಲ್ಲದೆ ಹೊರಟೇ ಬಿಟ್ಟ.ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಜನರು ಈ ಜಾಗಕ್ಕೆ ಬರುತ್ತಿಲ್ಲ.ಅತಿ ಸುಂದರವಾದ ಸರೋವರ.ನಮ್ಮ ಚಾಲಕ ಡೀಸೆಲ್ ತಂದು ಕ್ಷೇಮವಾಗಿ ನಮ್ಮನ್ನು ಚಂಡೀಗಡ ತಲುಪಿಸಿದ

ಅಲ್ಲಿಂದ ಬೆಂಗಳೂರಿನ ಕಡೆಗೆ ಹೊರಟ ನಮಗೆ ಪ್ರಕೃತಿ ಸೌಂದರ್ಯದ ಹಿಮಾಚಲ ಪ್ರದೇಶ, ಅತ್ಯಂತ ಆತ್ಮೀಯ ಸ್ನೇಹಿತರ ಒಡನಾಟ,ಮತ್ತು ಶ್ರೀ ಗುರುಪ್ರಸಾದ್ ಮತ್ತು ಶ್ರೀ ವಿಜಯಕುಮಾರ್ ಅವರ ಸಲಹೆ ಗುಂಗುಡುತ್ತಿತ್ತು.ಮತ್ತೊಂದು ಪ್ರವಾಸದ ಕನಸು ಕಾಣುತ್ತಾ ಮನೆಯ ದಾರಿ ಹಿಡಿದೆವು.

ಗೌರಾಂಬಾ ವೆಂಕಟಸುಬ್ಬಯ್ಯ

ತೇರು

ನನ್ನೂರ ತೇರೊಂದು
ನಿನ್ನೂರ ದಾಟುವಾಗ
ಜೋಡಿ ದೀಪ ಹುಡುಕುತಿತ್ತು
ನಿನ್ನ ಕಂಗಳ

ನಿನ್ನೂರಿನಲಿ ನಮ್ಮ ತೇರು
ಹಾದಿಬೀದಿ ಹಾಯುವಾಗ
ಕನಸೊಂದು ಕಾಯುತ್ತಿತ್ತು
ನಿನ್ನ ಹಾಸವ

ನನ್ನೂರ ತೇರದು
ರೆಕ್ಕೆ ಬಿಚ್ಚಿ ಹಾರುವಾಗ
ನಲಿದಿತ್ತು ಕುಣಿದು ಕಾದು
ನಿನ್ನ ದಾರಿಯ

ತೇರಗೂಡಿನೊಳಗೆ ಕುಳಿತ
ರೆಪ್ಪೆ ಬಡಿವ ಹಕ್ಕಿಯೊಂದು
ಉಲಿದುತ್ತು ನೆನೆನೆನೆದು

ನಿನ್ನೆದೆಗೂಡ ಪಕ್ಷಿಯ

ತಿರುಗಿ ಬರುವ ಹಾದಿಯಲ್ಲಿ
ಬಿಟ್ಟ ಕಣ್ಣು ನೆಟ್ಟ ನೋಟ
ದೊಡ್ಡದೊಂದು ನಿಡಿದುಸಿರು
ನಿನ್ನ ಕಾಣದೆ

ರೆಪ್ಪೆಯಲ್ಲಿ ಒಂದು ಹನಿ
ಕಣ್ಣ ತುಂಬ ನಿನ್ನ ಬಿಂಬ
ನೆನಪು ಮಾತ್ರ ಬೆನ್ನ ಭಾರ
ನಿನ್ನದೇ ಬಲು ನಿರೀಕ್ಷೆ

ತಿರುಗಿ ಬಂತು
ತಿರು ತಿರುಗಿ
ನನ್ನ ತೇರು ನನ್ನ ಊರಿಗೇ
ನೀನು ಇಲ್ಲದೇ

-ಡಾ.ಶುಭಶ್ರೀಪ್ರಸಾದ್, ಮಂಡ್ಯ

ಲಘುವಾಗಬೇಕು.

ತವರ ತೊರೆದು ನಡೆದುಬಂದು
ಪ್ರೀತಿಯಿಂದ ಮನೆಯಕಟ್ಟಿ
ತನ್ನ ತನವ ಪಕ್ಕಕಿಟ್ಟು
ಎಲ್ಲರೊಡನೆ ಬೆರೆತುಬಾಳ್ವ
ಹೆಣ್ಣಿನಂತೆ ಲಘುವಾಗಬೇಕು.

ಒಡಲರಕ್ತ ಬಸಿದುಕೊಟ್ಟು
ಕಂದನನ್ನು ಭೂಮಿಗಿಳಿಸಿ
ನಗುತಕೂಸ ತಬ್ಬಿಹಿಡಿದು
ಒಡಲನೋವನೆಲ್ಲ ಮರೆವ
ತಾಯಿಯಂತೆ ಲಘುವಾಗಬೇಕು.

ನನ್ನಬಿಟ್ಟು,ಪ್ರೀತಿಕೊಟ್ಟು
ಕಷ್ಟವಿರಲು ಸ್ನೇಹಕೊಟ್ಟು
ಮನದಚಿಂತೆ ಹರಿಗೆಬಿಟ್ಟು
ನೆಮ್ಮದಿಯಲಿ ಬದುಕುಕಳೆವ
ಸಂತನಂತೆ ಲಘುವಾಗಬೇಕು.

ಅರಿವು

ಬೆಳಕು ಹರಿದಿರಬೇಕು.
ನೇಸರೇರಿರಬೇಕು.
ಕಿಟಕಿ ಬಾಗಿಲತೆರೆದೆ
ಆದರೂ ಕತ್ತಲು ಎನ್ನಸುತ್ತಲೂ.

ಕಣ್ಣು ಕಾಣಲೆಯಿಲ್ಲ
ಏನೂತಿಳಿಯುತಲಿಲ್ಲ.
ಭಯವುಮೂಡಿದೆ ಮನದಿ
ತಿರುಗಿದೆ,ತೆವಳಿದೆ,ಮಬ್ಬುತಿಳಿಯಲೆ ಇಲ್ಲ.

ಅಮ್ಮ ಬಂದಳು ಅಲ್ಲಿ
ಕಣ್ಣುತೆರೆ ನೀ ಬೇಗ
ಎಂದು ಉಲಿಯಲು ಆಗ
ಬಿಟ್ಟೆ ಕಣ್ಣನು ನೋಡಿ
ಸುತ್ತಲೂ ಬೆಳಕೋ ಬೆಳಕು

ವಿಜಯಕುಮಾರಿ

ಕಾವ್ಯಗಳಲ್ಲಿ ಪ್ರತಿಭಟನೆಯ ಸೊಲ್ಲು

ಪ್ಲೀಸ್ ಪ್ಲೀಸ್ ಐ ಕಾಂಟ್ ಬ್ರೀದ್..ಕೊನೆಯ ಕ್ಷಣಗಳ ಈ ಯಾಚನೆ ಜಗತ್ತಿನ ಎಲ್ಲೆಡೆ ತಲ್ಲಣ ಮೂಡಿಸಿತು.
" ಗೆಳೆಯ ಫ್ಲಾಯ್ಡ್, ನಿನ್ನ ಮರಣದ ಉಸಿರು ಹಬೆಯಾಡುತಿದೆ ಎಲ್ಲೆಡೆಯು" ಎಂಬುದು ಶ್ರೀ ಬೆಂಶ್ರೀ ರವೀಂದ್ರ ರ ಕವನದ ಸಾಲು.ನೀವು ಇದೇ ವೇದಿಕೆಯಲ್ಲಿ ಓದಿರುತ್ತೀರಿ.
" ಜಗತ್ತಿನ ಯಾವುದೇ ಮೂಲೆಯಲ್ಲಿ ನಡೆಯುವ ದೌರ್ಜನ್ಯದ ವಿರುದ್ಧ ಸಿಡಿದೆದ್ದರೆ ನೀನು ನನ್ನ ಸಂಗಾತಿ" ಎಂಬುದು ಚೆಗೆವಾರನ ಮಾತು.

ಜನಜೀವನದ ಬೇರೆ ಬೇರೆ ಕಾಲ ಘಟ್ಟಗಳಲ್ಲಿ ಆದ ಚಾರಿತ್ರಿಕ ಬದಲಾವಣೆಗಳು ಆಯಾ ಕಾಲಕ್ಕೆ ಪ್ರತಿಭಟನೆ ಮೂಡಿಸುತ್ತವೆ.ಕೆಲವು ಬೇಗ ಅಳಿದು ಹೋದರೆ ಕೆಲವು ಬಹುಕಾಲ ಉಳಿಯುತ್ತವೆ.ಕೆಲವು ಸುಪ್ತ ವಾಗಿ ಸದಾ ಇರುತ್ತವೆ.

ವರ್ಗರಹಿತ ಸಮಾಜದಲ್ಲಿ ಬದುಕುತ್ತಿದ್ದ ಪ್ರಾಚೀನ ಮಾನವರಿಗೆ ಪ್ರಕೃತಿಯ ವಿಕೋಪಗಳ ವಿರುದ್ಧ ಹೋರಾಡಲಾಗದ ಪ್ರತಿಭಟಿಸಲಾಗದ ಅಸಹಾಯಕತೆ ಪ್ರಾರ್ಥನೆಯಾಗಿ ಹೊಮ್ಮಿರಬೇಕು.
ಮನುಷ್ಯ ವ್ಯವಸಾಯ ಕಂಡುಕೊಂಡು ವೃತ್ತಿ ವಿಭಜನೆ ಮತ್ತು ಒಂದು ಗುಂಪು ಮತ್ತೊಂದು ಗುಂಪನ್ನು ದಾಸರನ್ನಾಗಿಸುವ ದಾಸ ಪದ್ಧತಿ ಬೆಳೆದಾಗ ಅಮಾನುಷ ದೌರ್ಜನ್ಯ ದ ವಿರುದ್ಧ ಪ್ರತಿಭಟನೆಗಳು ಹುಟ್ಟಿಕೊಂಡವು.
ಆಳುವ ವರ್ಗ ಶ್ರಮದಿಂದ ದೂರವಾದದ್ದರಿಂದ ವಾಸ್ತವತೆಯಿಂದಲೂ ದೂರವಾಗಿ ಆಲೋಚನೆ ಸುಖ ಸಂಸ್ಕೃತಿಯತ್ತ ಗಮನ ಹರಿಸಿದರೆ,
ಶೋಷಿತರು ವಿಚಾರದಿಂದ ವಿಮುಖರಾಗಿ ಶ್ರಮಿಕರಾಗುತ್ತಾ ಹೋದರು.ಕೆಲವರು ಪ್ರಭುಗಳ ಸೇವೆ ಮಾಡಿ ಬುದ್ಧಿ ಜೀವಿಗಳ ಗುಂಪಾಗಿ ಬೆಳೆದರು.ಅರಸರನ್ನು ಓಲೈಸುವ ಅವರ ಕಾವ್ಯಗಳಲ್ಲಿ ಕಾವ್ಯದ ಪ್ರಧಾನ ಆಶಯ ಆಳುವವರನ್ನು ಸಮರ್ಥಿಸುವುದಾದರೂ ಜನಜೀವನದ ಚಿತ್ರಣವನ್ನೂ ಕಾಣಬಹುದು.
ಕೈಗಾರಿಕಾ ಕ್ರಾಂತಿ ವೈಜ್ಞಾನಿಕ ಅನ್ವೇಷಣೆಗಳಿಂದಾದ ಬದಲಾವಣೆಯ ಪರಿಣಾಮವಾಗಿ ಆಶ್ರಿತ ಸ್ವರೂಪ ಹೋಗಿ ಬುದ್ಧಿವಂತಿಕೆಯನ್ನು ಮಾರಿ ಬದುಕುವ ಸ್ವತಂತ್ರ ವರ್ಗ ಹುಟ್ಟಿಕೊಂಡಿತು. ಉಪಾಧ್ಯಾಯರು ಬ್ಯಾಂಕರುಗಳು ಕಾನೂನು ತಜ್ಞರು,ಸರಕಾರಿ ನೌಕರರು ಇವರೆಲ್ಲ ದುಡಿಯುವ ವರ್ಗಕ್ಕೆ ಸೇರಿದವರೇ ಆಗಿದ್ದು ಇವರ

ಸಂಘಟನೆಗಳಲ್ಲಿ ಹೋರಾಟ ಪ್ರತಿಭಟನೆಗಳು ಸಹಜವಾಗಿಯೇ ಹುಟ್ಟಿಕೊಂಡವು
ಸಮಾಜದ ಒಳಿತಿಗಾಗಿ ಬದ್ದನಾಗಿ ಬರೆಯುವ ಕವಿಯ ಕಾವ್ಯದಲ್ಲಿ ಪ್ರತಿಭಟನೆಯ ಸೊಲ್ಲು ಕಾಣಿಸುತ್ತದೆ
ಕಾವ್ಯ ಕೇವಲ ಶಬ್ದಗಳ ದೊಂಬರಾಟವಾಗದೇ ಕವಿ ಸಾಮಾಜಿಕ ಜವಾಬ್ದಾರಿಯನ್ನೂ ಹೊರುವಂತೆ ಆಗಬೇಕೆಂಬುದು ಪ್ರಗತಿ ಪರರ ಆಶಯ.

ಕನ್ನಡ ಕಾವ್ಯಗಳಲ್ಲಿ ಪ್ರತಿಭಟನೆಯ ಸೊಲ್ಲು ಸಹಜವಾಗೇ ಎಲ್ಲ ಕಾಲಗಳಲ್ಲೂ ಕಂಡು ಬಂದಿದೆ.
ಕೆಲವು ಉದಾಹರಣೆಗಳನ್ನು ನೋಡೋಣ.

ಹಾದೀಲಿ ಹೋಗೋರೆ ಹಾಡೆಂದು ಕಾಡ್ಬೇಡಿ
ಹಾಡಲ್ಲ ನನ್ನ ಒಡಲುರಿ ದೇವರೆ
ಬೆವರಲ್ಲ ನನ್ನ ಕಣ್ಣೀರು (ಜನಪದ)

ನೆಲವೊಂದೆ ಹೊಲಗೇರಿ ಶಿವಾಲಯಕ್ಕೆ
ಜಲವೊಂದೆ ಶೌಚ ಆಚಮನಕ್ಕೆ
ಕುಲವೊಂದೆ ತನ್ನ ತಾನರಿದವಂಗೆ.
(ವಚನ- ಬಸವಣ್ಣ)

ಆತ್ಮ ಯಾವ ಕುಲ ಜೀವ ಯಾವ ಕುಲ
ತತ್ವೇಂದ್ರಿಯಗಳ ಕುಲ ಪೇಳಿರಯ್ಯ.
(ಕನಕದಾಸರು)

ಪೆಣ್ಣಲ್ಲವೇ ನಮ್ಮನೆಲ್ಲ ಪಡೆದ ತಾಯಿ
ಪೆಣ್ಣಲ್ಲವೇ ಪೊರೆದವಳು
ಪೆಣ್ಣು ಪೆಣ್ಣೆಂದೇಕೆ ಬೀಳುಗಳೆವರು
ಕಣ್ಣುಕಾಣದ ಗಾವಿಲರು
(ಸಂಚಿ ಹೊನ್ನಮ್ಮ)

ವಿಜಯನಗರವೋ ಮೊಗಲ್ದರಾಳ್ವಿಕೆಯೋ
ಇಂಗ್ಲೀಷರೋ..
ಎಲ್ಲರೂ ಜಿಗಣೆಗಳೇ ನನ್ನ ನೆತ್ತರಿಗೆ
ಕತ್ತಿ ಪರದೇಶಿಯಾದರೆ ಮಾತ್ರಾ ನೋವೇ
ನಮ್ಮವರೇ ಹದ ಹಾಕಿ ತಿವಿದರದು ಹೂವೇ
(ಕುವೆಂಪು)
ಬಡವರ ಒಡಲಿನ ಬಡ ಬಾನ್ದಲದಲಿ
ಸುಡು ಸುಡು ಪಂಜು ಕೈಯೊಳಗಿತ್ತೋ
ಕಂಬನಿ ಕುಡಿಯುವ ಹುಂಬ ಬಾಯಲೆ
ಮೈದುಂಬಿದಂತೆ ಉಧೋ ಉಧೋ ಎನ್ನುತಲಿತ್ತೋ
(ದ ರಾ ಬೇಂದ್ರೆ)

ಯಾರೋ ಉಳುವರು ಯಾರೋ ದಣಿವರು
ಯಾರೋ ಕೊಯ್ವರು ತಿಂಬರು
ಯಾರೋ ನಗುವರು ಯಾರೋ ಕುಣಿವರು
ಯಾರೋ ಬೆವರನು ಬಸಿವರು.

(ವಿ.ಸೀತಾರಾಮಯ್ಯ)

ಒಮ್ಮೆ ಒಮ್ಮೆ ಕಣ್ದೆರೆಯಲಿ ಸಾಕು
ಹೂಂ ಕಾರದ ರವ ಮೊಳಗಲಿ ಸಾಕು
ನೆತ್ತರ ಹೀರುವ ತಗಣೆಗಳೆಲ್ಲ
ಬಿಟ್ಟೋಡುವವು ದೂರಕೆ.
ಏಳುವುದೆಂದೀ ಜನಪದ
ಕ್ರಾಂತಿ ರೌದ್ರಕೆ ಬಹುದೆಂದಿಗೆ ಹದ
ಏಳುವುದೆಂದೀ ಜನಪದ
(ಗೋಪಾಲಕೃಷ್ಣ ಅಡಿಗ)

ಆಳೋನಿಗಾರು ಕಾಸು ಉಳೋನಿಗೊಂದು ಕಾಸು
ಮಾಡಿದೋರು ಯಾರಣ್ಣ
ದುಡಿಯೋ ಮೈಗೆ ಬಟ್ಟೆ ಇಲ್ಲ, ಉಳೋ ಮೈಗೆ ಅನ್ನ ಇಲ್ಲ
ಕುಂತ ಮೈಗೆ ಹೊಟ್ಟೆ ತುಂಬಾ.
(ಸಿ.ವೀರಣ್ಣ)

ಗುಡಿಸಬೇಕು ಅವರಿರುವರು ಇವರಿರುವರು
ನನ್ನೊಬ್ಬನದೇನು ಮಹಾ ಎಂದರದೇ ಹಾಲಿನಕತೆ
ನೀನಾದರೂ ಪೊರಕೆಯಾಗು
ಬೃಂದಾವನ ಹಾಳ್ಗೆಡೆದಿದೆ
(ಸಿದ್ದಲಿಂಗಯ್ಯ)

ನನಗಾಗಿ ದುಡಿವ ನನ್ನ ಜನರ ಬಗ್ಗೆ
ನಾನೆಂದೂ ಬರೆಯುವುದಿಲ್ಲ
ಏಕೆಂದರೆ
ಆಗ ವರ್ಗ ಪ್ರಜ್ಞೆ ಅಡ್ಡ ಬಂದು
ರಾಜಕೀಯ ಸೇರಿ
ಈ ನನ್ನ ಶುದ್ಧ ಕವನ ಅಶುದ್ಧವಾಗುತ್ತದೆ
(ರಂಜಾನ್ ದರ್ಗ)

ಗ್ರಂಥ ಋಣ: ಕನ್ನಡ ಪ್ರತಿಭಟನೆ ಕಾವ್ಯ

- ಹು.ವಾ.ಶ್ರೀಪ್ರಕಾಶ್

ನಾನು ಮತ್ತು ಆಧ್ಯಾತ್ಮ ಶಿಬಿರಗಳು

ನನ್ನ ಜೀವನದಲ್ಲಿ ಅದ್ಯಾತ್ಮ ಶಿಬಿರಗಳ ಪ್ರಭಾವ ತುಂಬಾ ಆಗಿದೆ. ಆದುದರಿಂದ ಅದನ್ನೊಂದು ವಿಷಯವಾಗಿ ಪರಿಗಣಿಸಿ ಈ ಚಿಕ್ಕ ಲೇಖನ ಬರೆಯುತ್ತಲಿದ್ದೇನೆ.

1983 ರಲ್ಲಿ ಒಬ್ಬ ಸ್ನೇಹಿತರ ಆಗ್ರಹದ ಮೇರೆಗೆ ಅಂದರೆ ನನ್ನ 37 ನೇ ವಯಸ್ಸಿನಲ್ಲಿ ಪ್ರಥಮ ಅಧ್ಯಾತ್ಮ ಶಿಬಿರವನ್ನು ಬಳ್ಳಾರಿ ರಸ್ತೆಯಲ್ಲಿ ಯಲಹಂಕ ಟೈಲ್ಸ್ ಪಕ್ಕದಲ್ಲಿದ್ದ ಶಂಕರ ಆಶ್ರಮದಲ್ಲಿ ಒಂದು ವಾರದ ಅವಧಿಗೆ ಸೇರಿದೆ. ಅದು ಅಂತಹ ದೊಡ್ಡ

ಆಶ್ರಮವೇನೂ ಅಲ್ಲ. ಒಂದು ಚಿಕ್ಕ ದೇವಸ್ಥಾನ ಅಕ್ಕ ಪಕ್ಕ 4/ 5 ಕೋಣೆಗಳು. ಒಬ್ಬ ಸ್ಥಿತಿವಂತರು ಅದಕ್ಕೇ ಟ್ರಸ್ಟೀ. ಅತೀ ಸಾಧಾರಣ ವ್ಯವಸ್ಥೆಗಳೊಂದಿಗೆ ರಾಮಯ್ಯ ಎಂಬ ಗೃಹಸ್ಥರು ಶಿಬಿರದ ಮೇಲ್ವಿಚಾರಕರು. ರಾಮಯ್ಯನವರು ಬೆಳಗಿನ 5 ಗಂಟೆಗೆ ಗಂಟೆ ಶಬ್ದದೊಂದಿಗೆ ಅಂಗಳದಲ್ಲಿ ಓಡಾಡಿ ಎಲ್ಲರನ್ನೂ, ಅಂದರೆ ಸುಮಾರು 25 ಶಿಬಿರಾರ್ಥಿಗಳನ್ನು ಎಚ್ಚರಿಸುತ್ತಲಿದ್ದರು. ಕೂಡಲೇ ಬೆಳಗಿನ ಸ್ನಾನಾದಿಮುಗಿಸಿ 6 ಗಂಟೆಗೆ ದೇವಸ್ಥಾನದಲ್ಲಿ ಧ್ಯಾನ, ಪ್ರಾರ್ಥನೆಗಳೊಂದಿಗೆ ನಮ್ಮ ದೈನಿಕ ದಿನಚರಿ ಪ್ರಾರಂಭವಾಗುತ್ತಲಿತ್ತು. ಅಲ್ಲಿಗೆ ಯೋಗ, ಪ್ರಕೃತಿ ಚಿಕಿತ್ಸೆ, ಆಯಸ್ಕಾಂತ ಚಿತ್ಸಕರು, ಗಾಂಧಿವಾದಿಗಳು, ಆಚಾರ್ಯರು ಬಂದು ಪಾಠ ಮಾಡುತ್ತಲಿದ್ದರು. ದೇವರಾವ್ ಎಂಬವರು ದಿನದಲ್ಲಿ ಒಂದು ಗಂಟೆ ಶಂಕರರ ತತ್ವಗಳನ್ನು, ಜೀವನ ಚರಿತ್ರೆಯನ್ನು ಹೇಳುವುದು ಮಾತ್ರ ಅಧ್ಯಾತ್ಮಕ್ಕೆ ಸಂಬಂಧಿಸಿದ್ದು, ಮಿಕ್ಕಿದ ವೇಳೆ ಆರೋಗ್ಯ, ನೈತಿಕತೆ, ಶಿಸ್ತು ಇವುಗಳ ಬಗ್ಗೆ ತರಗತಿಗಳು ಇರುತ್ತಲಿದ್ದವು. ಇದು ಆ ಶಿಬಿರದ ಒಂದು ಪಕ್ಷಿನೋಟ.

ಆ ದಿನಗಳಲ್ಲಿ ನನ್ನ ಕೆಲಸದಲ್ಲಿ ಬಹಳ ಒತ್ತಡ ಇರುತ್ತಲಿತ್ತು. ಮನೆಯಲ್ಲಿ ಒಳ್ಳೆಯ ವಾತಾವರಣವಿತ್ತು. ಆ ವರೆಗೆ ಕೆಲಸ ಮಾಡಿದಲ್ಲೆಲ್ಲ ಚೆನ್ನಾಗಿ ಕೆಲಸ ಮಾಡಿದ ಸಮಾಧಾನವಿತ್ತು. ಆದರೂ ಒಂದು ವಾರ ಸಂಸಾರ, ಉದ್ಯೋಗ, ಫೋನು, ಟಿ. ವಿ., ರೇಡಿಯೋಗಳಂತ ಇಲೆಕ್ಟ್ರಾನಿಕ್ ಸಲಕರಣೆಗಳ ಸದ್ದು, ಗದ್ದಲವಿಲ್ಲದೆ, ಪತ್ರಿಕೆಗಳ ಪ್ರಚೋದಕ ವಾರ್ತೆಗಳಿಲ್ಲದೆ ಒಂದು ಹೊಸ ಜಗತ್ತಿನ ಪರಿಚಯವಾದಂತಿತ್ತು. ಅಲ್ಲಿ ಅಕ್ಕ ಪಕ್ಕದಲ್ಲಿ ಜನವಸತಿ ಇರಲಿಲ್ಲ. ಹೀಗಾಗಿ ಹೊರಗಿನ ಜನರ ಸಂಪರ್ಕವೂ ಇರಲಿಲ್ಲ. ಬೆಂಗಳೂರಲ್ಲಿ ಇದ್ದರೂ, ಬೆಂಗಳೂರಿನ ಗಲಾಟೆಗೆ ಹೊರತಾಗಿದ್ದೆವು. ನನಗೆ ಇರುವ ವ್ಯವಸ್ಥೆಗೆ ನನ್ನನ್ನು ಹೊಂದಿಸಿಕೊಳ್ಳುವ ರೂಢಿ, ಆ ಕಾರಣ ಅಲ್ಲಿದ್ದ ಸಮಯ ಬಹಳ ಉಪಯುಕ್ತವೆನಿಸಿತು. ಅಲ್ಲಿಯ ಒಬ್ಬ ಹಿರಿಯರು ಮೈಸೂರಿನ ರಾಮಕೃಷ್ಣ ಆಶ್ರಮದ rimse ಅಂದರೆ ರಾಮಕೃಷ್ಣ ನೈತಿಕ ಹಾಗೂ ಆಧ್ಯಾತ್ಮಿಕ ಶಿಬಿರದ ಮಾಹಿತಿ ನೀಡಿ ವಿಳಾಸ ನೀಡಿದರು. ಹಾಗೂ ಅಲ್ಲಿಯ ಶಿಸ್ತುಬದ್ಧ ವ್ಯವಸ್ಥೆ ಬಗ್ಗೆ ತಿಳಿಸಿದರು. ಬೇಸಿಗೆಯಲ್ಲಿ 4 ದಿನಗಳ ಸಾರ್ವಜನಿಕರಿಗೆ ಇರುವ ಆಧ್ಯಾತ್ಮಿಕ ಶಿಬಿರ ಸೇರಿದೆ. ಅಲ್ಲಿ ಸುಮಾರು 180 ಶಿಬಿರಾರ್ಥಿಗಳು, ಎಲ್ಲರಿಗೂ ಒಂದು ಕೋಣೆ. ದಿನಾಲೂ ನಮ್ಮ ಕೋಣೆ ಗುಡಿಸುವುದರೊಂದಿಗೆ ದಿನಚರಿ ಬೆಳಗಿನ 5 ಗಂಟೆಗೆ ಪ್ರಾರಂಭ. 1967 ರಲ್ಲಿ ಬ್ರಹ್ಮಚಾರಿಗಳ ತರಬೇತಿಗಾಗಿ ಸುಸಜ್ಜಿತವಾದ ಎಲ್ಲ ವ್ಯವಸ್ಥೆಗಳನ್ನು ಒಳಗೊಂಡ ಕೋಟೆಯಂತಹ ಕಟ್ಟಡ. ಕಾರಣಾಂತರಗಳಿಂದ ಈಗ ಆಶ್ರಮದ ಬಿ. ಎಡ್. ಕಾಲೇಜು ನಡೆಯುತ್ತಲಿದೆ. ಆ ಕಟ್ಟಡ ಕಟ್ಟುವಾಗ ನಮ್ಮ ಮಾಜಿ ಮುಖ್ಯ ಮಂತ್ರಿ ಕೃಷ್ಣ ಅವರು ಅಲ್ಲಿಯ ವಿದ್ಯಾಶಾಲೆಯಲ್ಲಿ ಓದುವಾಗ ಕಲ್ಲು ಹೊತ್ತ ಕಥೆ ಒಮ್ಮೆ ಆಶ್ರಮದ ಭಾಷಣದಲ್ಲಿ ಹೇಳಿ, ಆಗ ನಮ್ಮ ತಂದೆ ಮಲ್ಲಯ್ಯ ನನ್ನು ಸ್ವಾಮೀಜಿಗಳನ್ನು ಬೆಯ್ಯುತ್ತಲಿದ್ದೆ, ನಂತರ ಗೊತ್ತಾಯಿತು ಅಂದು ಕಲ್ಲು ಹೊತ್ತದ್ದು ಎಂತಹ ಭಾರವನ್ನೂ ಹೊರುವ ಶಕ್ತಿ ನೀಡುವುದೆಂದು.
ಅಲ್ಲಿ 4 ದಿನಗಳ ಶಿಬಿರ. ಬೇಸಿಗೆ, ಚಳಿಗಾಲದ ರಜೆಯಲ್ಲಿ ಹಿರಿಯರಿಗೆ 4 ದಿನಗಳ, ಕಾಲೇಜು ವಿದ್ಯಾರ್ಥಿಗಳಿಗೆ 10 ದಿನಗಳ ಶಿಬಿರಗಳು ನಡೆಯುತ್ತವೆ.ಮೈಸೂರು ಆಶ್ರಮದ ಹಾಗೂ ಬೇರೆ ಆಶ್ರಮಗಳಿಂದ ಬಂದ ಸ್ವಾಮೀಜಿಗಳೇ ತರಗತಿಯಲ್ಲಿ ಕನ್ನಡ ಮತ್ತು ಇಂಗ್ಲಿಷಿನಲ್ಲಿ ಪಾಠ ಮಾಡುತ್ತಾರೆ. ನಾನು ಕನ್ನಡದ ತರಗತಿಯಲ್ಲಿದ್ದೆ. ಆಗ ಹುರುಪು, ಉತ್ಸಾಹಗಳಿದ್ದ ಕಾರಣ ಅಲ್ಲಿ ಅಡುಗೆ ಬಡಿಸುವ ಕಾರ್ಯದಲ್ಲಿ ಭಾಗಿಯಾದೆ. ಸುಮಾರು 6 ಶಿಬಿರಗಳಲ್ಲಿ ಭಾಗಿಯಾಗಿ ಮುಂದೆ ಅಂದಿನಿಂದ ಇಂದಿನ ವರೆಗೂ ಆಶ್ರಮದ ಭಾಗವಾದೆ.

1997 ರಲ್ಲಿ ಎಸ್. ಬಿ. ಐ. ಬೆಂಗಳೂರು ಶಾಖೆಯಲ್ಲಿ ಕೆಲಸ ಮಾಡುವಾಗ ಹಲವಾರು ಸ್ನೇಹಿತರು ಕನಕಪುರ ರಸ್ತೆಯ ಆರ್ಟ್ ಒಫ್ ಲಿವಿಂಗ್ ಆಶ್ರಮದಲ್ಲಿ 5/ 6 ದಿನಗಳ ಸುದರ್ಶನ ಕ್ರಿಯೆ ತರಬೇತಿಗೆ ಸೇರಿದರು. ನಾನೂ ಅವರೊಡನೆ ಜೈ ಅಂದೆ. ಸುದರ್ಶನ ಕ್ರಿಯೆ ರವಿಶಂಕರ ಗುರೂಜಿ ಶಿವಮೊಗ್ಗದಲ್ಲಿ ಧ್ಯಾನದಲ್ಲಿ ಕಂಡುಕೊಂಡ ಪ್ರಭಾವಿ ಉಸಿರಾಟದ ಪ್ರಕ್ರಿಯೆ. ಅದನ್ನು ನಿಯಮಿತವಾಗಿ ಮಾಡಿದರೆ ನಮ್ಮ ಶ್ವಾಸನಾಳ, ಪುಪ್ಪಸಗಳು ಸ್ವಚ್ಛವಾಗಿ, ಆರೋಗ್ಯಪೂರ್ಣವಾಗುವವು. ಅಂದರೆ ಉಸಿರಾಟ ನಿಧಾನವೂ, ದೀರ್ಘವೂ ಆಗುವುದು. ಅಲ್ಲಿ ತರಬೇತು ಪಡೆದು ಬಂದಮೇಲೆ ಬೇರೆ ಬೇರೆ ಕಡೆಗೆ ವಾರದಲ್ಲಿ ಒಂದು ದಿನ ಗುಂಪಿನಲ್ಲಿ ಕ್ರಿಯೆ ಕೈಗೊಳ್ಳಬಹುದಾಗಿತ್ತು. ಈ ಕ್ರಿಯೆಯೊಂದಿಗೆ ಕೆಲವು ನೈತಿಕ ಪಾಠಗಳು ನಡೆಯುತ್ತಲಿದ್ದವು. ಅಲ್ಲಿ ವಿವಿಧ ಸ್ತರಗಳ ಜನರ ಸಂಪರ್ಕ ದೊರೆಯುವುದು. ಹೊಸ ವಿಚಾರಗಳು ವಿನಿಮಯ ವಾಗುವವು. ಆಶ್ರಮವನ್ನು ಚೆನ್ನಾಗಿ ಅಭಿವೃದ್ಧಿ ಪಡಿಸಿದ್ದಾರೆ. ಅಲ್ಲಿಯೂ ಶಿಸ್ತು, ಶಾಂತಿಗೆ ಆಧ್ಯತೆ.

ಅಲ್ಲಿಂದ ಬಂದ ನಂತರ ಪ್ರತಿ ಶನಿವಾರ ಬೆಳಿಗ್ಗೆ ರಾಜಾಜಿನಗರದಲ್ಲಿ ಕ್ರಿಯೆಗೆ ಸೇರುತ್ತಲಿದ್ದೆವು. ಅಲ್ಲಿಂದ ಹೆಚ್ಚಿನ ತರಬೇತಿಗಾಗಿ ಆರ್ಟ್ ಒಫ್ ಲಿವಿಂಗ್ ಆಶ್ರಮಕ್ಕೆ ಒಂದು ವಾರ ಸೇರಿದೆ. ಆಗ ಹೊಸ ವಿಶಾಲಾಕ್ಷಿ ಭವನ ಉದ್ಘಾಟನೆಯಾಯಿತು. ರೈತ ಮುಖಂಡ ನಂಜುಂಡಸ್ವಾಮಿಯವರು ಅತಿಥಿ, ಆಗ ರವಿಶಂಕರ್ ಗುರೂಜಿ ಶಿಬಿರ ಮುಗಿಯುವವರೆಗೂ ಇಲ್ಲಿಯೇ ಇದ್ದರು. ಆಗ ಒಂದು ಘಟನೆ ನಡೆಯಿತು. ನಂಜುಂಡಸ್ವಾಮಿಯವರು ಸಭೆಯಲ್ಲಿ ನನಗೆ ಹಾರ ಹಾಕಿಸಿಕೊಳ್ಳುವ ಅಭ್ಯಾಸವಿಲ್ಲ, ಎಂದು ಹಾರ ಹಾಕಿಸಿಕೊಳ್ಳಲಿಲ್ಲ. ನಂತರ ಗುರೂಜಿಗೆ ಹಾರ ಹಾಕುವಾಗ ಅವರು ಒಂದು ನಿಮಿಷ ಹಾರ ಹಾಕುವವರನ್ನು ತಡೆದು, ನಂಜುಂಡಸ್ವಾಮಿಯವರಿಗೆ "

ನಂಜುಡಸ್ವಾಮಿಯವರೇ, ನನಗೂ ಈ ಹಾರ, ತುರಾಯಿಗಳ ಆಸಕ್ತಿ ಇಲ್ಲ. ಆದರೆ ಇವೆಲ್ಲ ರೈತರ ಬೆಳೆ, ಎಲ್ಲರೂ ಹಾರ ಹಾಕಿಸಿಕೊಳ್ಳುವುದಿಲ್ಲ ಅಂದರೆ ನಾವು ರೈತರ ದುಡಿತಕ್ಕೆ ಕಲ್ಲು ಹಾಕಿದಂತೆ. ಅವರ ಬೆಳೆಗೆ ಬೆಲೆ ಬರಬೇಕು. ಹಾರ ಹಾಕಿಸಿಕೊಳ್ಳದಿದ್ದರೂ ಚಿಂತೆಯಿಲ್ಲ, ಕೈಯಲ್ಲಿ ಇಸಿದುಕೊಳ್ಳಿ, ಅಷ್ಟು ರೈತನಿಗೆ ಸಂಪಾದನೆ ಆಗುತ್ತದೆ. ನಂತರ ಪ್ರೀತಿಯಿಂದ ಮಕ್ಕಳ ಕೊರಳಿಗೆ ಬೇಕಿದ್ದರೂ ಹಾಕಿ, ಯಾಕೆಂದರೆ ಮಕ್ಕಳು ಭಗವಂತನ ಸ್ವರೂಪ.. ನಂತರ ನಂಜುಂಡಸ್ವಾಮಿಯವರು " ಹೌದು, ನಿಮ್ಮ ಮಾತು ಒಪ್ಪಿದೆ, ಇನ್ನು ಹಾರ ತಿರಸ್ಕರಿಸುವದಿಲ್ಲ, ಅಂದರು. ಇದೆಲ್ಲ ಯಾಕೆ ಹೇಳಿದೆ ಅಂದರೆ ಇದೆಲ್ಲವೂ ಆಧ್ಯಾತ್ಮದ ಭಾಗವೇ ಆಗಿದೆ. ಆ ದಿನಗಳಲ್ಲಿ ಗುರೂಜಿ ದಿನದಲ್ಲಿ ಒಂದೆರಡು ಸಲ ಬರುತ್ತಲಿದ್ದರು. ಆಗ ಭಜನೆ ಕಳೆಗಟ್ಟುತ್ತಲಿತ್ತು. ಅವರ ಮಾತು, ಪ್ರಶ್ನೋತ್ತರ ಕಾರ್ಯಕ್ರಗಳು ಉತ್ಕ್ರುಸ್ಟ್ ವಾಗಿರುತ್ತಲಿದ್ದವು.

ಸಮಯದ ಮಿತಿ ಇರುವುದರಿಂದ ಮಹತ್ವದ 3/ 4 ಶಿಬಿರಗಳಿಗೆ ಮೊಟಕುಗೊಳಿಸುತ್ತೇನೆ. ಸರಳ ಜೀವನ, ಅವಶ್ಯಕತೆಗಳ ಕೊರತೆಯಲ್ಲಿ, ತಲೆಗೆ ತರಲೆ ವಿಷಯಗಳ ಬದಲು ತಾತ್ವಿಕ ವಿಷಯ ತುಂಬಲು ಆಗಾಗ ಇಂತಹ ಶಿಬಿರಗಳು ಸಹಾಯ ಮಾಡುವವು.

ಇಜೇರಿ

ಗೋದ್ದಾರಕ

ಕೈಲಾಸಂ ಅವರ ಬಾಲಬೋಧೆ' ಎನ್ನುವ ಕಿರುಹೊತ್ತಿಗೆಯಿಂದ ಆಯ್ದ ಕಿರು ಸಂವಾದ ಇದು. ಇದರ ಸಂಪಾದಕರು ಜಿ.ಪಿ. ರಾಜರತ್ನಂ, ಅವರು.

ಗೋತ್ರೋದ್ದಾರಕ ಇದು ತಮಿಳು ಭಾಷೆಯಲ್ಲಿ ಕೈಲಾಸಂ ಬರದಿದ್ದಾರೆ .ಇಲ್ಲಿ ಪ್ರಯೋಗಿಸಲಾಗಿರುವ ತಮಿಳು ನಂದಮಿಳ್ ಎಂದು ಕರೆಸಿಕೊಳ್ಳುವರ ಶುದ್ಧವಾದ ರೂಪದ್ದು. ಕನ್ನಡೀಕೃತವಾದ ತಮಿಳು, ಹಾಸ್ಯಮುಕ್ಕಿಸಲು ಅನುವಾಗುವಂತಿರುವ ಭಾಷ. ಇದರಲ್ಲಿ ಎರಡು ಪಾತ್ರಗಳು, ಹೋಟೆಲ್ ಇಟ್ಟಿರುವ ಒಬ್ಬ ಅಯ್ಯರ್, ಮತ್ತು ಅವರ ಮಗ ಯಾವುದೋ ಒಂದು ಪರೀಕ್ಷೆಯನ್ನು ಬರೆದು ಅದರಲ್ಲಿ ಯಶಸ್ಸು ಕಾಣದೆ ಬಂದ ಮಗ ಮತ್ತು ತಂದೆ ಇವರಿಬ್ಬರ ಸ್ವಾರಸ್ಯಕರವಾದ ಸಂವಾದದ ಕನ್ನಡ ಅನುವಾದ ಈಗ.
ಹೋಟೆಲ್ ಅಯ್ಯರ್ : (ಗೋತ್ರೋದ್ದಾರಕನಿಗೆ ಏನೋ ಪರೀಕ್ಷೇಲಿ ವೈನ್ ಬಂತೇನೋ ವಿಗ ? ಗೋತ್ರೋದ್ದಾರಕ : ಇಲ್ಲ ಅಪ್ಪಯ್ಯ.... ನಂಗೆ ಬರಲಿಲ್ಲ ಹೂ, ಅಯ್ಯರ್ : ಮತ್ತ ಇತ್ಯಾರ್ಗ ಬಂತು ? ಗೊತ್ತೋದ್ದಾರಕ ; ಮಾರ್ಕೆಟ್ ಹಲ್ಲಂಗಡಿ ತಿಗಳಟ್ಟಿ ಮಗಂಗೆ ಬಂತು ಅಯ್ಯರ್ : ಆಡಡಾ ! ಆ ಹುಡ್ಡ ಮಾಡಿದ ಲೆಕ್ಕ ನೀ ಮಾಡ ಬಾರ್ದಿತ್ತೇನೋ ? ಅದೇನ್ ಅದ್ಭುತ ಲೆಕ್ತಾ ? ಗೊತ್ತೋದ್ದಾರಕ : ಡಜನ್ ಹನ್ನೆರಡಾಣೆ ಆದ್ರೆ ಹನ್ನರಡು ಡಜನ್ ಗೆ ವಿಷ ಅಂತ ಕೇಳಿದ್ದರು ಅಯ್ಯರ್ : (ದಿಗ್ಗೇಶ ಭ್ರಮಿತನಾಗಿ) ಎನೋ ಇದು ? ದಿನಾನೂ ಢಡಿಯಾ ಧಡಿಯಾ ದಂರೋಟ್ ಲೆಕ್ಕ, ಕೋಟಿ ಕೋಟಿ ಕಪ್ಪು ಕಾಫಿ ಲೆಕ್ಕ ಹಾಕೋ ನೀನು ಈ ಅಕ್ಕ ಮಾಡಕ್ಕಾಗಲಿಲ್ವನೋ ? ಏ ಚ ವಿಂಗೆ ?

ಗೋತ್ರೋದ್ದಾರ : ನಾನೇನ್ ಮಾಡ್ಲಿಲ್ಲ . ತಾನ ರಾಭೀಲೂ ಕೇಳ್ಲಿಲ್ಲ, ಶಾರಾಸೇವೇಲೂ ಕೇಳಿರಲಿಲ್ಲ. ಉಪ್ಪಿಟ್ಟಲ್ಲೂ ಕೇಳಿರಿಲಿಲ್ಲಾ. ಓಂಪುಡಿಲೂ ಕೇಳಿರಲಿಲ್ಲ. ಹೋಗಲಿ ದೋಸಲಾದ್ರೂ ಕೇಳಬಾರದಾ ? ಅದೂ ಇಲ್ಲ. ಲಕ್ಷಾನಲ್ಲಾ ಕಿತ್ಯಹಣ್ಣಲ್ಲೇ ಕೇಳ ಬಿಟ್ರು, ಆ ಹಣ್ಣಂಗಡಿ ತಿಗಳರ ಹುಡುಗ ಮಾಡುಟ್ಟಾ .

(ಬೋಳಪುರದ ರವೀಂದ್ರನಾಥ ಠಾಕೂರರು ತಮ್ಮ ಕಳಾಶಾಲೆಗೆ ಅರ್ಹರಾದ ವಿದ್ಯಾರ್ಥಿಗಳನ್ನು ಶೇಖರಿಸುವ ಇಚ್ಛೆಯಿಂದ , ಬಳೇಪೇಟೆ ಮುನಿಸಿಪಲ್ ತೋಟದಲ್ಲಿಟ್ಟಿದ್ದ ಪರೀಕ್ಷೆಯಿಂದ ಹಿಗ್ಗುತ್ತಾ ಹಿಂದಿರುಗಿ ಬಂದ ಗೋತ್ರೋದ್ದಾರಕನನ್ನು ಕುರಿತು)

ಹೊ ಅಯ್ಯರ್: ಎನೋ, ಈ ಪರೀಕ್ಷಲಾದ್ರೂ ಸರಿಯಾಗಿ ಮಾಡ್ಕಂಡ್ಯಾ , ಇಲ್ಲ ಆ ಹಣ್ಣಂಗಡಿ ತಿಗಳಪ್ಪಯ್ಯಂಗ ನೋಡ್ಕೊಂಡು ಬಂದ್ಯೋ ?
ಆ ತಿಗಳಪ್ಪಯ್ಯಂಗ ಆಗಲಿಲ್ಲ.

ಗೋದ್ದಾರಕ ಈ ಸರ್ತಿ ಸರ್ಯಾಗಿ ಮಾಡಿದಿನಾ ಕೇಳಿದಕ್ಕೆಲ್ಲಾ ಉತ್ತರ ಬರದು ಬಂದಿದೀನಿ.

ಹೊ ಅಯ್ಯರ್: ಏಳ್ತಾ : ಏನ್ ಬರ್ದೇ ಹೇಳು ಗೋತ್ರೋದ್ಧಾರಕ : ಅಣ್ಣಾ , ಚಂದ್ರಾ, ಹೇಗಿದ್ದಾನೆ ಅಂತಾ ಕೇಳಿದ್ರು . ಅಮಾವಾಸ್ಯೆಯಿಂದ ಪೂರ್ಣಿಮೆವರೆಗು ಹೇಗೇ ಇರ್ತಾನೋ ಹಾಗಾಗೇ ಬರದು ಬಿಟ್ಟೆ ಹೊ, ಅಯ್ಯರ್: ಏನ್ ಬರದೆ ಹೇಳೊ ಗೋತ್ರೋದ್ಧಾರಕ : ಚಂದ್ರಾ .. ಅಮಾನೆ ರಾತ್ರಿಲಿ ಮಸಿಮತ್ತೋಂಡಿರೋ ಓಡಿದ್ದಹಾಗಿರ್ತಾನ, ಆಮೇಲೆ ಎರಡು ಮೂರು ದಿನಗಳು ಕರ್ಜಿಕಾಯಿ ತರ ಇರ್ತಾನೆ. ಆಮೇಲೆ ಒಬ್ಬಟ್ ತರ ಆಗಿ, ಮುರುಕು ಹಪ್ಪಳತರ ಆಗಿ, ಕೊನೆಗೆ ಹುಣ್ಣಿಮೆ ರಾತ್ರಿ ದೋಸೆ ತರ ಇರ್ತಾನ, ನಕ್ಷತ್ರಗಳ ಗುನ್ಯಾಂಪಟ್ಟೆ ಮೇಲೆ ಹಾಕಿದ ಸಂಡಿಗೆ ತರ ಇರ್ತಾನೆ. ಮೋಡಗಳ ನೀರ್ಮಜ್ಜಿಗೆಯಲ್ಲಿ ತೃಡ ತರ ತೇಳ್ಕೊಂಡಿರ್ತಾನೆ ಅಂತಾ ಬರೆದೆ ಅಪ್ಪಯ್ಯ ಕೊನೆಗೆ ಮರ್ಯಾನ ಹೇಗಿರತ್ತೆ ಅಂತಾ ಕೇಳಿದ್ದು, ಆಡ ಕೂಡ ಬರದ ಬುಟ್ಟೆ ಅಪ್ಪಯ ಹೋ, ಅಯ್ಯರ್ : ಏನ್ ಬರ್ದಿದಿಯೋಪ್ಪಾ ನಂಗೇನೋ ಅನುಮಾನ, ಪರೀಕೇಲಿ ಪ್ರಶ್ನೆ ಕೇಳಿದರೆ , ಹೋಟೆಲ್ ಗೆ ಹೋಟೆಲ್ಗೆ ಕಾಗದದ ಮೇಲೆ ಕುಕ್ಕ ಹಾಕ್ಕುಟ್ಟು ಬಂದಿದಿಯಲ್ಲಾ ... ಹುರ

ಸೂರ್ಯಾಸ್ತಮ ಹೇಗಿತ್ತು ಅಂತ ಬರದೇ ? ಗೋ ಸೂರ್ಯಾಸ್ತಮನಾ ಮಜ್ಜೆ ಹುಳಿಲಿ ಕೇಸರಿಭಾತ್ ಮುದ್ದೆ ತೇಳ್ಕೊಂಡಿರೋ ತರ ಇದೆ ಅಂತಾ ಬರ್ದ |

{ ಇಲ್ಲಿಗೆ ಈ ಸಂವಾದ ಕೊನೆಗೊಳ್ಳುತ್ತದೆ.)

ಶಾಂತಾ ನಾಗಮಂಗಲ

ಬಾಳಿಗೆ ಚೈತ್ರ ಬಂತು

ಬಾಳಿಗೆ ಚೈತ್ರ ಬಂತು ಮರಳಿ
ಘಮಘಮಿಸಿದೆ ಚಿತ್ತ ಅರಳಿ
ಆಸೆ ಕೆರಳುತ್ತ ಕರೆವ ಸಮಯ
ನಂದನವಾಗಿದೆ ಹೃದಯ.

ಸಂದಬಾಳ ನೋವ ಕಳೆದು
ಮುಂಬದುಕಿನ ತವಕ ಅಳಿದು
ಈ ಗಳಿಗೆಯ ಮುದವ ಹೀರಿ
ಜೀವ ನಲಿದಿಹುದು ಜಗವ ಮೀರಿ

ನೆಲವ ಕೀಟ ಕೊರೆವ ತರಹ
ನಮ್ಮೆಲ್ಲರ ಹಣೆಯ ಬರಹ.
ಒಂದರೆ ಚಣ ಮಣ್ಣ ಹೀಸಿ
ಬಾನಿಗೇರೋಣ ರೆಕ್ಕೆ ಬೀಸಿ

ಬಾಳಿಗೆ ಚೈತ್ರ ಬಂತು ಮರಳಿ.

ದ.ರಾ.ಬೇಂದ್ರೆ

ಕವನ ವಾಚಿಸಿದವರು - ಮಾಲತಿ ಶ್ರೀನಿವಾಸನ್

ಕರೋನ ಕರೋನ

ಕರೋನ ಕರೋನ ಕರೋನ ...
ಸಂವತ್ಸರದ ಆದಿಯಲ್ಲೇ ನಿನ್ನಾಗಮನ,
ವಿಪರೀತವಾಯಿತು ನಿನ್ನ ಉದ್ಧಟತನ ,
ನಿನ್ನಿಂದಾಗಿ ವಿಶ್ವದೆಲ್ಲೆಡೆ ರೋಧನ,
ಅಸ್ತವ್ಯಸ್ತವಾಯಿತು ಜನಜೀವನ ,
ಕಾಳ್ಗಿಚ್ಚಿನಂತಾವರಿಸಿಹೆ ನೀ ದೇಶದ ಮೂಲೆಮೂಲೆಯನ್ನ.   (೧)

ಬಾವುಲಿಯ ನುಂಗಿದ ಹಾವನ್ನು ತಾವ್ ನುಂಗಿ,
ಬಂದ ಮಾರಿಯನು ಜಗದಿಂದ ಮರೆಮಾಡಿ,
ಮುಗ್ಧತೆಯಿಂದಿರುವ ನಾಟಕವನಾಡಿ,
ಮಹಮಾರಿ ಪ್ರಪಂಚದೆಲ್ಲೆಡೆ ಹರಡುವಂತೆ ಮಾಡಿ,
ಜನ ಸಾಮಾನ್ಯರ ದಿಗ್ಭ್ರಮೆಗೆ ದೂಡಿ,
ಕುಳಿತ ಚೀನಾದ ಪರಿಯನ್ನ ನೋಡಿ !!!   (೨)

ಕಾಡ್ಗಿಚ್ಚಿನಂತೆ ಹರಡಿತು ಈ ಕರೋನ,
ಅನುಮಾನ ಬಂದ ಜನರಿಗಾಯಿತು ಕ್ವಾರಂಟೈನ ,
ಹಗಲಿರುಳು ಶ್ರಮಿಸಿ ಸಲಹಿದ ವೈದ್ಯ ,ದಾದಿ ಆರಕ್ಷಕರಿಗೆ ನಮನ ,
ದೇಶಾದ್ಯಂತ ಬಾರಿಸಿತು ಘಂಟೆ ಗಣ ಗಣ ,
ಮನೆ ಮನೆಯಲ್ಲಾಯಿತು ಸಾಲು ದೀಪರಾಧನ
ಆಗಸದಿಂ ಮಳೆಗರಿಯಿತು ಯೋಧರಿಗೆ ಪುಷ್ಪಾರ್ಚನ   (೩)

ಶುದ್ಧತೆಯ ಪಾಲನೆಗೆ ನೀ ಸೋಲಲೇಬೇಕು,
ಸಾಮಾಜಿಕ ಅಂತರಕೆ ನೀ ಮಣಿಯಲೇ ಬೇಕು,
ಸಾಧು ಸಂತರ ಹರಕೆ, ಬೇಡಿಕೆ ಈಡೇರಲೇಬೇಕು,
ಹಗಲಿರುಳು ಶ್ರಮಿಸುತಿಹ ಯೋಧರ ಶ್ರಮ ಫಲಿಸಬೇಕು,
ಹೇಳಹೆಸರಿಲ್ಲದೆ ನೀ ಈ ಜಗದಿಂದ ತೊಲಗಬೇಕು ,
ಜನ ಜೀವನವೆಂದಿನಂತೆ ಸುಖಮಯವಾಗಬೇಕು,
ಹೊರಟುಹೋಗು ಕರೋನ .. ನೀ ಹಿಂದುರಿಗಿ ನೋಡದೆ ಹೊರಟುಹೋಗು (೪)

ಮನೋರಮಾ ವಿ ಕೆ

ಬೆಳಕು

ಜೀವವೊಂದು
ಕತ್ತಲಲ್ಲಿ
ಬೆಳಕನರಸುತ್ತಾ, ಅರಸುತ್ತಾ,
ಸುತ್ತ ಢಿಕ್ಕಿ ಹೊಡಿಯುತ್ತಾ,
ಎಲ್ಲಿಹೋದರಲ್ಲಿ ಗೋಡೆಗಳು.
ಬೆಳಕಿನೊಂದು ಕಿರಣ ದಾಟದ ಗೋಡೆಗಳು!
ಆದರೂ
ಸೋಲಿಲ್ಲದ, ಸೋಲಲೊಲ್ಲದ
ಭರವಸೆಯನಪ್ಪಿದ ಜೀವ.

ಬೆಳಕು ಹೊರಗಡೆ ಇಲ್ಲ!
ತನ್ನೊಳಗೇ ಬಚ್ಚಿಟ್ಟಿದನ್ನು
ತೆರೆತೆರೆದರೆ
ಬತ್ತದ ಆಶ್ವಾಸನೆ,
ತೆರೆದಷ್ಟೂ
ಸುರಿಸುರಿವ
ಬೆಳದಿಂಗಳು.
ಏನು ಬೇಕು? ಎಷ್ಟು ಬೇಕು?
ಎಲ್ಲೇಕೆ ಹೋಗಬೇಕು?

ವಿಪರ್ಯಾಸ

ವಿಪರ್ಯಾಸ
ಇದು ಪುಣ್ಯ ಭೂಮಿಯೇ ನಿಜ!
ಆದರೂ ಇಲ್ಲಿ ಬಿತ್ತಿದ್ದೆಲ್ಲಾ ಬೆಳೆಯಾಗಲಿಲ್ಲ!
ಕಿತ್ತಂತೆಲ್ಲಾ ಕಳೆಯೂ, ಬೆಳೆಯೂ,
ಕಡೆದಂತೆಲ್ಲಾ ಅಮೃತವೂ, ವಿಷವೂ,
ಶುಭ, ಅಶುಭ,
ಸಮ ಅಸಮಗಳ ಸಂತೆ,
ವಿಪರ್ಯಾಸಗಳ ಕಂತೆ!

ದೇವರೊಂದೇ, ನಾಮ ಹಲವು ಎನ್ನುತ್ತಲೇ,
ನಾಮಕ್ಕಾರು, ಸಾವಿರಾರು
ಗುಡಿಯೆಬ್ಬಿಸುತ್ತಲೇ ಇರುತ್ತೇವೆ.

ಸರ್ವಾಂತರ್ಯಾಮಿ ಎನ್ನುತ್ತಲೇ
ವಿಗ್ರಹಗೊಳಿಸಿ
ಬಂಧಿಸಿದ್ದೇವೆ.
ಆತ್ಮ-ಪರಮಾತ್ಮ ಎಂದು ವಿಶ್ಲೇಷಿಸುತ್ತಲೇ
ಸಂಬಂಧಗಳ ಆಪೋಷನ ತೆಗೆದುಕೊಳ್ಳುತ್ತೇವೆ.

ಎಲ್ಲ ಜೀವಿಗಳಲ್ಲಿ
ನೆಲೆಸಿಹನು ಪರಮಾತ್ಮ ಎನ್ನುತ್ತಲೇ
ಮನುಜ ಮನುಜನ ನಡುವೆ
ಅಸ್ಪೃಶ್ಯತೆಯ ಕೊಳಕ
ಸುರಿಯುತ್ತೇವೆ.
ಆದರೂ
ಇದು ಪುಣ್ಯ ಭೂಮಿಯೇ ನಿಜ.

ಸರಸ್ವತಿ ನಟರಾಜ್